ಏನೆಂಬುದನ್ನು ನಾವೆಲ್ಲರೂ ಇಟ್ಟಾಗಿ ಹೋಗಿ ಮೊದಲಬಾರಿಗೆ ವಿಚಾರಿಸಿ ಅವರ ಕಷ್ಟ ಸುಖಗಳಿಗೆ ಸ್ಪಂದಿಸೋಣ. ನಾನು ಮುಂದಿನ ತಿಂಗಳ ಮೊದಲನೇ ವಾರದಿಂದ ಒಂದು ತಿಂಗಳು ರೈತರ ಮಧ್ಯೆ ಹಳ್ಳಿಯಲ್ಲಿಯೇ ಇದ್ದು, ಈ ಯೋಜನೆಗಳೆಲ್ಲವನ್ನು ನಾವು ತಂದಿದ್ದೇವು, ಅಧಿಕಾರಿಗಳು ತಿಂದು ಹಾಕುವುದಕ್ಕೆ ಬಿಡಬೇಡಿ ಮತ್ತೆ ಯಾರಿಗೂ ಸಹ ಒಂದು ರೂಪಾಯಿ ಲಂಚ ಕೊಡಬೇಡಿ ಎಂದು ಮತ್ತು ನಿಮ್ಮ ಬ್ಯಾಂಕ್‌ನಲ್ಲಿ ಹಣ ಜಮಾ ಮಾಡುತ್ತಿದ್ದೇವೆ. ಆ ಹಣವನ್ನು ಉಪಯೋಗ ಮಾಡಿಕೊಂಡು ನೆಮ್ಮದಿಯಿಂದ ಬದುಕಿ ನಾವು ನಿಮ್ಮ ಜೊತೆ ಈ ಸಂದರ್ಭದಲ್ಲಿ ಇದ್ದೇವೆಂದು ಹೇಳೋಣ. ಮಳೆ ಬಂದು ಕೆರೆ ಕಟ್ಟೆ, ಜಲಾಶಯಗಳು ತುಂಬಿದರೂ ಸಹ ಈಗ ಆಗಿರುವ ತೀರ್ಮಾನದಲ್ಲಿ ಹಿಂದೆ ಹೋಗಬಾರದು. ಆದ್ದರಿಂದ, ತಾವು ರಿಪ್ಲೈ ಮಾಡುವಂಥ ಸಂದರ್ಭದಲ್ಲಿ ಸ್ಪಷ್ಟವಾಗಿ ಈ ಮನೆಯ ಮೂಲಕ ನಾಡಿನ 6 ಕೋಟಿ ಜನರಿಗೆ ಈ ಸಂದೇಶ ಕಳುಹಿಸಬೇಕೆಂದು ಸರ್ಕಾರಕ್ಕೆ ಒತ್ತಾಯ ಮಾಡಿ ನನ್ನ ಮಾತನ್ನು ಮುಗಿಸುತ್ತೇನೆ.

ಅಧ್ಯಕ್ಷರು: ಈಗ ಸದನವನ್ನು ಮಧ್ಯಾಹ್ನ 2 ಗಂಟೆ 45 ನಿಮಿಷ ಸೇರುವಂತೆ ಮುಂದೂಡಲಾಗಿದೆ.

(ಸದನವನ್ನು ಮಧ್ಯಾಹ್ನ 2 ಗಂಟೆ 4 ನಿಮಿಷಕ್ಕೆ ಮುಕ್ತಯಗೊಂಡು ಪುನಃ ಮಧ್ಯಾಹ್ನ 2 ಗಂಟೆ 45 ನಿಮಿಷಕ್ಕೆ ಸೇರಲು ನಿಶ್ಚಯಿಸಿತು)

(ಸದನದ ಕಲಾಪವು ಮಧ್ಯಾಹ್ನ 3.17 ಗಂಟೆಗೆ ಪುನಃ ಪ್ರಾರಂಭವಾದಾಗ ಮಾನ್ಯ ಉಪಾಧ್ಯಕ್ಷರು ಅಧ್ಯಕ್ಷ ಪೀಠವನ್ನು ಅಲಂಕರಿಸಿದ್ದರು)

ಉಪಾಧ್ಯಕ್ಷರು: ಈಗ ಒಂದು ಪ್ರಕಟಣೆ ಇದೆ. ದಿನಾಂಕ 24.7.2012 ರ ಮಂಗಳವಾರದಂದು ಬೆಳಿಗ್ಗೆ 10.00 ರಿಂದ 11.00 ಗಂಟೆಯವರೆಗೆ ವಿಧಾನಸೌಧದ ಬ್ಯಾಂಕ್ವೆಟ್ ಹಾಲ್‌ನಲ್ಲಿ Institute of public Health ಸಂಸ್ಥೆಯವರು ತಂಬಾಕು ಸೇವನೆಯಿಂದ ಆರೋಗ್ಯದ ಮೇಲೆ ಉಂಟಾಗುವ ದುಷ್ಪರಿಣಾಮಗಳ ಬಗ್ಗೆ ಮಾನ್ಯ ಸಚಿವರುಗಳಿಗೆ, ಶಾಸಕರುಗಳಿಗೆ ಅರಿವು ಮೂಡಿಸುವ ಸಲುವಾಗಿ ಜಾಗೃತ ಕಾರ್ಯಕ್ರಮವನ್ನು ಆಯೋಜಿಸಿರುತ್ತಾರೆ. ಸದರಿ ಕಾರ್ಯಕ್ರಮದಲ್ಲಿ ತಾವುಗಳೆಲ್ಲರೂ ಭಾಗವಹಿಸಿ ಕಾರ್ಯಕ್ರಮವನ್ನು ಯಶಸ್ವಿಗೊಳಿಸಬೇಕೆಂದು ಈ ಮೂಲಕ ಮಾನ್ಯ ಸದಸ್ಯರುಗಳನ್ನು ಕೋರಲಾಗಿದೆ.

ಈಗ ಶ್ರೀ ಕೆ.ಎಂ. ಶಿವಲಿಂಗೇಗೌಡರೇ ಮಾತನಾಡಿ.

ನಿಯಮ 69ರ ಮೇರೆಗೆ ಸಾರ್ವಜನಿಕ ಮಹತ್ವದ ಜರೂರು ವಿಷಯದ ಬಗ್ಗೆ ಅಲ್ಪ ಕಾಲಾವಧಿ ಚರ್ಚೆ.

ವಿಷಯ: ಬರ ಪರಿಸ್ಥಿತಿ ಬಗ್ಗೆ ಮುಂದುವರೆದ ಚರ್ಚೆ:

ಶ್ರೀ ಕೆ.ಎಂ.ಶಿವಲಿಂಗೇಗೌಡ(ಅರಸೀಕೆರೆ): ಈ ದಿವಸ ಕರ್ನಾಟಕ ರಾಜ್ಯದ ಸುಮಾರು 125 ರಿಂದ 150 ತಾಲ್ಲೂಕುಗಳಲ್ಲಿ ಏನೊಂದು ಬರದ ಛಾಯೆ ಮೂಡಿ ಸುಮಾರು ಕೆಲವು ತಾಲ್ಲೂಕುಗಳಲ್ಲಿ ಒಂದು ವರ್ಷದಿಂದ ಬರದ ಛಾಯೆ ಇದೆ. ಕೆಲವು ತಾಲ್ಲೂಕುಗಳಲ್ಲಿ ಆರು ತಿಂಗಳುಗಳಿಂದ ಮುಂಗಾರು ಕೈಕೊಟ್ಟಿರುವುದರಿಂದ ಬರದ ಛಾಯೆ ಪ್ರಾರಂಭವಾಗಿದೆ. ಬಹಳ ಹಿಂದಿನಿಂದಲೂ, ನಾವು ಸಣ್ಣ ಹುಡುಗರಾಗಿದ್ದಾಗಿನಿಂದಲೂ ಬರ ಪರಿಸ್ಥಿತಿಯನ್ನು ನೋಡಿದ್ದೇವೆ. ಅಮೆರಿಕಾದಿಂದ ಕೆಂಪು ಜೋಳ ತಂದುಕೊಟ್ಟು ಜನರನ್ನು ಉಳಿಸಿಕೊಳ್ಳುತ್ತಿದ್ದರು. ಕೆಂಪು ಜೋಳವನ್ನು ಸೊಸೈಟಿ ಮಾಡಿ ತಂದು ಹಂಚಿ ಜನಗಳಿಗೆ ಊಟಕ್ಕೆ ವ್ಯವಸ್ಥೆ ಮಾಡುತ್ತಿದ್ದರು. 1966-67 ರಲ್ಲಿ ನಾವು ಬಹಳ ಚಿಕ್ಕ ಹುಡುಗರು. ಸೊಸೈಟಿಯಲ್ಲಿ ಒಬ್ಬರಿಗೆ ಎರಡೇ ಕೆ.ಜಿ. ಕೊಡುವುದು ಎಂದು ಹೇಳುತ್ತಿದ್ದರು. ಆಗ ನಮ್ಮನ್ನೆಲ್ಲಾ ಕರೆದುಕೊಂಡು ಹೋಗಿ ಎರಡೆರಡು ಕೆ.ಜಿ. ಜೋಳ ಪಡೆಯಲು ಕ್ಯೂನಲ್ಲಿ ನಿಲ್ಲಿಸುತ್ತಿದ್ದರು. ಅಂಥ ಪರಿಸ್ಥಿತಿ ನೋಡಿದ್ದೆವು. ಶುಂಠಿ ಮತ್ತು ಮರದ ಸೊಪ್ಪು ಕಡಿದುಕೊಂಡು ಬಂದು ದನಗಳಿಗೆ ಕತ್ತರಿಸಿ ಹಾಕಿದಂಥ ನಿದರ್ಶನಗಳನ್ನು ಅಂದಿನ ಕಾಲದಲ್ಲಿ ನಾವು ನೋಡಿದ್ದೆವು. ಅಂಥ ಭೀಕರವಾದ ಬರಗಾಲ ಯಾರ ಕ್ಷೇತ್ರದಲ್ಲಿ ಇದೆಯೋ ಇಲ್ಲವೋ ನನ್ನ ಕ್ಷೇತ್ರದಲ್ಲಿದೆ. ಇವತ್ತು ಸುಬಾಬುಲ್ ಸೊಪ್ಪನ್ನು ರಸ್ತೆಯಲ್ಲಿ ಕಡಿದು ದನಗಳಿಗೆ ತಿನ್ನಿಸುವಂಥ ಪರಿಸ್ಥಿತಿ ನಿರ್ಮಾಣವಾಗಿದೆ. ಆದರೆ ಎಲ್ಲೋ ಒಂದು ಕಡೆ ಸರ್ಕಾರ ಬರ ಬಂದಿದೆಯೇ ಇಲ್ಲವೋ ಎನ್ನುವ ರೀತಿಯಲ್ಲಿ ನಿರ್ಲಕ್ಷ್ಯ ಭಾವನೆಯನ್ನು ತೋರುತ್ತಿರುವ ರೀತಿಯಲ್ಲಿ ನೀಡಿದರೆ, ನಿಜವಾಗಿಯೂ ಅಧಿಕಾರಕ್ಕೆ ಬರಬೇಕಾದರೆ ನಾವೆಲ್ಲ ಜನರ ಕಷ್ಟ ಸುಖಗಳನ್ನು ನಿವಾರಣೆ ಮಾಡುತ್ತೇವೆಂದು ಪ್ರಮಾಣ ವಚನ ಮಾಡಿ.ಸಾರ್ವಭೌಮತ್ವವನ್ನು ಎತ್ತಿ ಹಿಡಿಯುತ್ತೇವೆ, ಈ ದೇಶದ ಎಲ್ಲ ಜನಗಳನ್ನು ಬಹಳ ಸಂತುಷ್ಟವಾಗಿ ನೋಡಿಕೊಳ್ಳುತ್ತೇವೆಂಬ ಮಾತನ್ನು ಹೇಳಿ ಅಧಿಕಾರಕ್ಕೆ ಬಂದು, ಇವತ್ತು ನಿಜವಾಗಲೂ ಅವರು ನಡೆದುಕೊಳ್ಳುತ್ತಿರುವ ರೀತಿ ನೀತಿಗಳನ್ನು ನೋಡಿದರೆ ಬಹಳ ವ್ಯಸನವಾಗುತ್ತದೆ. ಈ ಸಂದರ್ಭದಲ್ಲಿ ತಾಲ್ಲೂಕು ಟಾಸ್ಕ್‌ಫೋರ್ಸ್ ಸಮಿತಿಯ ಅಧ್ಯಕ್ಷರನ್ನಾಗಿ ಶಾಸಕರನ್ನು ಮಾಡಿದ್ದೀರಿ. ಸಂವಿಧಾನದ ಚೌಕಟ್ಟಿನಲ್ಲಿ ಮಾಡಿದ್ದೀರಿ, ಆದರೆ ನಾವು ಅಧ್ಯಕ್ಷರಾಗಿ ಕಾರ್ಯವನ್ನು ನಡೆಸತಕ್ಕ ಕಾಲದಲ್ಲಿ ನಮಗೆ ಮೇಲಿದ್ದ ಜಿಲ್ಲಾಧಿಕಾರಿಗಳನ್ನು ಸಹ ಇಟ್ಟಿದ್ದೀರಿ ಸಂತೋಷ. ಆದರೆ ಜಿಲ್ಲಾಧಿಕಾರಿಗಳು ರಾಜ್ಯ ಸರ್ಕಾರದಿಂದ ಬಂದಂತಹ ಅಲ್ಪಸ್ವಲ್ಪ ಹಣವನ್ನು ಶಾಸಕರಿಗೆ ಕೊಡುವುದಕ್ಕೆ ಹಿಂದೆಮುಂದೆ ನೋಡುತ್ತಾರೆ.

ನಮ್ಮ ಮಾನ್ಯ ಕಂದಾಯ ಸಚಿವರು ಹಾಗೂ ಮಾನ್ಯ ಗ್ರಾಮೀಣಾಭಿವೃದ್ಧಿ ಸಚಿವರು ಇದನ್ನು ಅರ್ಥ ಮಾಡಿಕೊಳ್ಳಬೇಕು. ಬರದ ಪೂರ್ಣ ಜವಾಬ್ದಾರಿ ಅವರುಗಳ ಮೇಲೆ ಬಿದ್ದಿದೆ. ಎಲ್ಲವೂ ಸಂಪೂರ್ಣವಾಗಿ ಅವರ ಹತ್ತಿರ ಅಡಕವಾಗಿದೆ. ಆದುದರಿಂದ ನಮ್ಮ ಮಾನ್ಯ ಈಶ್ವರಪ್ಪನವರು ನಿಜವಾಗಲೂ ಹೇಳಬೇಕೆಂದರೆ ಇವತ್ತಿನ ದಿನ ಇದೊಂದು ರೀತಿ ಯುದ್ಧ, ಈ ಯುದ್ಧದಲ್ಲಿ ಈ ಸಮರವನ್ನು ಯಾವ ರೀತಿ ನಿಭಾಯಿಸುತ್ತಾರೆಂಬುದು ಬಹಳ ಪ್ರಮುಖವಾಗಿರತಕ್ಕಂತ ಅಂಶ. ಇವತ್ತು ನಾವು ಗ್ರಾಮೀಣ ಪ್ರದೇಶದಲ್ಲಿ ಗ್ರಾಮೀಣ ಜನತೆಯಲ್ಲಿ ಬಹಳ ನಿಕಟವಾದ ಸಂಪರ್ಕವನ್ನು 75 ರಿಂದ 90 ಭಾಗ ಗ್ರಾಮೀಣ ಪ್ರದೇಶಗಳಿಗೆ ಸೀಮಿತವಾಗಿರುವ ನಮ್ಮ ಕ್ಷೇತ್ರಗಳಲ್ಲಿ ಇವತ್ತು ಯಾವ ರೀತಿ ವ್ಯವಹರಿಸುತ್ತಿದ್ದೇವೆ ಜನಗಳ ಮಧ್ಯದಲ್ಲಿದ್ದೇವೆ ಎಂಬುದನ್ನು ತಾವು ಸ್ವಲ್ಪ ಅರ್ಥ ಮಾಡಿಕೊಳ್ಳಬೇಕು. ಇವತ್ತು ಕುಡಿಯುವ ನೀರಿಗೆ ಬೋರ್‌ವೆಲ್ ಕೊರೆಸುವುದಕ್ಕೆ ಹಣ ಕೊಡುತ್ತೀರಿ. ಆದರೆ ಸೆಂಟ್ರಲ್ CRF ನಿಂದ ಬರತಕ್ಕಂತ ಫಂಡ್‌ನಲ್ಲಿ only deepening ಮಾಡಬಹುದು. ಯಾವುದೇ ಕಾರಣಕ್ಕೂ ಹೊಸ ಬಾವಿಗಳನ್ನು ಕೊರೆಸುವ ಹಾಗಿಲ್ಲವೆಂದು ನಿಬಂಧನೆಗಳನ್ನು ಹಾಕಿ ಕೊಡುತ್ತೀರಿ.ಅಲ್ಲಿ ನದಿ ಯಾವುದೇ ಕಾರಣದಿಂದ ಡೀಪನಿಂಗ್ ಮಾಡಿದರೂ ಸಹ ನೀರು ಬರುವುದಿಲ್ಲ ಏನು ಮಾಡಬೇಕು? ಹೊಸ ಮೂಲಗಳನ್ನು ಹುಡುಕಿಕೊಂಡು ನಾವು ಹೋಗಬೇಕು. ಹೊಸ ಮೂಲಗಳನ್ನು ಹುಡುಕಿಕೊಂಡು ಬೇರೆ ರೀತಿ ಸರ್ವೆ ಮಾಡಿಸಿ ಬೋರ್‌ವೆಲ್ ಕೊರೆಸುವುದಕ್ಕೆ ಶಾಸಕರಿಂದ ಸಾಧ್ಯವಿಲ್ಲ. ಇದು ಒಂದು ಮೂಲ–ಭೂತವಾಗಿರುವ ಪ್ರಶ್ನೆ. ಇದನ್ನು ಸರ್ಕಾರ ಗ್ರಾಮೀಣಾಭಿವೃದ್ಧಿ ಇಲಾಖೆಯಿಂದ ಒಂದು ವೇಳೆ ಡೀಪನಿಂಗ್ ಮಾಡಿದ ತಕ್ಷಣ ಆ ಊರಿನಲ್ಲಿ ನೀರು ಬರದೇ ಹೋದ ಪಕ್ಷದಲ್ಲಿ ಆ ಗ್ರಾಮದಲ್ಲಿ, ಗ್ರಾಮೀಣಾಭಿವೃದ್ಧಿ ಇಲಾಖೆಯಿಂದ ಇಷ್ಟು ಹಣವನ್ನು ಕೊಡುತ್ತೇವೆ. ನೀವು ಹೊಸದಾಗಿ ಬೋರ್‌ವೆಲ್ ಗಳನ್ನು ಕೊರೆಸಿಕೊಳ್ಳಿ ಎಂಬ ನಿರ್ದೇಶನಗಳನ್ನು ರಾಜ್ಯ ಸರ್ಕಾರದಿಂದ ಇವತ್ತು ಜಿಲ್ಲಾಧಿಕಾರಿಗಳಿಗೆ ಕೊಡಬೇಕಾಗಿರುವುದು ಬಹಳ ಪ್ರಮುಖವಾಗಿರುವ ಅಂಶ ಎಂಬ ಮಾತನ್ನು ಹೇಳುವುದಕ್ಕೆ ಈ ಸಂದರ್ಭದಲ್ಲಿ ಬಯಸುತ್ತೇನೆ. ಇವತ್ತು ಜಿಲ್ಲಾಧಿಕಾರಿಗಳು ಹಣವನ್ನು ನಮಗೆ ಕಾಲಕ್ಕೆ ಸರಿಯಾಗಿ ಬಿಡುಗಡೆ ಮಾಡದೆ ಇರತಕ್ಕದ್ದು ಇದರಿಂದ ನಮ್ಮ ಶಾಸಕರ ಅಧ್ಯಕ್ಷತೆಯಲ್ಲಿ ಇರತಕ್ಕಂತ ಟಾಸ್ಕ್‌ಫೋರ್ಸ್ ಸಮಿತಿಯ ಕಾರ್ಯಾಚರಣೆ ಮಾಡುವುದಕ್ಕೆ ಸಾಧ್ಯವಾಗುತ್ತಿಲ್ಲ. ಶಾಸಕರಾದ ನಾವು ಆ ಜನಗಳ ಮಧ್ಯದಲ್ಲಿ ಇರತಕ್ಕಂತಹವರು ನಮ್ಮನ್ನೇ ನೀವು ನಂಬದೇ

ಜಿಲ್ಲಾಧಿಕಾರಿಗಳನ್ನು ನಂಬುತ್ತೀವೆಂದರೆ ನಾವು ಏನು ಮಾಡಬೇಕು? ನಾವೇನು ದುಡ್ಡನ್ನು ಹೊಡೆದು ತಿನ್ನುವುದಕ್ಕೆ ಬಂದಿದ್ದೇವೆಯೆ? ದಯವಿಟ್ಟು ಶಾಸಕರನ್ನು ನಂಬಿ ಅವರನ್ನು ಕಾರ್ಯಚರಣೆಗೆ ಬಿಡಿ.ಬರದ ಹಣವನ್ನು ತಿನ್ನುವ ಪರಿಸ್ಥಿತಿಗೆ ಯಾವ ಶಾಸಕರೂ ತಲುಪಿಲ್ಲ. ಜಿಲ್ಲಾಧಿಕಾರಿಗಳು 15 ದಿವಸಗಳು ಆಗುತ್ತದೆ ಜಿಲ್ಲಾ ಉಸ್ತುವಾರಿ ಸಚಿವರಿಗೆ ಪತ್ರ ನಾವು ಬರೆದಿದ್ದೇವು. ಆ ಪತ್ರ ಬಂದ ನಂತರ ಹಣ ಬಿಡುಗಡೆ ಮಾಡುತ್ತೇವೆಂದು ಹೇಳುತ್ತಾರೆ. ಆದರೆ ಜಿಲ್ಲಾ ಉಸ್ತುವಾರಿ ಸಚಿವರು ಅಲ್ಲಿ ನಾಪತ್ತೆ. ಅವರು ಬರದಿದ್ದರೆ ನಾವು ಏನು ಮಾಡಬೇಕು.? ಇಂತಹ ಪರಿಸ್ಥಿತಿ ಇವತ್ತು ನಮಗೆ ಬಂದಿದೆ. ಇವತ್ತು ಜನರಿಗೆ ನೀರಿಲ್ಲ. ಅವರು ನೀರನ್ನು ಎಲ್ಲಿಂದ ತರಬೇಕು? ಅವರಿಗೇನಾದರೂ ಪರಿಹಾರ ಕಂಡು ಹಿಡಿಯಬೇಕಾದುದು ನಮ್ಮ ಕರ್ತವ್ಯವಲ್ಲವೇ? ನಮ್ಮ ನಿಮ್ಮ ಎಲ್ಲರ ಕರ್ತವ್ಯವಿದೆ. ಆ ಕರ್ತವ್ಯವನ್ನು ನಾವು ಮಾಡಬೇಕೆಂದರೆ ನೀವು ದಯವಿಟ್ಟು ಸ್ವಲ್ಪ ಹೆಚ್ಚಿನ ರೀತಿಯಲ್ಲಿ ಶಾಸಕರ ಸಹಕಾರಕ್ಕೆ ನಿಲ್ಲಬೇಕೆಂಬ ಮಾತನ್ನು ಮಾನ್ಯ ಕಂದಾಯ ಮತ್ತು ಮಾನ್ಯ ಮುಖ್ಯಮಂತ್ರಿಗಳ ಬಳಿ ಈ ಸಂದರ್ಭದಲ್ಲಿ ಬಿನ್ನಹ ಮಾಡಿಕೊಳ್ಳುತ್ತೇನೆ. ಮೇವಿಲ್ಲ ಮೇವಿಲ್ಲವೆಂದು ಎರಡು ತಿಂಗಳುಗಳಿಂದ ಹೇಳುತ್ತಿದ್ದೇವೆ. ಆದರೆ ಮೇವನ್ನು ತರುವ ಪರಿಸ್ಥಿತಿಯನ್ನು ನೀವು ಮಾಡುತ್ತಿಲ್ಲ. ಮೇವು ಹೇಗೆ ಬರುತ್ತದೆ? ಪಂಪ್‌ಹೌಸ್ ಇಟ್ಟುಕೊಂಡು ಅದರಲ್ಲಿ ಕೊಡುವ ಎರಡು ಗಂಟೆಗಳ ಕರೆಂಟ್‌ನಲ್ಲಿ ಮೇವು ಬೆಳೆಯುವ ರೈತರು ಮೇವನ್ನು ಹಾಕುತ್ತಿದ್ದಾರೆ. ಇವತ್ತು ನಿಮಗೆ ಗೊತ್ತಿಲ್ಲ. ಮಾನ್ಯ ಕಂದಾಯ ಸಚಿವರು ತುಮಕೂರಿನಲ್ಲಿ ಸಭೆ ಮಾಡಿದರು. ಹಾಗೆ via,ಅದೇ ಮಾರ್ಗಅರಸೀಕೆರೆಗೆ ಬಂದರೆ ತೋರಿಸುತ್ತೇನೆ. ದಯವಿಟ್ಟು ಬನ್ನಿ ನಾವು ತೋರಿಸುತ್ತೇವೆ. ಇವತ್ತು ರೈತ ಒಂದೊಂದು ಹೊರೆ ಹುಲ್ಲಿಗೆ ಭಿಕ್ಷೆ ಬೇಡುತ್ತಿದ್ದಾನೆ. ನೋಡಪ್ಪ ನಾಳೆ ಅಥವಾ ನಾಡಿದ್ದು ಸರ್ಕಾರ ಹುಲ್ಲು ಕೊಡುತ್ತದೆ, ಹುಲ್ಲು ಬಂದಾಗ ಕೊಡುತ್ತೇನೆ. ಒಂದು ಹೊರೆ ಹುಲ್ಲು ಕೊಡು ಎಂದು ಭೀಕ್ಷೆ ಎತ್ತುವ ಪರಿಸ್ಥಿತಿಗೆ ತಂದಿದ್ದೀರಿ. ಎಷ್ಟು ದಿವಸವೆಂದು ಹೀಗೆ ಕಾಲಾಹರಣ ಮಾಡುತ್ತೀರಿ? ಏನಾದರೂ ಮಾಡಿ ಹುಲ್ಲನ್ನು ಖರೀದಿ ಮಾಡತಕ್ಕಂತಹ ವ್ಯವಸ್ಥೆಯನ್ನು ಮಾಡಿ. ಸಾಗಾಣಿಕೆ ವೆಚ್ಚವನ್ನು ಕೊಡುತ್ತೇವೆ ನೀವು ಖರೀದಿ ಮಾಡಿ ಎಂದು ಅಲ್ಲಿ ಹೇಳಿದಿರಿ. ಸಾಗಾಣಿಕೆ ವೆಚ್ಚವನ್ನು ಕೊಡುತ್ತೇವೆಂದು ನಾವು ನಿಘಂಟು ಮಾಡಿದೆವು. ಆದರೆ ಇವತ್ತು ನಿಮ್ಮ ಶಿವಮೊಗ್ಗಕ್ಕೆ ಹೋದರೂ ಹುಲ್ಲಿಲ್ಲ. ಕೆ.ಆರ್.ಪೇಟೆಯಲ್ಲಿ ಭತ್ತದ ಹುಲ್ಲು ಬೆಳೆಯುವವರು ಅಲ್ಲಿಗೆ ಹೋದರೂ ಅಲ್ಲಿ ಹುಲ್ಲಿಲ್ಲ. ನಾವು ಅದನ್ನು ದನಗಳಿಗೆ

ತಿನ್ನಿಸುವುದಿಲ್ಲ. ಆದರೆ ಇವತ್ತು ವಿಧಿಯಿಲ್ಲ ಸೊಪ್ಪು ತಿನ್ನುವ ಬದಲಿಗೆ ಆ ಭತ್ತದ ಹುಲ್ಲನ್ನು ಹಾಕೋಣವೆಂದು ಎಲ್ಲಾ ಕಡೆ ತಿರುಗಿದರೂ ಎಲ್ಲೂ ಇವತ್ತು ಹುಲ್ಲಿಲ್ಲ. ಒಂದು,ಮಾರು ಹುಲ್ಲಿಗೆ 20,000 ರೂ.ಗಳನ್ನು ಹೇಳುತ್ತಾರೆ. ಇವತ್ತು ಪರಿಸ್ಥಿತಿ ಹೇಗೆ ಬಂದಿದೆ ಎಂದರೆ ದನಗಳನ್ನು ತೆಗೆದುಕೊಂಡು ಹೋಗಿ ಕಟುಕರ ಕೈಗೆ ಮಾರಾಟ ಮಾಡುತ್ತಿದ್ದೇವೆ. ದಯಮಾಡಿ ಇದನ್ನು ತಾವು ಅರ್ಥ ಮಾಡಿಕೊಳ್ಳಬೇಕು. ಇವತ್ತು ನೀವೆಲ್ಲಾ ಗೋಮಾತೆಯನ್ನು ಪೂಜೆ ಮಾಡಿ ಅಧಿಕಾರಕ್ಕೆ ಬಂದಂತಹವರು. ಅದರಲ್ಲೂ ಬಿ.ಜೆ.ಪಿ. ಗೋಮಾತೆಗೆ ಹೆಚ್ಚಿನ ಪ್ರಾಶಸ್ತ್ಯ ಕೊಟ್ಟು ಬಂದಂತಹ ಪಕ್ಷ, ಸರ್ಕಾರ ನಿಮ್ಮದು. ನೀವು ಗಂಡಸಿ ಸಂತೆಗೆ ಗುರುವಾರ ಬನ್ನಿ ಎಷ್ಟು ಜೋಡಿ ಎತ್ತುಗಳನ್ನು ಇವತ್ತು ಮೇವಿಲ್ಲದೆ ಮಾರಾಟ ಮಾಡುತ್ತಿದ್ದಾರೆಂದು ತಿಳಿಯುತ್ತದೆ. ಆರು ತಿಂಗಳ ಹಿಂದೆ 50,000 ರೂ.ಗಳಿಗೆ ಮಾರುತ್ತಿದ್ದ ಎತ್ತನ್ನು ಇವತ್ತು 20,000, 10,000, 5,000 ರೂ.ಗಳಿಗೆ ಮಾರಾಟ ಮಾಡತಕ್ಕ ಪರಿಸ್ಥಿತಿ ಬಂದಿದೆ. ಮಾನ್ಯ ಈಶ್ವರಪ್ಪನವರು ಗಂಡಸಿ ಸಂತೆಯಲ್ಲಿ ಬಂದು ಎತ್ತುಗಳನ್ನು ತೆಗೆದುಕೊಂಡು ಹೋಗುತ್ತಿದ್ದರು. ಬಹಳ ಜೊತೆ ಎತ್ತುಗಳನ್ನುನಮ್ಮ ಸಂತೆಯಿಂದ ತೆಗೆದುಕೊಂಡು ಹೋಗಿರುವ ನಿದರ್ಶನಗಳಿವೆ;. ಆದರೆ ಇವತ್ತು ನಮ್ಮ ಗಂಡಸಿ ಸಂತೆಗೆ ಬನ್ನಿ ಎಷ್ಟು ಜೊತೆ ಎತ್ತುಗಳನ್ನು ಕಟುಕರಿಗೆ ಮಾರುತ್ತಿದ್ದಾರೆಂಬುದು ತಿಳಿಯುತ್ತದೆ. ಅವರೂ ಸಹ ಬೇಡ ಸಾಕಪ್ಪ ಎನ್ನುವ ಪರಿಸ್ಥಿತಿ ನಿರ್ಮಾಣ ವಾಗಿದೆ. ಗೋಮಾತೆಯನ್ನು ಈ ರೀತಿ ಕಣ್ಣೀರು ಹಾಕಿಸಿದರೆ ಯಾರಿಗೆ ಒಳ್ಳೆಯದಾಗುತ್ತದೆಂದು ನನಗೆ ಗೊತ್ತಿಲ್ಲ. ಇವತ್ತು ನಿಜವಾಗಲೂ ಗೋಮಾತೆಯನ್ನು ಯಾವ ಪರಿಸ್ಥಿತಿಗೆ ತಂದಿಟ್ಟಿದ್ದಾರೆ ಅದರಲ್ಲೂ ನಿಮ್ಮ ಪಕ್ಷದವರು ನಿಮ್ಮ ಸರ್ಕಾರದವರು ಗೋಮಾತೆಗಳಲ್ಲಿ ಕಣ್ಣೀರನ್ನು ಹಾಕಿಸಬಾರದು. ಇವತ್ತು ಕಣ್ಣೀರನ್ನು ಹಾಕಿಸುತ್ತಿದ್ದೀರಿ. ಇದು ನಿಮಗೆ ಒಳ್ಳೆಯದಾಗುವುದಿಲ್ಲ. ಒಂದು ನಿರ್ಧಾರವನ್ನು ತೆಗೆದುಕೊಳ್ಳಿ ಸುಮ್ಮನೆ ಭಾಷಣ ಮಾಡುವ ಅವಶ್ಯಕತೆಯಿಲ್ಲ. ಏನು ಮಾಡಿದರೂ ಅವಶ್ಯಕತೆಯಿಲ್ಲ. ಇವತ್ತು ಸಮರೋಪಾದಿಯಲ್ಲಿ ಯುದ್ಧಕ್ಕೆ ಆ ಕಡೆಯಿಂದ ಸೈನಿಕರು ಬಂದು ನಿಂತಾಗ ಇಲ್ಲಿ ಏನೋ ಯೋಚನೆ ಮಾಡುತ್ತಾ ಕೊರುವುದಿಲ್ಲ. ಇವತ್ತು ದನಕರುಗಳು ಮೇವಿಲ್ಲದೆ ಬರಿ ಗೊಂತಿನಲ್ಲಿ ಇರುವ ಪರಿಸ್ಥಿತಿ ಬಂದಿದೆ. ರಾತ್ರಿ ನಮ್ಮ ಮನೆಯಲ್ಲಿ ಬರಿ ಗೊಂತಿನಲ್ಲಿ ದನ ಇದ್ದವು ನಿಜವಾಗಿಯೂ ನನಗೆ ಊಟ ಮಾಡುವುದಕ್ಕೆ ಮನಸ್ಸು ಬರಲಿಲ್ಲವೆಂದು ಜನರು ಬೆಳಿಗ್ಗೆ ಎದ್ದುಬಂದು ಶಾಸಕರ ಮನೆಯಲ್ಲಿ ಹೇಳಿಕೊಳ್ಳುತ್ತಿದ್ದಾರೆ. ಅಂತಹ ಕಷ್ಟದ

ಪರಿಸ್ಥಿತಿ ಇರುವಾಗ ನೀವು ಯಾವ ರೀತಿ ಇದನ್ನು ವ್ಯವಹರಿಸಬೇಕು. ದಿನ ಈ ರೀತಿ ಅಧಿವೇಶನ ಮುಗಿಯಲಿ, ಮೂರನೇ ತಾರೀಖು ಎಂದರೆ ಅಲ್ಲಿಯವರೆಗೆ ದನಗಳು ಹಸಿದುಕೊಂಡು ಇರುವುದಾ? ಜಾನುವಾರುಗಳು ಹಸಿವಿನಿಂದ ಇರುವುದಾ? ಇವತ್ತು ನಾನು 36 ಗ್ರಾಮ ಪಂಚಾಯಿತಿಗಳನ್ನು ಸರ್ವೆ ಮಾಡಿಸಿ 36 ಗ್ರಾಮ ಪಂಚಾಯಿತಿಗಳಲ್ಲಿ ಸುಮಾರು 1,26,000 ಜಾನುವಾರುಗಳು ನನ್ನ ಕ್ಷೇತ್ರದಲ್ಲಿದ್ದಾವೆ. ಅದರಲ್ಲಿ 50,000 ಜಾನುವಾರುಗಳಿಗೆ ಇವತ್ತು ಮೇವಿರಬಹುದು. ಅದು ಪಂಪ್‌ಹೌಸ್‌ಗಳಲ್ಲಿ ಅಲ್ಲಿ ಇಲ್ಲಿ ಸ್ವಲ್ಪ ದಾಸ್ತಾನನ್ನು ಇಟ್ಟುಕೊಂಡಿರುವವರು ಇರಬಹುದು. ಆದರೆ ಇನ್ನೂ 70,000 ಜಾನುವಾರುಗಳು ಇವತ್ತು ಮೇವಿಲ್ಲದೇ ಸಾಯುವ ಪರಿಸ್ಥಿತಿ ಒದಗಿರತಕ್ಕ ಈ ಸಂದರ್ಭದಲ್ಲಿ ಬರೀ ಗ್ರಾಮ ಸಭೆಗಳಿಗೆ, ಗ್ರಾಮ ಪಂಚಾಯಿತಿಗಳಿಗೆ ಗ್ರಾಮೀಣ ಪ್ರದೇಶಗಳಿಗೆ ಹೋದರೆ, ಅಲ್ಲಿನ ಜನ ನೀವು ಏನೂ ಕೊಡಬೇಡಿ, ನಾವು ಹಸಿವಿನಿಂದ ಸತ್ತರೂ ಪರವಾಗಿಲ್ಲ. ಈ ರೋದನವನ್ನು ನೋಡುವುದಕ್ಕಾಗುವುದಿಲ್ಲ. ದಯವಿಟ್ಟು ಮೇವು ಕೊಡಿ. ಎಂದು ಕೂಗುತ್ತಾರಲ್ಲ ಆ ಪರಿಸ್ಥಿತಿಯನ್ನು ನೋಡುವುದಕ್ಕೆ ನೀವು ಬರಬಾರದೆ? ಈ ಸರ್ಕಾರ ಬಂದು ನೋಡದಿದ್ದರೆ ಅಷ್ಟೆಲ್ಲ ದನಗಳಿಗೆ ಮೇವನ್ನು ತಂದು ಹಾಕುವ ಶಕ್ತಿ ಶಾಸಕರುಗಳಿಗೆ ಇರುತ್ತದಾ? ದಯಮಾಡಿ ಇವತ್ತು ಇದನ್ನು ಬಹಳ ಹಗುರವಾಗಿ ತೆಗೆದುಕೊಳ್ಳಬೇಡಿ. ನಿಜವಾಗಿಯೂ ಗೋ ಶಾಪ ಒಳ್ಳೆಯದಲ್ಲ. ದನಕರುಗಳು ಮೇವು, ನೀರಿಲ್ಲದೆ ಸಾಯುತ್ತಿವೆ ಎನ್ನುವ ಭಾವನೆ ಬರುವುದು ಬೇಡ. ನಾನು ಮೊನ್ನೆ ಈಬಗ್ಗೆ ಲೆಟರ್ ಹಾಗೂ ಫೋಟೋಗಳನ್ನು ತಂದು ಕೊಟ್ಟಿದ್ದೇನೆ. ನೀರಿನ ಮೂಲ, ಹಳ್ಳ, ಕೊಳ್ಳ ಎಲ್ಲಿದೆಯೋ ಅಂತಹ ಕಡೆಗಳಲ್ಲಿ ಜೆ.ಸಿ.ಪಿ. ತೆಗೆದುಕೊಂಡು 10–20 ಅಡಿ ತೋಡಿಸಿದ ನಂತರ ಕೊಳ್ಳದಲ್ಲಿ ನೀರು ಬರುತ್ತಿದೆ. ಆದ್ದರಿಂದ ಹಳ್ಳ-ಕೊಳ್ಳಗಳಲ್ಲಿ. ಎಲ್ಲೆಲ್ಲಿ ಬೇಕೋ ಅಲ್ಲಲ್ಲಿ 50–100–200 ಅಡಿಗಳಷ್ಟು ತೋಡಿಸುವುದಕ್ಕೆ ಹೆಚ್ಚಿನ ರೀತಿಯಲ್ಲಿ ಹಣವನ್ನು ಕೊಡಬೇಕು. ಇವತ್ತು 40 ಲಕ್ಷ ರೂ.ಗಳನ್ನು ಕೊಟ್ಟು 560 ಹಳ್ಳಿಗಳಿಗೆ ನೀರು ಕೊಡಿ ಎಂದರೆ ಯಾವುದಕ್ಕೆ ಕೊಡುವುದು? ಹುಲ್ಲಿಗೆ ಸಾಗಾಣಿಕೆ ವೆಚ್ಚವನ್ನು ಯಾವ ರೀತಿ ಕೊಡುವುದು? ಏನು ಮಾಡುವುದು? ದಿನ ನಿತ್ಯದ ಶಾಸಕರ ಬವಣೆಯನ್ನು ಕೇಳುವವರು ಯಾರು? ದಯಮಾಡಿ ಸರ್ಕಾರ ಈ ನಿಟ್ಟಿನಲ್ಲಿ ಪ್ರಾಮಾಣಿಕವಾದಂತಹ ಪ್ರಯತ್ನವನ್ನು ಮಾಡಬೇಕು. ಶ್ರೀ ಅರವಿಂದ ಲಿಂಬಾವಳಿಯವರು ಈಗ ನಮ್ಮ ಜಿಲ್ಲೆಯ ಮಂತ್ರಿಯಾಗಿ ಎಂಟು ದಿವಸಗಳಾಗಿವೆ. ಜಿಲ್ಲಾ ಮಂತ್ರಿಗಳನ್ನು ನೋಡಿ ಬಹಳ ದಿವಸಗಳಾಯಿತು. ಶಾಸಕರಾದ ನಾಲ್ಕು

ವರ್ಷಗಳಲ್ಲಿ 2–3 ಸಾರಿ ಪ್ರಗತಿ ಪರಿಶೀಲನಾ ಸಭೆ ನಡೆಸಿದ್ದಾರೆ. ಅದು ಬಿಟ್ರೆ ಇನ್ನೇನು ಇಲ್ಲ. ಈ ಪರಿಸ್ಥಿತಿಯು ಶಾಸಕರಿಗೆ ಅಗೌರವ ತರುವಂತಹ ರೀತಿಯದ್ದಾಗಿದೆ. ಈ ರೀತಿ ಮಾಡಬಾರದು ದಯಮಾಡಿ ತಕ್ಷಣವೇ ಜಿಲ್ಲಾ ಉಸ್ತುವಾರಿ ಮಂತ್ರಿಗಳು ಆಗಮಿಸಿ ಒಳ್ಳೆಯದನ್ನು ಮಾಡಿ, ಹಣ ಕೊಡಿ. ಮಾಜಿ ಮುಖ್ಯಮಂತ್ರಿಗಳಾದ ಶ್ರೀ ಸದಾನಂದ ಗೌಡರು ಒಂದು ಕ್ಷೇತ್ರಕ್ಕೆ ಒಂದು ಕೋಟಿ ರೂ. ಬಿಡುಗಡೆ ಮಾಡುತ್ತೇವೆಂದು ವಿಡಿಯೋ ಕಾನ್ಫರೆನ್ಸ್ ಮುಖಾಂತರ ಘೋಷಣೆ ಮಾಡಿದರು. ಅವರು ಘೋಷಿಸುತ್ತಿದ್ದಂತೆಯೇ, ಅದು ಇಡೀ ರಾಜ್ಯದಲ್ಲೆಲ್ಲಾ ಟಿ.ವಿ.ಯಲ್ಲಿ ಪ್ರಸಾರವಾಯಿತು. ನಮ್ಮ ಈಗಿನ ಮುಖ್ಯಮಂತ್ರಿಗಳಾದ ಶ್ರೀ ಜಗದೀಶ್ ಶೆಟ್ಟರ್ ರವರೂ ಒಂದು ಕೋಟಿ ರೂ. ಕೊಡುತ್ತೇವೆಂದು ಹೇಳಿದರು. ಒಟ್ಟು ಎರಡು ಕೋಟಿ ರೂ.ಗಳನ್ನು ಶಾಸಕರು ಎಲ್ಲಿ ಹೊಡೆಯುತ್ತಾರೆಂದು ಅಲ್ಲಿ ವಿರೋಧಪಕ್ಷದವರು ಕೂಗಾಡುತ್ತಾರೆ. ಎರಡು ಕೊಟಿ ರೂ.ಗಳು ಏನಾಯಿತೆಂದು ಕೇಳುತ್ತಾರೆ? ಇನ್ನೂ ಬಂದಿಲ್ಲ ಎಂದು ಹೇಳಿದರೆ ಅದನ್ನು ಕೇಳುವಷ್ಟು ವ್ಯವಧಾನ ಆ ಮುಖಂಡರುಗಳಿಗಿರು-ವುದಿಲ್ಲ. ಮಾನ್ಯ ಮುಖ್ಯಮಂತ್ರಿಯವರೇ 2 ಕೋಟಿ ರೂ.ಗಳನ್ನು ಘೋಷಣೆ ಮಾಡಿದ ಮೇಲೆ ಬಂದಿರುತ್ತದೆ ಎನ್ನುವ ಭಾವನೆ ಅವರಿಗಿರುತ್ತದೆ. ಈ ಬಗ್ಗೆ ನಮ್ಮ ಜಿಲ್ಲಾಧಿಕಾರಿಗಳನ್ನು ಕೇಳಿದರೆ ನಿನ್ನೆಯಷ್ಟೇ ದುಡ್ಡು ಬಂದಿದೆ, ಇನ್ನೂ ಜಿಲ್ಲಾ ಉಸ್ತುವಾರಿ ಸಚಿವರನ್ನು ಕೇಳಬೇಕು, ಆಮೇಲೆ ನಿರ್ಧಾರ ತೆಗೆದುಕೊಂಡು ಅದನ್ನು ಪ್ರಕಟಿಸುತ್ತೇನೆಂದು ಹೇಳುತ್ತಾರೆ. ಆ ದುಡ್ಡನ್ನು ಈ ರೀತಿ ಮಾಡುವುದಕ್ಕೆ ಆಗುವುದಿಲ್ಲ. ನನ್ನ ಕ್ಷೇತ್ರವೊಂದಕ್ಕೆ 7–8 ಕೋಟಿ ರೂ.ಗಳು ದನದ ಮೇವಿಗೆ ಬೇಕು, ಒಂದು ದಿವಸಕ್ಕೆ 5–7 ಕೆ.ಜಿ.ಯಷ್ಟು ದನದ ಮೇವು ಬೇಕು. ಹೀಗೆ 70,000 ಜಾನುವಾರುಗಳಿಗೆ ಎಷ್ಟು ಮೇವು ಬೇಕೆಂಬುದನ್ನು ನೀವೇ ತಿಳಿದುಕೊಳ್ಳಬೇಕು. ಈ ಬಗ್ಗೆ ಅಂಕಿ ಸಂಖ್ಯೆಗಳನ್ನು ತರಿಸಿ ಸಮರೋಪಾದಿಯಲ್ಲಿ ಆ ಗೋವುಗಳನ್ನು ಉಳಿಸಿಕೊಳ್ಳತಕ್ಕ ಕೆಲಸ ಇವತ್ತು ನಿಜವಾಗಿಯೂ ಆಗಬೇಕಿದೆ. food grains ಹೇಗೋ maintain ಆಗುತ್ತದೆ. ತಿಂಗಳಿಗೆ ಅಲ್ಪಸ್ವಲ್ಪ food grains ಕೊಡುವುದರಿಂದ ಹೇಗೋ ನಿರ್ವಹಣೆಯಾಗುತ್ತಾ ಹೂಗುತ್ತಿದೆ. ಅದರ ಬಗ್ಗೆ ಅಂತಹ ಬಗ್ಗೆ ಏನು ಎದ್ದಿಲ್ಲ. ಈಗ ಎದ್ದಿರುವ ದನದ ಮೇವು. ಎಲ್ಲಾ ತಾಲ್ಲೂಕಿನಲ್ಲಿಯೂ ಇದೇ ರೀತಿ ಇದೆ ಎಂದು ಹೇಳುತ್ತಿಲ್ಲ. ನನ್ನ ಕ್ಷೇತ್ರದಲ್ಲಿ ಬಹಳ ದೊಡ್ಡ ಪ್ರಮಾಣದಲ್ಲಿ ದನಗಳ ಮೇವಿಗೆ ಅಡಚಣೆಯುಂಟಾಗಿದ್ದು, ಕೂಡಲೇ ಅದಕ್ಕೆ ವ್ಯವಸ್ಥೆಯನ್ನು ಮಾಡುವ ನಿಟ್ಟಿನಲ್ಲಿ ಪ್ರಾಮಾಣಿಕವಾದಂತಹ ಪ್ರಯತ್ನವನ್ನು ಮಾಡಬೇಕೆಂಬ ಮಾತನ್ನು ಈ ಸಂದರ್ಭದಲ್ಲಿ ಮಾನ್ಯ ಸಚಿವರನ್ನು

ಸರ್ಕಾರವನ್ನು ಕೇಳುವುದಕ್ಕೆ ಬಯಸುತ್ತೇನೆ. ಸನ್ಮಾನ್ಯ ಅಧ್ಯಕ್ಷರೆ, ಈ ಒಂದು ಬರವನ್ನು ಎದುರಿಸುವಂತಹ ನಿಟ್ಟಿನಲ್ಲಿ ನಮ್ಮ ನಿಕಟಪೂರ್ವ ಮುಖ್ಯ ಮಂತ್ರಿಗಳು,ಮಾಜಿ ಮುಖ್ಯಮಂತ್ರಿಗಳಾದ ಶ್ರೀ ಬಿ.ಎಸ್. ಯಡಿಯೂರಪ್ಪ– ನವರುಬಹುಶಃ ವಿರೋಧ ಪಕ್ಷದಲ್ಲಿ ನಿಂತು ಮಾತನಾಡುವ ಶೈಲಿನಲ್ಲಿಯೇ ಬಹಳಷ್ಟು ಸಲಹೆ– ಸೂಚನೆಗಳನ್ನು ಕೊಟ್ಟಿದ್ದಾರೆ. ಅದನ್ನು ನಾವು ಸ್ವಾಗತ ಮಾಡುವುದಾದರೂ,ಅದರ ಒಳಗಡೆ ಕಷ್ಟ ಸಾಧ್ಯವಾಗಿರುವಂತಹ ಕೆಲವು ವಿಚಾರಗಳನ್ನು ಪ್ರಾಸ್ತಾಪ ಮಾಡಿದರು ಎನ್ನುವ ಭಾವನೆ ಮನಸ್ಸಿನಲ್ಲಿ ಬರುವುದು ಬೇಡ. ಅವರು ಸರ್ಕಾರಕ್ಕೆ ಈ ಬಗ್ಗೆ ಹೇಳಿ ಸರ್ಕಾರದ ಕಡೆಯಿಂದ ಮಾಡಿಸಿಕೊಟ್ಟ ಅವರಿಗೆ ನಿಜವಾಗಿಯೂ ನಾವು ಧನ್ಯವಾದಗಳನ್ನು ಅರ್ಪಿಸಬೇಕಾಗುತ್ತದೆ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳಬೇಕಾಗುತ್ತದೆ. ಆದರೆ ಒಂದು ಅನುಮಾನವೇನೆಂದರೆ ಶ್ರೀ ಸದಾನಂದ ಗೌಡರು, ಶ್ರೀ ಈಶ್ವರಪ್ಪನವರು, ಶ್ರೀ ಯಡಿಯೂರಪ್ಪ ಮೂವರೂ ಸೇರಿ ಮತನಾಡಿಕೊಂಡು ಈ ಭಾಷಣ ಮಾಡಿದ್ದಾರೆಯೇ? ಅದಲ್ಲದೆ ಏಕಾಏಕಿ ಇವರೊಬ್ಬರೆ ಭಾಷಣ ಮಾಡಿದ್ದಾರೆಯೇ ಎಂದು ಅರೆಮನಸ್ಸು ಬರುತ್ತಿದೆ. ಏಕೆಂದರೆ ಈಗಾಗಲೇ'ಸುವರ್ಣ ಭೂಮಿ'ಯನ್ನು ನಾವು ವಿರೋಧ ಮಾಡಿದ್ದೇವೆ. 5,000 ರೂ.ಗಳನ್ನು ಒಬ್ಬ ರೈತನಿಗೆ ಕೊಟ್ಟರೆ ಆ ರೈತ ಏನೂ ಉದ್ಧಾರವಾಗುವುದಿಲ್ಲ. ನನಗೆ ಗೊತ್ತಿದೆ. ಅದರಿಂದ ಏನು ಅಗುವುದಿಲ್ಲ ಅಲ್ಲೇ ಸ್ವಲ್ಪ ಎಣ್ಣೆ ಹಾಕಿ ಇನ್ನೂ ಸ್ವಲ್ಪ ಆದಾಯವನ್ನು ಸರ್ಕಾರಕ್ಕೆ ಕೊಟ್ಟು ಹೋಗುತ್ತಾನೆ. ಅದರಿಂದಾಗಿ ಈ ದೇಶದಲ್ಲಿ ಯಾರೂ ಉದ್ಧಾರವಾಗಿಲ್ಲ. 5,000 ರೂ.ಗಳ ಹಣೆಬರಹ ಏನು ಎಂದು ನನಗೆ ಗೊತ್ತಿದೆ. ನಿಮಗೆ ಒಳ್ಳೆ ಹೆಸರು ಬರುತ್ತದೆಯೆಂದು ತಿಳಿದುಕೊಳ್ಳಬೇಡಿ. ನಿಮಗೆ ಲಾಟರಿ ಸರ್ಕಾರ ಎಂದು ಹೇಳುತ್ತಾರೆ. 5–10 ಸಾವಿರ ಜನ ಇದ್ದು ಅದರಲ್ಲಿ ಲಾಟರಿ ಮುಖಾಂತರ ಆರಿಸಿ 300 ಜನಗಳಿಗೆ ಚೀಟಿಯನ್ನು ಕೊಡುತ್ತೀರಿ. ಅಲ್ಲೇ 5,000 ಜನ ನಿಮ್ಮ ಸರ್ಕಾರವನ್ನು ಬಯಸುತ್ತಾರೆ, ಆದ ಕಾರಣ ನಿಮಗೆ, ಸರ್ಕಾರಕ್ಕೆ ಒಳ್ಳೆಯ ಹೆಸರು ಬರುವುದಿಲ್ಲ. 5,000 ರೂ.ಗಳು ಕೊಡುವುದು ನನಗೆ ಇಷ್ಟವಾಗುವುದಿಲ್ಲ. ಇದು ನನ್ನ ವೈಯಕ್ತಿಕವಾದಂತಹ ಅಭಿಪ್ರಾಯ.ಇವತ್ತು ಬರವನ್ನು ಹೇಗೆ ಎದುರಿಸ– ಬೇಕೆನ್ನುವ ದೃಷ್ಟಿಯಲ್ಲಿ ಒಂದು ಕುಟುಂಬಕ್ಕೆ 5,000 ರೂ.ಗಳ ರೀತಿಯಲ್ಲಿ ಈಗಾಗಲೇ ಒಟ್ಟು 10 ಲಕ್ಷ ಕುಟುಂಬಗಳಿಗೆ ಕೊಟ್ಟಿದ್ದೀರಿ. ಇದೇ ರೀತಿ ಸರ್ಕಾರದ ದುಡ್ಡಿನಲ್ಲಿ 30 ಲಕ್ಷ ಕುಟುಂಬಗಳಿಗೆ ಕೊಟ್ಟರೆ ಪಕ್ಷದ ರಾಜಕೀಯ ಮಾಡಬಹುದು ಎನ್ನುವ ಭಾವನೆ ಇರಬೇಕು ಅವರಿಗೆ, ಅಷ್ಟೇ ಅದಕ್ಕೋಸ್ಕರ

ಅವರು ಹೇಳಿದರು ಎನ್ನುವುದು ನನ್ನ ಭಾವನೆ. ಅದೇನೇ ಇರಲಿ, ಅದರ ಬಗ್ಗೆ ಚಿಂತನೆ ಮಾಡುವುದಕ್ಕೆ ಹೋಗುವುದಿಲ್ಲ. ಸಾಲ ಮನ್ನಾ ಮಾಡಬೇಕು. ನಿಜ ಅದನ್ನು ಯಾರೇ ಮಾಡಿರಲಿ, ಅದರ ಬಗ್ಗೆ ನನಗೆ ಚಿಂತನೆ ಇಲ್ಲ, ಎಲ್ಲಾ ರೈತರಿಗೂ ಸಾಲ ಮನ್ನಾ ಮಾಡಿ. ಎಷ್ಟು ಜನ ರೈತರಿಗೆ ಎಷ್ಟು ಪರ್ಸೆಂಟ್ ಬಡ್ಡಿಯಲ್ಲಿ ಸಾಲವನ್ನು ಕೊಟ್ಟಿದ್ದೀರಿ ಶೇ.10 ರಷ್ಟು ರೈತರಿಗೆ ನೀವು ಸಾಲವನ್ನು ಕೊಟ್ಟಿಲ್ಲ. ಈ ದೇಶದಲ್ಲಿ ಕೇವಲ ಶೇ.10 ರಷ್ಟು ರೈತರು ಮಾತ್ರ ಬಡವರಿದ್ದಾರೆಯೇ? ಸಾಲ ತೆಗೆದುಕೊಳ್ಳುವುದಕ್ಕೆ ಯೋಗ್ಯತೆ ಇರುವವರು ಬಹಳಷ್ಟಿದ್ದಾರೆ. ನೀವೊಂದು ಕ್ರೆಡಿಟ್ ಕಾರ್ಡ್ ಮಾಡಿ, ಕೃಷಿಯಲ್ಲಿ ಪಾಸ್ ಬುಕ್ ಕೊಡುವ ರೀತಿಯಲ್ಲಿ. ಪ್ರತಿಯೊಬ್ಬ ಸಣ್ಣ ಹಿಡುವಳಿ ರೈತನಿಗೆ ಅ ಪಾಸ್ ಬುಕ್ ತೋರಿಸಿದ ತಕ್ಷಣವೇ ಆ ರೈತನಿಗೆ 5–20 ಸಾವಿರ ರೂ.ಗಳಷ್ಟು ಸಾಲ ಕೊಡುವಂತಹ ವ್ಯವಸ್ಥೆ ಮಾಡಿ.ಈ ದೇಶದಲ್ಲಿ ಆಗ ಒಂದು ಸಾರಿ ಸಾಲ ಮನ್ನಾ ಮಾಡಿ. ಆಗ ಮಾತ್ರ ಇಡೀ ಕರ್ನಾಟಕದ ಎಲ್ಲಾ ರೈತರಿಗೂ ತಲುಪುತ್ತದೆ. ಇವತ್ತು ಸಾಲ ತೆಗೆದುಕೊಂಡವರೆ ಪುನಃ ಸಾಲ ತೆಗೆದುಕೊಂಡಿದ್ದಾರೆ. ಇತಿಹಾಸದಲ್ಲಿ ಹೊಸದಾಗಿ ಯಾರೂ ತೆಗೆದುಕೊಂಡಿಲ್ಲ, ನಮ್ಮ ಕುಮಾರಸ್ವಾಮಿ ಅವರ ಕಾಲದಲ್ಲಿ ಯಾರಿಗೆ ಸಾಲ ಮನ್ನಾ ಆಗಿತ್ತೋ ಅವರೇrenewal ಮಾಡಿಸಿಕೊಂಡು ಕುಳಿತಿದ್ದಾರೆ. ನೀವು ಮತ್ತೆ ಅವರಿಗೆ ಸಾಲ ಮನ್ನಾ ಮಾಡಿದರೆ ಅದು ಸರಿಹೋಗುವುದಿಲ್ಲ. ಆದ್ದರಿಂದ ನೀವು ಇಡೀ ಕರ್ನಾಟಕ ರಾಜ್ಯದ ಎಲ್ಲಾ ರೈತರಿಗೂ ಸಾಲ ಮನ್ನಾ ಮಡಬೇಕೆನ್ನುವುದಾದರೆ ಮೊದಲು ಎಲ್ಲಾ ರೈತರಿಗೂ ಸಾಲವನ್ನು ಕೊಡಿ. ಪ್ರತಿಯೊಬ್ಬ ರೈತರಿಗೂ ಬ್ಯಾಂಕ್ ಮುಖಾಂತರ ಸಾಲ ಕೊಡಿ. ನೀವು 10 ಸಾವಿರ ಕೊಡುತ್ತೀರೋ, 20 ಸಾವಿರ ಕೊಡುತ್ತೀರೋ, ಬಡ್ಡಿ ರಹಿತವಾಗಿ 25 ಸಾವಿರ ರೂ.ಗಳವರೆಗೆ ಅವರಿಗೆ ಸಾಲ ಕೊಡುವ ನಿರ್ಣಯವನ್ನು ಮಾಡಿ. ಬಡವರು ಬರದಲ್ಲಿದ್ದಾರೆ ಎಂದು ಹೇಳಿ ಸಾಲ ಮನ್ನಾ ಮಾಡಬಾರದೆಂಬ ವಿರೋಧ ನನ್ನಲ್ಲಿಲ್ಲ. ಉಳಿದ ಎಲ್ಲಾ ರೈತರಿಗೂ ಮೊದಲು ಅವರ ಜೊತೆಯಲ್ಲಿ ಸಾಲ ಕೊಡಿ. ಆ ನಂತರ ಒಟ್ಟಾಗಿ ಸೇರಿಸಿ ಸಾಲ ಮನ್ನಾ ಮಾಡಿ, ಅಂದು ನಾನು ಒಪ್ಪಿಕೊಳ್ಳುತ್ತೇನೆ ಎನ್ನುವ ಮಾತನ್ನು ಸರ್ಕಾರದ ಗಮನಕ್ಕೆ ತರಲು ಬಯಸುತ್ತೇನೆ. ಅದರ ಜೊತೆಯಲ್ಲಿ ಈಗಾಗಲೇ ಬಡ್ಡಿ ರಹಿತವಾದಂತಹ ಸಾಲವನ್ನು ಇಷ್ಟು ಲಕ್ಷ ಜನ ರೈತರಿಗೆ ಕೊಟ್ಟಿದ್ದೇವೆ, ಎಲ್ಲಾ ರೈತರು ಉದ್ಧಾರವಾಗಿದ್ದಾರೆಂದು ಕರ್ನಾಟಕದಲ್ಲಿ ನಾವು ಭಾವಿಸಿಕೊಂಡರೆ ಅದರಂತಹ ಮೂರ್ಖತನ,ಮತ್ತೊಂದಿಲ್ಲ. ಬಡ್ಡಿರಹಿತವಾದ ತೆಗೆದುಕೊಂಡಿರುವಂತಹವರು ಕೃಷಿ ಸಾಲವನ್ನು ಅದರಲ್ಲೂ ವಾಣಿಜ್ಯ

ಬ್ಯಾಂಕುಗಳಲ್ಲಿ ಸಾಲ ಪಡೆದು, farm house ಗಳನ್ನು ನಗರ ಪ್ರದೇಶಗಳಿಂದ ಹೊರಗಡೆ ಕಟ್ಟಿಕೊಂಡಿದ್ದಾರೆ. ಅವರಿಗೇ ಈ ವಾಣಿಜ್ಯ ಬ್ಯಾಂಕಿನವರು ಸಾಲ ಕೊಡುತ್ತಾರೆ. ಯಾರಿಗೆ ರೀಪೇಮೆಂಟ್ ಮಾಡುವ ಶಕ್ತಿಯಿದೆ ಅವರಿಗೆ ಬಿಟ್ಟು ಸಾಲವನ್ನು ಬೇರೆ ಯಾರಿಗೂ ಕೊಡುವುದಿಲ್ಲ. ಅವರ ಭಾವಮೈದನಿಗೋ ಅಥವ ಹೋಟೆಲ್‌ನಲ್ಲಿರುವ ಸಪ್ಲೈಯರ್ ಹೆಸರಿನಲ್ಲಿ 4 ಎಕರೆ ಜಮೀನನ್ನು ಮಾಡಿಕೊಂಡಿರುತ್ತಾರೆ. 4 ಎಕರೆ ಜಮೀನನ್ನು ಹೊಂದಿರುವ ಅವನ ಹೆಸರನ್ನು ಸಣ್ಣ ಹಿಡುವಳಿದಾರರು ರೈತರ ಪಟ್ಟಿಗೆ ಸೇರಿಸಿರುತ್ತಾರೆ. ಏಕೆಂದರೆ ಸಾಲ ತೆಗೆದುಕೊಂಡಿರುವವರು ಸಾಲ ತೀರಿಸುವುದಿಲ್ಲ, ಹೋಟೇಲ್ ಮಾಲಿಕ ಆ ಸಾಲವನ್ನು ಕಟ್ಟುತ್ತಾನೆ. farm house ಮಾಡಿಕೊಂಡಿರುವವನು ಸಾಲ ತೆಗೆದುಕೊಳ್ಳುತ್ತಾನೆ. ಶೇ.70% ರಷ್ಟು ಯಾರಿಗೆ ರೀಪೇಮೆಂಟ್ ಮಾಡುವುದಕ್ಕೆ ಆಗುತ್ತದೆಯೋ ಅವರಿಗೆ ಮಾತ್ರ ಸಾಲ ಕೊಡುತ್ತಾರೆ. ಈ ರೀತಿ ಇರುವುದನ್ನು ನಾನು ವಾಣಿಜ್ಯ ಬ್ಯಾಂಕುಗಳಿಗೆ ಹೋಗಿ ಅಲ್ಲಿನ ದಾಖಲಾತಿಗಳನ್ನು ತೆಗೆಸಿ ನೋಡಿದ್ದೇನೆ, ಬಡವರಾದ ರೈತರಿಗೆ ಆ ವಾಣಿಜ್ಯ ಬ್ಯಾಂಕಿನಲ್ಲಿ ಸಾಲ ಸಿಗುತ್ತಿಲ್ಲ. ಇವರಿಗೆ ರೀಪೇಮೆಂಟ್ ಮಾಡುವ ಶಕ್ತಿಯಿಲ್ಲವೆಂದು ಹೇಳುತ್ತಾರೆ. ಈ ವಾಣಿಜ್ಯ ಬ್ಯಾಂಕಿನ ವ್ಯವಸ್ಥೆಯೊಳಗೆ ನಿಜವಾದ ರೈತನಿಗೆ ಇಂದು ಸಾಲ ಸಿಗುತ್ತಿಲ್ಲ. ವಾಣಿಜ್ಯ ಬ್ಯಾಂಕುಗಳಲ್ಲಿ ಸಾಲ ಸಿಗುವಂತಹ ಒಂದು ಸ್ಪಷ್ಟವಾದ ಕಾನೂನನ್ನು ಕರ್ನಾಟಕ ರಾಜ್ಯದಲ್ಲಿ ಸ್ಪಷ್ಟವಾಗಿರತಕ್ಕ ಕಾನೂನು ಜಾರಿಗೆ ತಂದು ಇದರಲ್ಲಿ ಅನ್ಯಾಯವಾದರೆ, ಅದಕ್ಕೆ ಕ್ರಿಮಿನಲ್ ಮೊಕದ್ದಮೆ ಹೂಡ ಬೇಕಾಗುತ್ತದೆಂದು ಅಧಿಕಾರಿಗಳಿಗೆ ಎಚ್ಚರಿಕೆ ನೀಡಬೇಕು. ನಿಜವಾದ ರೈತರು ಯಾರು ಇರುತ್ತಾರೆಯೋ ಅವರಿಗೆ ಸಾಲವನ್ನು ಕೊಡತಕ್ಕಂತಹ ವ್ಯವಸ್ಥೆಯನ್ನು ಮಾಡಿದರೆ ಆ ರೈತ ಸಂಕಷ್ಟದಿಂದ ದೂರವಾಗುತ್ತಾನೆ ಎನ್ನುವ ನನ್ನ ಅನುಭವದಲ್ಲಿರುವ ಒಂದು ಸಲಹೆಯನ್ನು ಸರ್ಕಾರದ ಗಮನಕ್ಕೆ ತರುತ್ತಾ, ಈ ಮಾತನ್ನು ಹೇಳಲಿಕ್ಕೆ ಬಯಸುತ್ತೇನೆ. ಅದರ ಜೊತೆಗೆ ಶ್ರೀ ಹೆಚ್.ಡಿ.ರೇವಣ್ಣ ನವರು ವಿದ್ಯುಚ್ಛಕ್ತಿ ಸಮಸ್ಯೆ ಬೆಳಿಗ್ಗೆ ನಿಯಮ 60 ರಡಿಯಲ್ಲಿ ಪ್ರಸ್ತಾಪಿಸುವುದಕ್ಕೆ ಪ್ರಯತ್ನ ಮಾಡಿದರು. ಆದರೆ ಅದನ್ನು ತಿರಸ್ಕೃತ ಮಾಡಿದರು. ಅದೇಕೋ ನನಗೆ ಗೊತ್ತಿಲ್ಲ. ಇವತ್ತು ಗ್ರಾಮೀಣ ಪ್ರದೇಶದಲ್ಲಿ ವಿದ್ಯುಚ್ಛಕ್ತಿ ಏನಾಗಿದೆ? ಇವತ್ತು ಗ್ರಾಮೀಣ ಪ್ರದೇಶದಲ್ಲಿ ವಿದ್ಯುಚ್ಛಕ್ತಿ ಏನಾಗಿದೆ ಎಂದರೆ, 2 ರಿಂದ 3 ಗಂಟೆ Current ಕೊಡುತ್ತಿಲ್ಲ. ದನಗಳಿಗೆ ಮೇವು ಬೆಳೆಯುವುದಕ್ಕೂ ಆ Current ಸಾಕಾಗುತ್ತಿಲ್ಲ. ಅಂತಹ ಪರಿಸ್ಥಿತಿ ಇವತ್ತು ಗ್ರಾಮೀಣ ಪ್ರದೇಶದಲ್ಲಿ ಉದ್ಭವವಾಗಿದೆ. ಕೊನೆಯಪಕ್ಷ ಬರದ ದವಡೆಯಲ್ಲಿರತಕ್ಕಂಥ ಆ

ಜಾನುವಾರುಗಳನ್ನು ಉದ್ಧಾರ ಮಾಡುವುದಕ್ಕೆ, ಅವುಗಳಿಗೆ ಮೇವು ತಯಾರು ಮಾಡುವುದಕ್ಕೆ, ಉತ್ಪತ್ತಿ ಮಾಡುವುದಕ್ಕೆ ದಯವಿಟ್ಟು ಅಷ್ಟು Current ಆದರೂ ಕೊಡುವಂಥ ಪರಿಸ್ಥಿತಿ ನಿರ್ಮಾಣ ಮಾಡಬೇಕು.Tarnsformers ಸುಟ್ಟುಹೋಗಿರುವಂಥದ್ದು, ಅವು ರಿಪೇರಿ ಆಗದೆ ಇರತಕ್ಕಂಥದ್ದು, ಕೊನೆಗೆ ನಮ್ಮ ಮನೆಗಳ ಹತ್ತಿರ ಜನರು ಬಂದು ನಮ್ಮನ್ನು ಬೈಯ್ದುಕೊಳ್ಳುವಂಥ ಪರಿಸ್ಥಿತಿ ಇದೆ. ಬಹುಶಃ ಗ್ರಾಮಿಣ ಪ್ರದೇಶದಿಂದ ಬಂದಿರತಕ್ಕಂಥ ಎಲ್ಲಾ ಶಾಸಕರಿಗೆ ಆ ಭಾವನೆ ಇದೆಯೆಂದು ತಿಳಿದುಕೊಂಡಿದ್ದೇನೆ. ಕೆಲವರಿಗೆ ಮಾತನಾಡುವುದಕ್ಕೆ ಆಗುವುದಿಲ್ಲ, ನಾವು ಕೆಲವರು ಮಾತನಾಡುತ್ತಿದ್ದೇವೆ ಅಷ್ಟೇ ಆದರೆ, ಇವತ್ತು ಅಂಥ ಒಂದು ಪರಿಸ್ಥಿತಿಗೆ ವಿದ್ಯುಚ್ಛಕ್ತಿ ಸಮಸ್ಯೆ ತಲುಪಿದೆ, ಆ ಸಮಸ್ಯೆಯನ್ನು ಬಗೆಹರಿಸುವುದಕ್ಕೆ ಸರ್ಕಾರ ತೀಕ್ಷ್ಣವಾದಂಥ ಕ್ರಮವನ್ನು ಜರುಗಿಸಬೇಕು ಎನ್ನುವಂಥ ಮಾತನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಬಯಸುತ್ತೇನೆ. ಇನ್ನು NREGS, ವಿಚಾರ ನಮ್ಮ ಮುಖ್ಯಮಂತ್ರಿಗಳು ವಿಡಿಯೋ ಕಾನ್ಫರೆನ್ಸ್‌ನಲ್ಲಿ ಬರಪರಿಹಾರ ಕಾಮ-ಗಾರಿಗಳಿಗೆ NREGS ಯನ್ನು ಉಪಯೋಗಿಸಿಕೊಳ್ಳಿ ಎಂಬ ಮಾತನ್ನು ಹೇಳಿದ್ದರು. ನಮ್ಮ ಕಂದಾಯ ಸಚಿವರು ಹೇಳುತ್ತಿದ್ದಾರೆ ಅದು ಒಳ್ಳೆಯದು. ಕೇಂದ್ರ ಸರ್ಕಾರ ಬಹಳ ಅಪರೂಪವಾದಂಥ ಒಂದು ಯೋಜನೆಯನ್ನು ಜಾರಿಗೆ ತಂದಿತ್ತು. ಗ್ರಾಮೀಣ ಪ್ರದೇಶದ ಜನಗಳ ಬವಣೆಯನ್ನು ತೀರಿಸುವುದಕ್ಕೆ ಒಂದು ಕಾನೂನನ್ನು ತಂದಿದೆ. ಇದರಲ್ಲಿ ಪಾರ್ಲಿಮೆಂಟ್‌ನಲ್ಲಿ ಅಗಬಹುದು, ವಿಧಾನಸಭೆಯಲ್ಲಿ ಆಗಬಹುದು, ಅಲ್ಲಿ ಇರತಕ್ಕಂಥ ನ್ಯೂನತೆಗಳನ್ನು ಎತ್ತಿಹಿಡಿಯತಕ್ಕಂಥ ಭಾವನೆ ಯಾರಿಗೂ ಇಲ್ಲವಾ? 144 ರೂಪಾಯಿಗೆ ಯಾವ ಮನುಷ್ಯ ಇವತ್ತು ಕೂಲಿಗೆ ಬರುತ್ತಾನೆ? ನನಗೆ ಉತ್ತರವನ್ನು ಹೇಳಬೇಕು. ರೂ.144 ರಿಂದ 155 ಮಾಡಿದ್ದಾರೆ. ಇವತ್ತಿನ ಆರ್ಥಿಕ ವ್ಯವಸ್ಥೆಯೊಳಗೆ ಒಬ್ಬ ಮನುಷ್ಯ ಜೀವನ ಮಾಡಬೇಕೆಂದರೆ, ದಿನಕ್ಕೆ ರೂ.250/-ರಿಂದ ರೂ.300/- ಅವನಿಗೆ ಬೇಕು. ಅವನ ಕುಟುಂಬವನ್ನು ಹೇಗೆ ಸಾಕುವುದು? ಅವನು ತನ್ನ ಮಕ್ಕಳನ್ನು ಹೇಗೆ ಸಾಕುತ್ತಾನೆ? ರೂ.150 ರೂಪಾಯಿಗೆ ಬೆಳಗ್ಗೆಯಿಂದ ಸಾಯಂಕಾಲದವರೆಗೆ ಕೆಲಸ ಮಾಡು ಎಂದರೆ ಯಾರು ಮಾಡುತ್ತಾರೆ ಸ್ವಾಮಿ? ಇದು ಪರಿವರ್ತನೆ ಮಾಡತಕ್ಕಂತ ಸಮಯ, ಅಲ್ಲಿ ಪಾರ್ಲಿಮೆಂಟ್‌ನಲ್ಲಿ ಕುಳಿತುಕೊಂಡು ಅದೇ ಕಾನೂನು ಮಾಡುತ್ತಾರೆ. ನಾವಾದರೂ ಅಲ್ಲಿಗೆ ಹೋಗಿ ಏತಕ್ಕೋಸ್ಕರ ಹೀಗೆ ಮಾಡುತ್ತಿದ್ದೀರಿ ಎಂದು ಹೇಳತಕ್ಕಂಥ ಪರಿಸ್ಥಿತಿಗೆ ನಾವು ಹೋಗಬಾರದಾ? ಇವತ್ತು 150 ರೂಪಾಯಿಗೆ ಒಬ್ಬ ಕಾರ್ಮಿಕ ಕೆಲಸಕ್ಕೆ ಬರುತ್ತಾನಾ? ಅದು ನಾವು ನೀವು

ಹೇಳಿ ಕೇಳಿದ್ದಲ್ಲ. ಅವನು ಮೂರು ಕ್ವಾಟರ್ ಕುಡಿಯಲೇಬೇಕು. ಎರಡು ಕ್ವಾಟರ್ minimum ಕುಡಿಯಬೇಕು. ನಿಮ್ಮ ದುಡ್ಡು ಅವನಿಗೆ ಎರಡು ಕ್ವಾಟರ್‌ಗೆ ಆಗುವುದಿಲ್ಲ. ನೀವು ರೇಟ್‌ನ್ನು ಏರಿಸಿಬಿಟ್ಟಿದ್ದೀರಿ. ಹತ್ತು ರೂಪಾಯಿ ಷರಾಬು ಕುಡಿದು ಮನೆಯಲ್ಲಿ ಮಲಗುತ್ತಿದ್ದನು. ಅದನ್ನು ತೆಗೆದುಕೊಂಡು ಹೋಗಿ 55 ರೂಪಾಯಿ ಮಾಡಿದ್ದೀರಿ. ಅದನ್ನು ಬೇರೆ ಬೀದಿ ಬೀದಿಯಲ್ಲಿ ಮಾರಿಸುತ್ತೀರಿ. ಎಲ್ಲೆಲ್ಲೆ ಬೇಕೋ ಅಲ್ಲಲ್ಲಿ ಸಿಗುತ್ತದೆ. ಇನ್ನು ಸ್ವಲ್ಪ ದಿನಗಳಲ್ಲಿ ತರಕಾರಿ ಗಾಡಿಯಲ್ಲಿ ಹಾಕಿಕೊಂಡು ತರಕಾರಿ ಬೇಕಾ, ತರಕಾರಿ ಎಂದು ಮನೆ ಮುಂದೆ ಬರುತ್ತಿದ್ದವರು ಎಣ್ಣೆ ಬೇಕಾ ಎಣ್ಣೆ, ಬ್ರ್ಯಾಂಡಿ ಬೇಕಾ ಬ್ರ್ಯಾಂಡಿ ಎಂದು ಬರುವಂತಹ ಪರಿಸ್ಥಿತಿ ನಿರ್ಮಾಣವಾಗುತ್ತದೆ.ಇನ್ನೂ ಸ್ವಲ್ಪ ದಿವಸದಲ್ಲಿ ನಿರ್ಮಾಣವಾಗುತ್ತದೆ ನಿಜವಾಗಿಯೂ ನಾನು ಜಂಭಕ್ಕೆ ಹೇಳುತ್ತಿಲ್ಲ. ಯಾರನ್ನಾದರೂ ಬೇಕಾದರೆ ಕೇಳಿ, ರೈಲ್ವೆ ಸ್ಟೇಷನ್‌ನಲ್ಲಿ ರಾತ್ರಿ ವೇಳೆಯಲ್ಲಿ ರೈಲು ಹತ್ತುವುದಕ್ಕೆ ಹೋದಾಗ ಕಾಫಿ ಇರುವುದಿಲ್ಲ... ರೈಲ್ವೆ ಸ್ಟೇಷನ್‌ನಲ್ಲಿ ಕಾಫಿ ಮಾರುವುದನ್ನು ಬಿಟ್ಟುಬಿಟ್ಟಿದ್ದಾರೆ. ಬ್ರ್ಯಾಂಡಿ ಕೊಡುತ್ತಾರೆ.ಬೆಳಿಗ್ಗೆ 5–30 ಗಂಟೆಗೆ ಬೀಡ ಅಂಗಡಿಗೆ, ಟೀ ಅಂಗಡಿಗೆ ಹೋದರೆ ಬ್ರಾಂಡಿ ಕೊಡುವಂಥ ಪರಿಸ್ಥಿತಿ ಬಂದಿದೆ. ಈ ರೀತಿಯಲ್ಲಿ ಸಾರಾಯಿ, ಬ್ರ್ಯಾಂಡಿ ಮಾರಿಸಿ ಅದರಿಂದ ಬರುವ ಉತ್ಪತ್ತಿಯಲ್ಲಿ ಈ ದೇಶದಲ್ಲಿ ಯಾವುದೋ ಸಾಮ್ರಾಜ್ಯವನ್ನು ಕಟ್ಟುತ್ತೇವೆಂದು ಕನಸು ಕಂಡಿದ್ದರೆ ಅದು ನಿಜವಾಗಿಯೂ ಒಳ್ಳೆಯದಲ್ಲ. ಬಡವರು ಹಾಳಾಗಿ ಹೋಗುತ್ತಿದ್ದಾರೆ. ನಿಜವಾಗಿಯೂ ಸ್ತ್ರೀ ಶಕ್ತಿ ಸಂಘದ ಮಹಿಳೆಯರು ಇವತ್ತು ಯಾವ ಪರಿಸ್ಥಿತಿಗೆ ಬಂದಿದಾರೆಂದರೆ, ದಿವಸಕ್ಕೆ 3–4 ಪಂಚಾಯತಿ ಮಾಡುತ್ತಾರೆ. ಒಂದು ಊರಿನಲ್ಲಿ 5–6 ಕುಟುಂಬಗಳು ಮಾಡಿಸುತ್ತವೆ. ಅವನು ಅಲ್ಲಿಂದ ಬರುತ್ತಾನೆ. ಕೆಳಗಿನ ಒಂದು ಮನೆಗೆ ಬಂದು ಸಾಲ ಮಾಡಿ ಒಂದು ಕ್ವಾರ್ಟರ್ ಕುಡಿಯುತ್ತಾನೆ., ಮತ್ತು ಆಕಡೆ ತೋಟದ ಮನೆಗೆ ಹೋಗಿ ಒಂದು ಕ್ವಾರ್ಟರ್ ಕುಡಿಯುತ್ತಾನೆ. ಮೂಲೆ ಮನೆಗೆ ಹೋಗಿ ಒಂದು ಕ್ವಾರ್ಟರ್ ಕುಡಿಯುತ್ತಾನೆ. ಮೂರು ಕ್ವಾರ್ಟರ್ ಕುಡಿದು ಮನೆಗೆ ಹೋಗಿ ತನ್ನ ಹೆಂಡತಿಗೆ ಹೊಡೆದು ಮಲಗುತ್ತಾನೆ. ಅಷ್ಟರಲ್ಲಿ ಅವನ ಸಾಲ ರೂ. 6,000/– ಆಗುತ್ತದೆ. ಕೊಡುವುದಕ್ಕೆ ದುಡ್ಡು ಇಲ್ಲದೆ ಬೆಂಗಳೂರನ್ನು ಸೇರುತ್ತಾನೆ. ಬೆಂಗಳೂರಿನಲ್ಲಿರುವ ಅವನ ಹೆಂಡತಿ ಮನೆಗೆ ಹೋಗಿ, ಅಲ್ಲಿ ಆಡು ಇರುತ್ತವೆಯೋ, ಕೋಣ ಇರುತ್ತವೆಯೋ, ಏನಿರುತ್ತವೆಯೋ ಅವುಗಳನ್ನು ಹಿಡಿದುಕೊಂಡು ಬೀದಿಯಲ್ಲಿ ಕಟ್ಟುತ್ತಾರೆ. ನಿನ್ನ ಗಂಡ ಸಾಲ ಮಾಡಿದ್ದಾನೆ ಇವುಗಳನ್ನೆಲ್ಲಾ ಕೊಟ್ಟುಬಿಟ್ಟು ಹೋಗು ಎಂದು ಹೇಳುತ್ತಾರೆ.

ಆಗ ಆ ಮಹಿಳೆ ಅಳುತ್ತಾ, ಕರೆಯುತ್ತಾ ಪೊಲೀಸ್ ಸ್ಟೇಷನ್‌ಗೆ ಹೋಗಬೇಕು. ನಮ್ಮ ಹತ್ತಿರ ಬರಬೇಕು. ನಾವು ಕುಳಿತುಕೊಂಡು ಪಂಚಾಯಿತಿ ಮಾಡಬೇಕು. ಇದು ಯಾವ ಪರಿಸ್ಥಿತಿ? ಅವನು ಸಾಲ ಕೊಡದೇ ಇದ್ದರೆ ಒಂದು ಕ್ವಾರ್ಟರ್ ಕುಡಿದು ಮನೆಯಲ್ಲಿ ಮಲಗುತ್ತಾನೆ. ಇವರು ಆರು ಜನ ಇರುತ್ತಾರೆ. ಯಾರು ಸಾರಾಯಿ ಮಾಡಿಕೊಳ್ಳುತ್ತಾರೆ ಅವರು ವ್ಯಾನ್‌ಗಳಲ್ಲಿ ತೆಗೆದುಕೊಂಡು ಹೋಗಿಬ್ರ್ಯಾಂಡಿ, ಸಾರಾಯಿ ಪ್ಯಾಕೇಟ್ ಇಳಿಸಿ-ಕೊಳ್ಳುತ್ತಿದ್ದರು. ಈಗ ರಾಜರೋಷವಾಗಿ ಪೊಲೀಸ್ ಎಸ್ಕಾರ್ಟ್‌ನೊಂದಿಗೆ ತೆಗೆದುಕೊಂಡು ಯಾರ್‍ಯಾರೂ ಬ್ರ್ಯಾಂಡಿ, ಸಾರಾಯಿಅಂಗಡಿ ಇಟ್ಟು-ಕೊಂಡಿದ್ದಾರೆ ಅವರ ಮನೆಯ ಹತ್ತಿರ ಹೋಗಿ ಹಳ್ಳಿಯಲ್ಲಿ ಇಳಿಸುತ್ತೀರಲ್ಲಾ. ಪೊಲೀಸಿನವರು ಕೇಳುವ ಹಾಗಿಲ್ಲ. ಅದು ಅಲ್ಲದೆ ತಾಲ್ಲೂಕು KDP ಮೀಟಿಂಗ್‌ನಲ್ಲಿ ಸೂಪರಿಂಟೆಂಡೆಂಟ್ ಅವರನ್ನು ಕರೆದು ಕೇಳಿದರೆ, 27,500 ಕೇಸ್‌ಗಳನ್ನು ನನಗೆ ಕೊಟ್ಟಿದ್ದಾರೆ ಸ್ವಾಮಿ ನಾನು ಏನು ಮಾಡಲಿ? Actually ಇಲ್ಲಿ ಏನಾದರೂ ಸರಿಯಾದ ಕಡೆ ಕೊಟ್ಟು ಮಾರಿದ್ದರೆ 14,000 ಕೇಸ್ ಹೋಗುತ್ತೆ ಸ್ವಾಮಿ. ಇನ್ನೂ 14,000 ಮಾರಬೇಕೆಂದರೆ ಈ ರೀತಿ ಅನಾಗರೀಕರಂತೆ ಇಂಥ ಅವ್ಯವಸ್ಥೆಗೆ ಇಳಿಯಬೇಕಾಗಿದೆ. ನಾವು ಏನು ಮಾಡುವುದು ಎಂದು ಪತ್ರಿಕೆಯವರ ಎದುರಿನಲ್ಲಿ ಕೆಡಿಪಿ ಮೀಟಿಂಗ್‌ನಲ್ಲಿ ಹೇಳುತ್ತಾನೆ. ಇದು ಸರ್ಕಾರ ನಡೆಸುವ ರೀತಿನಾ? ದಯವಿಟ್ಟು ಇದನ್ನು ಆಲೋಚನೆ ಮಾಡಬೇಕು. ಹೀಗೆ ರೂ. 10,000/– ಕೋಟಿ 12,000/– ಕೋಟಿ ಅದಾಯ ಬರುತ್ತದೆ. ಒಂದು ಮನೆಗೆ 4 ಕೆ.ಜಿ. ಅಕ್ಕಿ ಕೊಡುತ್ತೀರಿ. 4 ಕೆ.ಜಿಗೆ ಸಬ್ಸಿಡಿ ಎಷ್ಟು ನಿಮ್ಮದು? ರೂ.100/– ಅವನು ಕೊಡುತ್ತಾನೆ. ನೀವು ರೂ.12/– ಸಬ್ಸಿಡಿ ಕೊಡುತ್ತೀರಿ. 12x4=48. ಒಂದು ಕುಟುಂಬಕ್ಕೆ ತಿಂಗಳಿಗೆ ರೂ.200–300 ಸಬ್ಸಿಡಿ ಕೊಡುತ್ತೀರಿ. ಆದರೆ ಅವನು ಮನೆಯಲ್ಲಿ 40 ರಿಂದ 50 ರೂ ಕ್ವಾರ್ಟರ್ ಕುಡಿದರೆ, ಒಂದು ಕ್ವಾರ್ಟರ್‌ಗೆ ರೂ.35/– ರೂ.40/– ಟ್ಯಾಕ್ಸ್ ಬರುತ್ತದೆಯಲ್ಲೂ ಎಷ್ಟಾಯಿತು ಸ್ವಾಮಿ? ರೂ.1,200/– ಟ್ಯಾಕ್ಸ್ ಆಗುತ್ತದೆ. ನೀವು ಅವನಿಗೆ ಕೊಡುವ ರೂ.3,000 ಎಲ್ಲಿಗೆ ಸಾಕಾಗುತ್ತದೆ? ರೂ.300/–ಗೆ ಈ ಕಡೆಯಿಂದ ಅಕ್ಕಿ ಕೊಡುವುದು ಆ ಕಡೆಯಿಂದ ರೂ.1,200/– ಹೆಂಡ, ಬ್ರ್ಯಾಂಡಿ ಮಾರಿ ವಸೂಲು ಮಾಡುವುದು. ಇದಾ, ಸರ್ಕಾರದ ನೀತಿ? ಮಾನ್ಯ ರೇಣುಕಾಚಾರ್ಯರವರು ಇರಬೇಕಾಗಿತ್ತು, ನನ್ನದು ಈ ಸಾರಿ ರೂ.12,000/– ಕೋಟಿ, ರೂ.13,000/– ಕೋಟಿ ಆದಾಯವೆಂದು ಹೇಳುತ್ತಾರೆ. ರೂ.12,000 ಕೋಟಿ, ರೂ. 13,000 ಕೋಟಿ ತೆಗೆದುಕೊಂಡು ಏನು ಮಾಡುತ್ತೀರಿ ಸ್ವಾಮಿ? ರೈತರ ಬಾಳು ಹಾಳು ಮಾಡಿ

ರೂ.12,000, ರೂ.13,000 ಕೋಟಿ ತೆಗೆದುಕೊಂಡು ಸಾಮ್ರಾಜ್ಯ ಕಟ್ಟುತ್ತೀರಾ? ಇದರಲ್ಲಿ ನೀವು ಅವರ ಸಾಲ ಮನ್ನಾ ಮಾಡಬೇಕಾ? ಅವರಿಗೆ ನೀವು ಏನು ಮಾಡಬೇಕು? ಮೊದಲು ಇದನ್ನು ನಿಲ್ಲಿಸಿ ಸ್ವಾಮಿ. 10 ರೂಪಾಯಿ ಸಾರಾಯಿ ಕುಡಿದು ಮನೆಗೆ ಹೋಗಿ ಹೇಗೋ ಮಲಗುತ್ತಿದ್ದನು, ಸಾಲ 20 ರೂಪಾಯಿ ತೀರುತ್ತಿತ್ತು. ಇವತ್ತು 150 ರೂಪಾಯಿ ಬೇಕು. ಉದ್ಯೋಗ ಖಾತರಿ ಯೋಜನೆಯಲ್ಲಿ 150ರೂಪಾಯಿಗೆ ಕೆಲಸ ಮಾಡಿ ಎಂದು ಅವನಿಗೆ ಹೇಳುತ್ತೀರಿ. ಎಲ್ಲಿಂದ ಸಾಧ್ಯ ಇದು? ಅವನಿಗೆ 500 ರೂಪಾಯಿ ಕೊಟ್ಟರೂ ತೀರುವುದಿಲ್ಲ. ಅವನು ಒಂದು ದಿವಸಕ್ಕೆ ತನ್ನ ಕುಟುಂಬವನ್ನು ಸಾಕುವುದಕ್ಕೆ 500 ರೂಪಾಯಿಗೆ ಕೆಲಸ ಮಾಡಬೇಕು. ಈ ಕಾನೂನನ್ನು ಪರಿವರ್ತನೆ ಮಾಡಿ NREGಯಲ್ಲಿ ತರುವುದಕ್ಕೆ ಆಗುವುದಿಲ್ಲವೇ? ಅದರ ಜೊತೆಗೆ ಇನ್ನೊಂದು ಇದೆ. ಹೋದ ಮಾರ್ಚ್ ತಿಂಗಳಿನಲ್ಲಿ ಮಾಜಿ ಮುಖ್ಯಮಂತ್ರಿಯಾದ ಮಾನ್ಯ ಡಿ.ವಿ. ಸದಾನಂದಗೌಡರು 300 ಕೋಟಿ ರೂ. ಬಂತು ಎಂದು ಇಲ್ಲಿ ಹೇಳಿಕೆ ಕೊಟ್ಟರು. ಇದನ್ನು ಕೇಂದ್ರ ಸರ್ಕಾರದವರು ಸ್ವಲ್ಪ ಅರ್ಥ ಮಾಡಿಕೊಳ್ಳಬೇಕು. ಮಾರ್ಚ್ 31 ಕ್ಕೆ Employment Guarantee Scheme ನಲ್ಲಿ ಒದಗಿಸಿದೇ ಹೋದರೆ ಆ ಅಧಿಕಾರಿಯನ್ನು ಜೈಲಿಗೆ ಹಾಕಬೇಕು ಅಥವಾ ದುಡ್ಡು ವಸೂಲು ಮಾಡಬೇಕೆಂದು ಕಾನೂನು ಇದೆ. ಹೋದ ಸಾರಿ ಮಾರ್ಚ್ ಕೊನೆಯಲ್ಲಿ ದುಡ್ಡು ಬಿಡುಗಡೆ ಮಾಡದೇ ಅವನ್ನೆಲ್ಲವನ್ನೂ spill over ಗೆ ತಂದಿದ್ದೀರಿ. ಮೊನ್ನೆ ನಾನು review ಮಾಡಿದೆ. 36 ಪಂಚಾಯಿತಿಯಲ್ಲಿ ಮುಂದುವರೆದ ಕಾಮಗಾರಿಗಳಿಗೆ ಸುಮಾರು 65 ರಿಂದ 70 ಭಾಗ ಹಣ ಹೋಗುತ್ತದೆ. ಇನ್ನು ಉಳಿದಿರುತಕ್ಕಂಥದ್ದು 30 ಭಾಗ ಆ 30 ಭಾಗ ಹಣದಲ್ಲಿ Social forest ಗೆ ಗಂಟು ಹೊಡೆಯುವುದಕ್ಕೆ ಇಷ್ಟು ಕೊಡಬೇಕು, ಈ ಕಾಮಗಾರಿಗಳನ್ನು ತೆಗೆದುಕೊಳ್ಳುವುದಕ್ಕೆ ಒಂದು ಲಕ್ಷ, ಎರಡು ಲಕ್ಷ ಪಂಚಾಯಿತಿಗೆ ಉಳಿಯುವುದಿಲ್ಲ. ಏನು ಕಾಮಗಾರಿ ಮಾಡುತ್ತಾರೆ ಸ್ವಾಮಿ? ಉದ್ಯೋಗ ಖಾತರಿಯಲ್ಲಿ ಏನು spillover ಇದೆ ಅದನ್ನು ಪ್ರತ್ಯೇಕವಾಗಿ ಪರಿಗಣಿಸಿ, ಒಂದೊಂದು ಗ್ರಾಮ ಪಂಚಾಯಿತಿಗೆ ಕೊನೆಯ ಪಕ್ಷ ಬರೀ ಕಾಮಗಾರಿಗಳಿಗೆ check dams ಏನು ಜನಕ್ಕೆ ಕೆಲಸ ಸಿಗುವಂಥ ಕಾಮಗಾರಿಗಳು ಇದ್ದಾವೆ, ದಿನನಿತ್ಯ ಅಂಥ ಕಾಮಗಾರಿಗಳಿಗೆ ಕೊನೆಯಪಕ್ಷ 50 ಲಕ್ಷ ರೂಪಾಯಿಯನ್ನು ಒಂದು ಗ್ರಾಮಪಂಚಾಯಿತಿಗೆ ಕೊಡದೇ ಹೋದರೆ ಏನು ಕೆಲಸ ಮಾಡುತ್ತಾರೆ?ನೀವೂ ಬರಪರಿಹಾರಕ್ಕೆ ದುಡ್ಡು

ಬಿಡುಗಡೆ ಮಾಡುವ ಹಾಗಿಲ್ಲ. ರಾಜ್ಯ ಸರ್ಕಾರವೂ ಬಿಡುಗಡೆ ಮಾಡುವ ಹಾಗಿಲ್ಲ. ಒಂದು ಗ್ರಾಮಪಂಚಾಯಿತಿಗೆ ರೂ.50-60 ಲಕ್ಷ ಬೇಕಾಗುತ್ತದೆ. ಕೋಟಿ ಅಲ್ಲ ಅಥವಾ ರೂ. 70 ಲಕ್ಷ ಬೇಕಾಗುತ್ತದೆ spill over ಬಿಟ್ಟು. ಇದನ್ನು ಮಾಡಬೇಕು. ಅಲ್ಲಾದರೆ ಅಲ್ಪಸ್ವಲ್ಪ ಹಣ ಸಿಗುತ್ತದೆ, ತೆಗೆದು ಕೊಂಡು ಬನ್ನಿ ಜಾಬ್‌ಕಾರ್ಡ್ ಯಾರೂ ಮಾಡಿಲ್ಲ. ಅವರನ್ನು ಮಟ್ಟ ಹಾಕಿ ಈ PDO ಗಳನ್ನು ತೆಗೆದುಕೊಂಡು ಬಿಟ್ಟರೆ ಅವರು ಗ್ರಾಮೀಣ ಬದುಕನ್ನೇ ಬದಲಾಯಿಸಿಬಿಡುತ್ತಾರೆ. ಅವರನ್ನು ಮಟ್ಟಹಾಕಿ ಸ್ಥಳೀಯ ಸಂಸ್ಥೆಗಳ ವಿಕಾಸ ಆಗುತ್ತದೆ ಎಂದು ಹೇಳಿ ಬಹಳ ಕಷ್ಟಪಟ್ಟು ಶ್ರೀ ಜಗದೀಶ್ ಶೆಟ್ಟರ್‌ರವರು ಗ್ರಾಮೀಣಾಭಿವೃದ್ಧಿ ಮಂತ್ರಿಗಳಾಗಿದ್ದಾಗ P.D.O.ಹುದ್ದೆಗಳನ್ನು ತಂದರು. ನಾವು ಹಾಗೆಯೇ ತಿಳಿದುಕೊಂಡಿದ್ದೆವು. ಆದರೆ ಅವರು ಏನಾಗಿದ್ದಾರೆಂದರೆ, ಗ್ರಾಮಪಂಚಾಯತಿಗಳಲ್ಲಿ ಕಾರ್ಯದರ್ಶಿ ಒಬ್ಬರೇ ಇದ್ದರು. P.D.O. ಸೇರಿ ಡಬಲ್ ಆಗಿದ್ದಾರೆ ಅಷ್ಟೇ.ಸಿಂಗಲ್ ತೆಗೆದುಕೊಳ್ಳು-ತ್ತಿದ್ದರು, ಅವರು ಡಬಲ್ ಆಗಿದ್ದಾರೆ ಅಷ್ಟೇ. ತೆಗೆದುಕೊಳ್ಳುವ ಒಂದು ಕೈ ಜೊತೆಗೆ ಇನ್ನೊಂದು ಕೈ ಜಾಸ್ತಿ ಮಾಡಿದ್ದಾರೆಯೇ ಹೊರತು ಇನ್ನೇನೂ ಆಗಿಲ್ಲ. ಕಾರ್ಯದರ್ಶಿಗಳು ಒಂದು ಕೈ ತೆಗೆದುಕೊಳ್ಳುತ್ತಿದ್ದರು, ನಾನು ಸೆಕ್ರೇಟರಿ ಗ್ರೇಡ್ ಅಲ್ಲ, ನಾನು ಪಿ.ಡಿ.ಓ. ಗ್ರೇಡ್, ನನಗೆ ಡಬಲ್ ಕೊಡು ಎಂದು ಹೇಳಿ ಡಬಲ್ ಕಿತ್ತುಕೊಳ್ಳುವುದಕ್ಕೆ ಮಾಡಿದರು. ಇನ್ನೂ ಕೊರತೆ ಬೀಳುವಂಥ ಪರಿಸ್ಥಿತಿ ನಿರ್ಮಾಣವಾಗುವ ಹಂತದಲ್ಲಿ ಬಂದು ನಿಂತಿದೆ. ಏನಾಗಿದೆ? ಅವರಿಗೆ Job card ಮಾಡಿಸುವುದು ಗೊತ್ತಾ? Computer ಗೆ feed ಮಾಡುವುದು ಗೊತ್ತಾ?Computer ಗೆ feed ಮಾಡದೇ ಇರುವುದರಿಂದ ಎಷ್ಟೋ ಜನರಿಗೆ ದುಡ್ಡು ಕೊಡುವುದಕ್ಕೆ ಆಗಿಲ್ಲ. ಇಂಥ ಪರಿಸ್ಥಿತಿಯೂ ಕೂಡಾ ಇವತ್ತು NREG ನಲ್ಲಿ ಇದೆ. ನೀವು ಸಲೀಸಾಗಿ ಹೇಳಿ ಬಿಡುತ್ತೀರಿ, ಬರಪರಿಹಾರ ಕಾಮಗಾರಿಗಳನ್ನು ಕೊಡು-ವುದಕ್ಕೆ ಆಗುವುದಿಲ್ಲ, NREG ಯನ್ನು ಉಪಯೋಗಿಸಿಕೊಳ್ಳಿ ಎಂದು ಹೇಳುತ್ತೀರಿ. ಆದರೆ, NREG ಪರಿಸ್ಥಿತಿ ಈ ರೀತಿ ಆಗಿದೆ. ಅಲ್ಲಿ ದುಡ್ಡೇ ಇಲ್ಲ, ಎಲ್ಲಾspillover ಕೆಲಸ ಆಗಿಹೋಗಿದೆ. ದುಡ್ಡು ಬಾಕಿಯಿದೆ, ಹೇಗೋ ತಿರಿಸಿಕೊಂಡು ಹೋಗುತ್ತಾರೆ ಈಗ ಉಳಿದಿರುವ ಹಣ ಇಲ್ಲವರೆಂದರೆ, ಮಾನ್ಯ ಕಂದಾಯ ಸಚಿವರೇ ದಯವಿಟ್ಟು ಉದ್ಯೋಗ ಖಾತರಿಗೆ ಹೊಸದಾಗಿ ಕ್ರಿಯಾ ಯೋಜನೆ ಮಾಡಿಸಿ ಈಗ ಹೊಸದಾಗಿ ಒಂದೊಂದು ಗ್ರಾಮ ಪಂಚಾಯಿತಿಗೆ ಕೊನೆಯ ಪಕ್ಷ ರೂ.50 ಲಕ್ಷಗಳ ಹಣವನ್ನು ಮತ್ತು ಹೊಸದಾಗಿ ಕ್ರಿಯಾ ಯೋಜನೆಯನ್ನು

ಮಾಡತಕ್ಕದ್ದರ ಜೊತೆಗೆ ನಿಮ್ಮಲ್ಲೇ ಇರುವ Social forest ನವರು 2 ರೂಪಾಯಿ 70 ಪೈಸೆ ಒಂದು ಗಿಡಕ್ಕೆ ಚಾರ್ಜ್ ಮಾಡುತ್ತಾರೆ. 2 ರೂಪಾಯಿ 70 ಪೈಸೆಗೆ ಇವರು ಮಾಡುವಂಥ ಗಿಡವನ್ನು 70 ಪೈಸೆಗೆ ನಮ್ಮ ಹುಡುಗರು ಮಾಡಿಕೊಡುತ್ತಾರೆ. Social forest ನವರು ಒಂದು ಗಿಡಕ್ಕೆ ನಮ್ಮ ಹುಡುಗರಿಗೆ 60 ಅಥವಾ 70 ಪೈಸೆ ಕೊಡುತ್ತಾರೆ. ಉಳಿದ 2 ರೂಪಾಯಿಯ ಗಂಟನ್ನು ಇವರೇ ಹೊಡೆಯುತ್ತಾರೆ. ಏನು ಸಿಗುತ್ತದೆ ಅದರಲ್ಲಿ ಗ್ರಾಮ ಪಂಚಾಯಿತಿಯ ಮುಂದೆ ಅಪ್ಸಣ್ಣೆ ಗಿಡ ಕೊಡುತ್ತಾರೆ. ಎಂತೋದೋ ಗಿಡ ತೇಗದ ಗಿಡಗಳಂಥ ಉಪಯೋಗಕ್ಕೆ ಬರುವ ಗಿಡಗಳನ್ನು ಇವರು ಕೊಡುವುದಿಲ್ಲ, ಗ್ರಾಮ ಪಂಚಾಯಿತಿಗೆ ತೆಗೆದುಕೊಂಡು ಹೋಗಿ dump ಮಾಡಿ ಬರುತ್ತಾರೆ. ಆ ಗಿಡಗಳನ್ನು ನೆಟ್ಟರೆ ರೂ.15 ಸಿಗುತ್ತದೆ ಎಂದು ಹೇಳಿ ಯಾರ್ಯಾರು ಹೊತ್ತುಕೊಂಡು ಹೋಗುತ್ತಾರೋ? ನನಗೆ 20 ಗಿಡ ಬರಿ ನನಗೊಂದು 30 ಗಿಡ ಬರಿ ಕೊಡಿ ಎಂದು ಹೇಳುತ್ತಾರೆ. ಒಂದು ಗಿಡವನ್ನು ನೆಟ್ಟಿಲ್ಲ. ಇವತ್ತು ಆತ್ಮಸಾಕ್ಷಿಯಾಗಿ ಹೇಳುತ್ತೇನೆ, ಇದನ್ನು ಮೊದಲು ತೆಗೆದುಹಾಕಿ ಇದರಿಂದ ಒಂದೇ ಒಂದು ಗಿಡ ಇವತ್ತು ಅಭಿವೃದ್ಧಿಯಾಗಿಲ್ಲ. ಏಕೆಂದರೆ, ಇವತ್ತು ಕುಡಿಯುವುದಕ್ಕೆ ನೀರಿಲ್ಲ. ಇನ್ಯಾವುದಕ್ಕೆ ಗಿಡ ತೆಗೆದುಕೊಂಡು ಹೋಗಿ ನೆಡುತ್ತಾರೆ?

ಉಪಾಧ್ಯಕ್ಷರು: ನಮ್ಮ Assembly proceedings ನ್ನು ವೀಕ್ಷಣೆ ಮಾಡುವುದಕ್ಕೆ chinese Delegates ಬಂದಿದ್ದಾರೆ. On behalf of Hon'ble members of karnataka Legislative Assembly I welcome Mr.Sun shoungang, member of standing committee and minister of publicity Department of CPC shandong province and other members of the delegation who are witnessing the Assembly proceedings from the speaker's Gallery.

ಶ್ರೀ ಕೆ.ಎಂ.ಶಿವಲಿಂಗೇಗೌಡ: ಚೈನೀಸ್ ಭಾಷೆ ನನಗೆ ಬರುವುದಿಲ್ಲ.

ಉಪಾಧ್ಯಕ್ಷರು: ನಿಮ್ಮ ಭಾಷಣ ವೀಕ್ಷಣೆ ಮಾಡುವುದಕ್ಕೆ ಬಂದಿದ್ದಾರೆ ಮಾತನಾಡಿ.

ಶ್ರೀ ಕೆ.ಎಂ.ಶಿವಲಿಂಗೇಗೌಡ: ಈ Social forest ಗೆ ದಯವಿಟ್ಟು ದುಡ್ಡು ಕೊಡುವುದನ್ನು ನಿಲ್ಲಿಸಿ. ಅಲ್ಲಿ ಮೋಸವಾಗುತ್ತಿದೆ, ನಾನು ನೇರವಾಗಿ ಹೇಳುತ್ತಿದ್ದೇನೆ. ಆ ಗಿಡಗಳನ್ನು 70 ಪೈಸೆಗೆ ತೆಗೆದುಕೊಳ್ಳುತ್ತಾರೆ, ನಮ್ಮವರೇ ಫಾರಂನಲ್ಲಿ ಮಾಡಿಕೊಡುತ್ತಾರೆ. ಅವನ್ನು 2 ರೂಪಾಯಿಗೆ ಒಂದರಂತೆ

ತಂದು ಮಾರುತ್ತಾರೆ. 2 ರೂಪಾಯಿಗೆ ಬಂದರಂತೆ ಉದ್ಯೋಗ ಖಾತರಿಯಲ್ಲಿ ಕೊಡುತ್ತಾರೆ. ಅದರಲ್ಲಿ ಆ ಗಿಡವನ್ನು ನೆಟ್ಟರೆ 15 ರೂಪಾಯಿ ಕೊಡುತ್ತಾರೆ.15 ರೂಪಾಯಿಗೋಸ್ಕರ ಆ ಗಿಡವನ್ನು ಯಾರಾದರೂ ಹೊತ್ತುಕೊಂಡು ಹೋಗುತ್ತಾರೆ. ತೆಗೆದುಕೊಂಡು ಹೋಗಿ ಎಲ್ಲೋ ಎಸೆದು ಹೋಗುತ್ತಾರೆ, ಯಾರೂ ಬೆಳೆಸುತ್ತಿಲ್ಲ. ಎಲ್ಲೋ ಪಂಪ್ ಹೌಸ್ ಇರುವಂಥವನು ಒಳ್ಳೆ ಜಾತಿ ಗಿಡ ಕೊಟ್ಟರೆ silver ಗಿಡ, ತೇಗದಂಥ ಗಿಡಗಳನ್ನು ಕೊಟ್ಟರೆ ಮಾತ್ರ, ಪಂಪ್ ಹೌಸ್ ಇರುವವನು, ನೀರಾವರಿ ಸೌಲಭ್ಯ ಇರುವವನು ಹಾಕಿಕೊಳ್ಳುತ್ತಾರೆ. ಆದ್ದರಿಂದ, ದಯವಿಟ್ಟು ನೀರಾವರಿ ಸೌಲಭ್ಯ ಇಲ್ಲದೇ ಇರುವವರಿಗೆ ಗಿಡ ಕೊಡುವುದು ಬೇಡ. ಇದನ್ನು ಹೇಳುತ್ತಾ, ನಿಜವಾಗಿಯೂ ಇದರಿಂದ ಸಾವಿರಾರು ಕೋಟಿ, ನೂರಾರು ಕೋಟಿ ಹಾಳಾಗಿ ಹೋಗುತ್ತಿದೆ. ನಿಜವಾಗಿಯೂ ಅನ್ಯಾಯವಾಗಿ ಹೋಗುತ್ತಿದೆ. ದಯವಿಟ್ಟು ಉದ್ಯೋಗ ಖಾತರಿಯಿಂದ ಈ ಮಾನ–ದಂಡವನ್ನು ಮೊದಲು ತೆಗೆದು ಎಸೆಯಿರಿ. ಈ ಉದ್ಯೋಗ ಖಾತರಿಯಲ್ಲಿ ಯಾರ್‍ಯಾರಿಗೋ ಎಂತೆಂಥದೋ ಪರ್ಸೆಂಟೇಜ್ ಕೊಟ್ಟು ಹಾಳು ಮಾಡಬೇಡಿ. ಗ್ರಾಮೀಣ ಪ್ರದೇಶಗಳಲ್ಲಿ ಇದೊಂದು ಸದಾವಕಾಶ. ಆ ಒಳಚರಂಡಿ ವ್ಯವಸ್ಥೆ, ಕಾಂಕ್ರೀಟ್ ರಸ್ತೆಗಳಿಗೆ SCP/TSP ನಲ್ಲಿ ದುಡ್ಡನ್ನು ಕೊಡುತ್ತಿದ್ದೀರಿ. ನಾವು ಬೋವಿ ಕಾಲೋನಿ, ಹರಿಜನ . ಕೇರಿಗಳಲ್ಲಿ ಮಾಡುತ್ತಿದ್ದೇವೆ. ಜನರೆಲ್ಲರೂ ಇವನು ಏತಕ್ಕಾಗಿ ಬರೀ ಹರಿಜನ ಕಾಲೋನಿಯನ್ನು ಹುಡುಕಿಕೊಂಡು ಹೋಗುತ್ತಿದ್ದಾನೆ? ಇವನು next ವೋಟ್ ಕೇಳುವುದಕ್ಕೆ general ಕಾಲೋನಿಗೆ ಬರಲಿ ಎಂದು ನಮಗೆ ಹೇಳುತ್ತಿದ್ದಾರೆ. ಎಂ.ಎಲ್.ಎ.ಗಳಿಗೆ ಇದು ಬೇರೆ ಚಿಂತನೆ ಶುರುವಾಗಿದೆ. ದಯವಿಟ್ಟು ಈ ಜನರಲ್ ಕಾಲೋನಿಗಳಿಗೂ ಸಹNREGನಲ್ಲಿ ಕಾಂಕ್ರೀಟ್ ರಸ್ತೆ ಮಾಡುವಂಥ ವ್ಯವಸ್ಥೆಯನ್ನು ಕಲ್ಪಿಸಿ ಕೊಡಿ. ಈ ಮಾನದಂಡವನ್ನು, ಈ ಪರ್ಸೆಂಟೇಜ್‌ನ್ನು ತೆಗೆದು ಹಾಕಿ. ದಯವಿಟ್ಟು ಎಲ್ಲಾ ಎಂ.ಎಲ್.ಎ ಗಳು ಸರ್ಕಾರಕ್ಕೆ ಒಳ್ಳೆಯ ಹೆಸರು ಬರಬೇಕಾದರೆ ನಾನು ಹೇಳುತ್ತಿಲ್ಲ, ಗ್ರಾಮೀಣ ಪ್ರದೇಶದಲ್ಲಿ ಜನ ಏನು ಮಾತನಾಡುತ್ತಿದ್ದಾರೆ ಎನ್ನುವುದನ್ನು ಸರ್ಕಾರದ ಗಮನಕ್ಕೆ ತರುತ್ತಿದ್ದೇನೆ. ನನ್ನದೇನು ಇದು ವೈಯುಕ್ತಿಕವಾಗಿರುವಂಥದ್ದಲ್ಲ. ದಯವಿಟ್ಟು ಈ ಒಂದು ಉದ್ಯೋಗ ಖಾತರಿಯಲ್ಲಿ ಈ ಒಂದು ಕೆಲಸವನ್ನು ಮಾಡತಕ್ಕ ಜವಾಬ್ದಾರಿಯನ್ನು ನಿಜವಾಗಿಯೂ ಸರ್ಕಾರ ತೆಗೆದುಕೊಳ್ಳಬೇಕು

ಎನ್ನುವ ಮಾತನ್ನು ಸಹ ಈ ಸಂದರ್ಭದಲ್ಲಿ ಹೇಳುವುದಕ್ಕೆ ನಾನು ಬಯಸುತ್ತೇನೆ.

ಶ್ರೀ ಅಮರೇಶ್: ತಾವು ಮಾನದಂಡವನ್ನು ತೆಗೆದುಹಾಕಿ ಎಂದು ಹೇಳುತ್ತಿದ್ದೀರಿ. ಎಸ್.ಸಿ./ ಎಸ್.ಟಿ.ಗೆ ಸಿಗಬೇಕಾದಂಥ 22.75% ಮಾನದಂಡ ತೆಗೆಯಬಾರದು ಎಂದು,ಯಾವುದೇ ಆಗಲಿ ಅನುದಾನವನ್ನು ಹಂಚಿಕೆ ಮಾಡಬೇಕಾದರೆ, 22.75% ಎಸ್.ಸಿ./ಎಸ್.ಟಿ. ಅನುದಾನ ಏನಿದೆ.ಅದನ್ನು ತೆಗೆಯಬಾರದು.

ಶ್ರೀ ಕೆ.ಎಂ.ಶಿವಲಿಂಗೇಗೌಡ: ಎಸ್.ಸಿ./ ಎಸ್.ಟಿ.ಗೆ ಕೊಡಲೇ-ಬೇಕು. ಅವರದ್ದನ್ನಲ್ಲ ನಾನು ಹೇಳುತ್ತಿರುವುದು ತಪ್ಪು misguide ಮಾಡಿಕೊಳ್ಳಬೇಡಿ. ಉಳಿದಿರುವ ದುಡ್ಡನ್ನು ದಯವಿಟ್ಟು ರೋಡ್‌ಗಳಿಗೆ ಕೊಡಲಿ.

ಶ್ರೀ ಅಮರೇಶ್: 22.75% ತೆಗೆಯುವುದು ಬೇಡ.

ಶ್ರೀ ಕೆ.ಎಂ.ಶಿವಲಿಂಗೇಗೌಡ: 22.75% ಖರ್ಚು ಮಾಡುತ್ತಾರೆ, ಅಂಬೇಡ್ಕರ್ ಬರೆದು ಸಹಿ ಹಾಕಿ ಹೋಗಿರುವುದನ್ನು ಯಾರು ತೆಗೆಯುವುದಕ್ಕೆ ಆಗುವುದಿಲ್ಲ. ಅದು ಯಾರ ಕೈಯಲ್ಲೂ ಆಗುವುದಿಲ್ಲ, ಅದನ್ನು ಎಲ್ಲರೂ ಮಾಡಬೇಕು. ಆದರೆ, ಅದನ್ನು ಉಪಯೋಗಿಸುತ್ತಿರುವ ರೀತಿಯಲ್ಲಿ ನೀವ್ಯಾರೂ ಕೇಳಿಲ್ಲ. ನಿಮ್ಮ SCP ದುಡ್ಡನ್ನು ಮೆಟ್ರೋ ರೈಲಿಗೆ ಉಪಯೋಗಿಸುತ್ತಿದ್ದಾರೆ, ಗೊತ್ತಿದೆಯಾ ನಿಮಗೆ? ಸ್ಟೇಟ್ ಹೈವೇಗೆ ಹಾಕಿ ಎಂದು ಹೇಳುತ್ತಿದ್ದಾರೆ ಗೊತ್ತಾ ನಿಮಗೆ? ಸ್ಟೇಟ್ ಹೈವೇಯಲ್ಲಿ ಬರೀ ಹರಿಜ-ನರು ಮಾತ್ರ ತಿರುಗಾಡುತ್ತಾರಾ? ಇರುವಂಥ concept ಹರಿಜನ ಕಾಲೋ-ನಿಯೊಳಗೆ ಹರಿಜನ ಕೇರಿಗಳಲ್ಲಿ ಉದ್ಧಾರ ಮಾಡಬೇಕು ಎನ್ನುವ ಭಾವನೆ ಇರುವುದು, ಆದರೆ ಈಗ ಏನು ಮಾಡುತ್ತಿದ್ದಾರೆ? ನೀವು ಯಾರೂ ಕೇಳುವುದೇ ಇಲ್ಲ, ಪಿ.ಡಬ್ಲ್ಯೂ.ಡಿ. ಸಚಿವರಾದ ಉದಾಸಿಯವರಿಗೆ ಗೊತ್ತಿದೆ. ಪಿಡಬ್ಲ್ಯೂಡಿಯಲ್ಲಿ ಎಷ್ಟು ಕೋಟಿ ರೂಪಾಯಿಗಳನ್ನು ಇದಕ್ಕಾಗಿ ವೆಚ್ಚ ಮಾಡಿದ್ದಾರೆ? ನಮ್ಮ ಗೋವಿಂದ ಕಾರಜೋಳರವರನ್ನು ಕೇಳಿ. ಇವತ್ತು ಎಸ್.ಸಿ.ಪಿ. ದುಡ್ಡು ರೂ.34 ಕೋಟಿಗಳನ್ನು ಯಾವ್ಯಾವುದೋ ಹೆಡ್‌ನಲ್ಲಿ ಕೊಟ್ಟು ಇವತ್ತು ಖರ್ಚು ಮಾಡುವುದಕ್ಕೆ ಆಗುತ್ತಿಲ್ಲ.

ಶ್ರೀ ವೆಂಕಟರಮಣಪ್ಪ: ನಾವು ವಿರೋಧ ಮಾಡಿದ್ದೇವೆ.

ಶ್ರೀ ಕೆ.ಎಂ.ಶಿವಲಿಂಗೇಗೌಡ: ಹೌದು, ವಿರೋಧ ಮಾಡಲೇಬೇಕು. ಎಸ್.ಸಿ.ಪಿ/ ಎಸ್.ಟಿ.ಪಿ. ದುಡ್ಡನ್ನು ಕಾಲೋನಿಗಳಲ್ಲಿ ಉಪಯೋಗಿಸುವಂಥ ವ್ಯವಸ್ಥೆ ಆಗಲೇಬೇಕು.

ಶ್ರೀ ಅಮರೇಶ್: ನಾವು ಎಸ್.ಸಿ./ಎಸ್.ಟಿ. ಕಮಿಟಿಯಲ್ಲಿ ಇದ್ದೇವೆ. ಕಮಿಟಿಗೆ ಈ ವಿಷಯ ಬಂದಾಗ ನಾವು ಚರ್ಚೆ ಮಾಡುತ್ತೇವೆ. ನಾವು ಸೂಚನೆಯನ್ನು ಕೊಟ್ಟಿದ್ದೇವೆ ಇದನ್ನು ತೆಗೆಯಬೇಕು ಎಂದು ಹೇಳಿದ್ದೇವೆ.

ಶ್ರೀ ಕೆ.ಎಂ.ಶಿವಲಿಂಗೇಗೌಡ: ನಾನು ಹೇಳುತ್ತಿರುವುದು ಅರಣ್ಯ ಇತ್ಯಾದಿಗಳಿಗೆ ಮೀಸಲಿಟ್ಟಿರುವ ಹಣವನ್ನು divert ಮಾಡಿ, General ಏರಿಯಗಳಲ್ಲಿ ಚರಂಡಿ, ರಸ್ತೆ ಮಾಡುವುದಕ್ಕೆ ಕೊಡಿ ಎಂದು ಹೇಳುತ್ತಿದ್ದೇನೆ. ಎಸ್.ಸಿ.ಪಿ./ಎಸ್.ಟಿ.ಪಿ. ನಲ್ಲಿ ಕಾಲೋನಿಗಳು ಉದ್ಧಾರವಾಗಬೇಕು ಎನ್ನುವ ವಿಚಾರದಲ್ಲಿ ನಾನು ಮೊದಲಿಗನಾಗಿದ್ದೇನೆ. ನಾನು ಏತಕ್ಕಾಗಿ ವಿರೋಧ ಮಾಡಲಿ ಇವತ್ತು ಹಾಲು ಉತ್ಪತ್ತಿ ಬಗ್ಗೆ ನಮ್ಮ ಯಡಿಯೂರಪ್ಪನವರು ರೂ.950 ಕೋಟಿ ಕೊಟ್ಟಿದ್ದೇವೆಎಂದು ಹೇಳಿದರು. ಅದು ಸತ್ಯ ಇವತ್ತು ಏನಾದರೂ ಬಡತನ ನಿವಾರಣೆಯಲ್ಲಿ ರೈತರ ಪರವಾಗಿ ಯಾವುದದರೂ ಒಂದು ಯೋಜನೆ ನಿಂತಿದೆ ಎಂದರೆ ಹಾಲಿನ ಡೈರಿ, ಪಶುಸಂಗೋಪನೆ. ಅದು ಇಲ್ಲದೇ ಇದ್ದಿದ್ದರೆ ನಮ್ಮ ಕೋಲಾರ, ಹಾಸನ ಇಲ್ಲಿನ ಬಹಳ ಜನ ರೈತರು ಬೆಂಗಳೂರಿಗೆ ಬಂದು ಬೀಳಬೇಕಾಗುತ್ತಿತ್ತು. ಇವತ್ತು ಒಂದೋ ಎರಡೋ ಹಸುಗಳನ್ನು ಕಟ್ಟಿಕೊಂಡು ಜೀವನ ಮಾಡುತ್ತಿದ್ದರು. ಅವರು ರೂ. 2 ಕೊಟ್ಟಿರುವುದನ್ನು ನಾನು ಸ್ವಾಗತ ಮಾಡುತ್ತೇನೆ. ಅದನ್ನು ವಿರೋಧ ಮಾಡುವುದಿಲ್ಲ. ನಿಜವಾಗಿಯೂ ಒಳ್ಳೆಯ ತೀರ್ಮಾನ ತೆಗೆದುಕೊಂಡಿದ್ದಾರೆ. ಆದರೆ ಇವತ್ತು 9 ಸಾವಿರ ಟನ್ ಪೌಡರ್ ಅಲ್ಲಿ ಕೊಳೆಯುತ್ತಿದ್ದು, ಇವತ್ತು ರೈತರಿಗೆ, ಅದು ಒಂದು Employment Guarantee Scheme ರೀತಿಯಲ್ಲಿ ಇತ್ತು ಆ ಸ್ಕೀಂ, ಗುರುವಾರದ ದಿವಸ ಗಂಡಸಿ ಸಂತೆ ಅಂದರೆ ಬುಧವಾರದ ದಿವಸ ಎಣಿಸಿಕೊಂಡು ಬೆಳಿಗ್ಗೆ ಎದ್ದು ಬಂದು ಸಂತೆಯಲ್ಲಿ ಸಾಮಾನು ತೆಗೆದುಕೊಂಡು ಊರಿಗೆ ಹೋಗುತ್ತಿದ್ದರು. ಇವತ್ತು ಬಟವಾಡೆ ಕೊಡದೆ 7 ವಾರ ಆಗಿದೆ, ಏತಕ್ಕಾಗಿ ಸ್ವಾಮಿ ಈ ರೀತಿ ಮಾಡಿದ್ದೀರಿ? ಅದನ್ನು ಮಾರಾಟ ಮಾಡಿಸಿ ರೈತರಿಗೆ ಪೇಮೆಂಟ್ ಕೊಡಿಸಬಾರದೇ? ಈ ಬರಗಾಲದಲ್ಲಿ ಹೇಗೆ ಮನೆ ಖರ್ಚು ಸರಿದೂಗಿಸುತ್ತಾರೆ? ಮನೆ ಖರ್ಚಿಗೆ ಎಲ್ಲಿಂದ ಹಣವನ್ನು ತರುತ್ತಾರೆ? ಇವತ್ತು ರೂ.200 ಕೋಟಿ ಪ್ರಾಡೆಕ್ಟ್ ಅಲ್ಲಿ ಬಿದ್ದಿದೆ, ಅದನ್ನು ಮಾರಾಟ ಮಾಡಿದರೆ ಸುಮಾರು ರೂ. 70 ಕೋಟಿ ಇವತ್ತು ಕರ್ನಾಟಕ ರಾಜ್ಯಕ್ಕೆ ಲಾಸ್ ಆಗುತ್ತದೆ. ಏನು ಮಾಡುತ್ತಿದ್ದಾರೆ? ಇದರ ಬಗ್ಗೆ ಚಿಂತನೆ ಮಾಡಬಾರದೇ? ಸರ್ಕಾರ ಇದರ ಮಧ್ಯೆ ಪ್ರವೇಶ ಮಾಡಬೇಕು. ಸಮಿತಿ ಅಥವಾ board ಇರಬಹುದು, ಆದರೆ ಸರ್ಕಾರ ಮಧ್ಯಪ್ರವೇಶ ಮಾಡಿ ಅದನ್ನು ಎಲ್ಲಿಂದಾದರೂ NDDBಯಿಂದ ಸಾಲ

ತಂದು ರೈತರಿಗೆ ಒದಗಿಸುವಂತ ಕೆಲಸವನ್ನು ದಯಮಾಡಿ ಮಾಡಬೇಕಾಗುತ್ತದೆ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಬಯಸುತ್ತೇನೆ.

ಇವತ್ತು ಬರ ಬಂದಿದೆ ಎಂದು ಪಡಿತರ ಚೀಟಿ ಬೇಗ ಕೊಡಿ ಎಂದು ಹೇಳುತ್ತಿದ್ದೀರಿ. ನಾವು ಶಾಸಕರಾಗಿ ಆಯ್ಕೆಯಾಗಿ ನಾಲ್ಕು ವರ್ಷವಾಯಿತು. ಚುನಾವಣೆ ಬರುತ್ತದೆ. ಎಂದು ಕೊಡುವುದಾದರೆ ಅನೌನ್ಸ್ ಮಾಡಿ ಕೊಟ್ಟು ಬಿಡಿ. ನಾವು ಬೇಡವೆಂದು ಹೇಳುವುದಿಲ್ಲ. ಮಾನ್ಯ ಯಡಿಯೂರಪ್ಪನವರು ಸರಿಯಾಗಿ ಚುನಾವಣಾ ಭಾಷಣ ಮಾಡಿ ಹೋಗಿದ್ದಾರೆ. ಚುನಾವಣೆಗೆ ಏನೇನು ಬೇಕು ಅವೆಲ್ಲಾ ಅನೌನ್ಸ್ ಮಾಡಿ ಎಂದು ಮಾನ್ಯ ಮುಖ್ಯ ಮಂತ್ರಿಗಳಿಗೆ ಹೇಳಿ ಹೋಗಿದ್ದಾರೆ. ಅದು ಅನೌನ್ಸ್ ಮಾಡುವುದು ಬಿಡುವುದು ಮಾನ್ಯ ಮುಖ್ಯಮಂತ್ರಿಗಳಿಗೆ ಬಿಟ್ಟಿದ್ದು. ಆದರೆ ಆ ರೀತಿ ಪಡಿತರ ಚೀಟಿಯನ್ನು ಕೊಡುವುದರ ಬಗ್ಗೆ ನಾನು ಈ ಸದನದಲ್ಲಿ 10 ಸಾರಿ ಬಡಿದುಕೊಂಡಿದ್ದೇನೆ. ನಮ್ಮ ಮಾತಿಗೆ ಕಿವಿ ಕೊಡಲಿಲ್ಲ. ಪಡಿತರ ಚೀಟಿ ವ್ಯವಸ್ಥೆಯನ್ನು ಏನು ಮಾಡಿದಿರಿ? ಸರಿಯಾದ ರೀತಿಯಲ್ಲಿ ಹಂಚಿದ್ದೀರಾ? ಕೊಮ್ಯಾಟ್ ಎಂಬ ಬೋಗಸ್ ಸಂಸ್ಥೆ ಅವನಿಗೆ ಕೊಟ್ಟು ಹಾಳು ಮಾಡಿದರು. ಅದನ್ನು ನಾನು ಒಪ್ಪಿಕೊಳ್ಳುತ್ತೇನೆ. ಅವನು ಏನೂ ಮಾಡಲಿಲ್ಲ ಎಲ್ಲಾ ದುಡ್ಡು ಹೊಡೆದುಕೊಂಡು ಹೋದ. ಒಂದು ಕಾರ್ಡಿಗೆ 50 ರೂಪಾಯಿ, ಡೂಪ್ಲಿಕೇಟ್ ಕಾರ್ಡ್‌ಗೆ ಫೋಟೋ ಹೊಡೆಯುವುದಕ್ಕೆ ಬಂದವನು 200 ರೂಪಾಯಿ ಕಿತ್ತುಕೊಂಡು ಹೋದ. ಅದರ ಬಗ್ಗೆ ತನಿಖೆ ಮಾಡಿದ್ದೀರಾ? 200 ರೂಪಾಯಿ ಕೊಡು ನಿನಗೆ ಒಂದು ಫೋಟೋ ಹೊಡೆದು ಕೊಡುತ್ತೇವೆಂದು ಹಣ ಕಿತ್ತುಕೊಂಡ. 50--50 ರೂಪಾಯಿ ದುಡ್ಡು ಕೊಡಿಸಿದಿರಿ. ದುಡ್ಡು ತೆಗೆದುಕೊಂಡು ಹೋದ. ಕೊಮ್ಯಾಟ್ ಅವನು ಎಲ್ಲಿ ಹೋದ? ಅವನಿಗೆ ದುಡ್ಡು ಕೊಡುವುದಿಲ್ಲವೆಂದು ಹೇಳುತ್ತೀರಿ, ಅವನಿಗೆ ದುಡ್ಡು ಏಕೆ ಬೇಕು? ಇಲ್ಲಿ ಹೊಡೆದಿರುವ ದುಡ್ಡು ಇಲ್ಲವಾ? ಅವನು ನಮ್ಮ ಕೈಗೆ ಸಿಗಲಿಲ್ಲ. ಪಡಿತರ ಚೀಟಿ ವಿತರಣೆಯಲ್ಲಿ ಎಷ್ಟು ಅನ್ಯಾಯ ಮಾಡಿದ್ದಾನೆ ಗೊತ್ತಾ? ಅದು ಒಂದು ಕಡೆ ದಾರಿ ಆಯಿತು. ಮತ್ತೆ ನೆಮ್ಮದಿ ಮುಂದೆ ಬರಲಿ ಎಂದಿರಿ. ನಾನು ಅವತ್ತೇ ಹೇಳಿದೆ ಇದು purely ರಾಜಕೀಯ. ಪಾರ್ಲಿಮೆಂಟರಿ ಚುನಾವಣೆ ಬಂದಿತು, ನಾನು ಒಂದು ಸಾರಿ 14 ಓಟುಗಳಿಂದ ಸೋತಾಗ 14,000 ಡೂಪ್ಲಿಕೇಟ್ ಕಾರ್ಡುಗಳನ್ನು ಪ್ರಿಂಟ್ ಮಾಡಿ ತುಮಕೂರಿನಿಂದ ತಂದು ಹಂಚಿದ್ದರು. ಆಗ ನಾನು ಚುನವಣೆಯಲ್ಲಿ ಸೋತೆ. ನೆಮ್ಮದಿ ಮುಂದೆ ಬಂದಿರಿ, ನೆಮ್ಮದಿ ಮುಂದೆ ಬರಬೇಕಾದವರು

ಯಾರು? ಅದಕ್ಕೆ ಒಂದು ನಿಯಮಾವಳಿ ಇಲ್ಲವಾ? ಯಾರು ಛಾಪಾ ಕಾಗದ ಹಿಡಿದುಕೊಂಡು ಬರುತ್ತಾರೆ ಅವರಿಗೆಲ್ಲಾ ಫೋಟೋ ಹೊಡೆದು ಅಕ್ಕಿ ಕೊಡುತ್ತೇವೆಂದು ಕೊಟ್ಟರಲ್ಲಾ ನೀವು ಇದಕ್ಕೆ ಯಾವುದೇ ಮಾನದಂಡ ಇಲ್ಲವಾ? ಕಾನೂನು ಇಲ್ಲವಾ? ಅದಕ್ಕೆ ಯಾರೂ ಹೇಳುವವರು ಇಲ್ಲವಾ? ಕೇಳುವವರು ಇಲ್ಲವಾ? ಹೋಗಲಿ ನೆಮ್ಮದಿ ಕೇಂದ್ರದ ಮುಂದೆ ಬಂದವರಿಗೆ ಪರಿಶೀಲನೆ ಮಾಡಿ ಅಕ್ಕಿ ಕೊಡುತ್ತೇವೆಂದು ಹೇಳಿದಿರಾ? ಇಲ್ಲ ಪಾರ್ಲಿಮೆಂಟ್ ಚುನಾವಣೆ ಹತ್ತಿರಕ್ಕೆ ಬಂದಿದೆ, ಇವರಿಗೆಲ್ಲಾ ಅಕ್ಕಿ ಕೊಟ್ಟು ಬಿಡಿ ಎಂದು ಕೊಟ್ಟಿರಿ. ಅವರು ಓಟು ಹಾಕಿದರು, ಓಟು ಹಾಕಿಸಿಕೊಂಡು ಪಾರ್ಲಿಮೆಂಟಿನ ಚುನಾವಣೆಯಲ್ಲಿ ಗೆದ್ದಿರಿ. ಸಂತೋಷ. ಪಾರ್ಲಿಮೆಂಟ್ ಚುನಾವಣೆ ಆಗಿ ಎಷ್ಟು ವರ್ಷವಾಯಿತು, ಆ ಪಾರ್ಲಿಮೆಂಟಿನ ಚುನಾವಣೆ ಆದ ಮೇಲಾದರೂ ನೀವು ಆ ಸಮಸ್ಯೆಯನ್ನು ಬಗೆಹರಿಸಬೇಕೋ ಬೇಡವೋ? ಆ ಸಮಸ್ಯೆಯನ್ನು ಹಾಗೆಯೇ ಮೂಲಭೂತವಾಗಿಟ್ಟುಕೊಂಡು ಆ ಸಮಸ್ಯೆಯನ್ನು ಹಾಳು ಮಾಡುತ್ತಿದ್ದೀರಿ. ಇವತ್ತು ನೆಮ್ಮದಿ ಗೊತ್ತಿಲ್ಲದೇ ಇರುವವನು ಕೊಮ್ಯಾಟ್ ಗೊತ್ತಿಲ್ಲದೆ ಇರುವವನು,ಫೋಟೋ ಕೊಡ- ಬೇಕೆಂದು ಗೊತ್ತಿಲ್ಲದೇ ಇರುವವನು, ನನಗೆ ಫೋಟೋ ಬಂದಿಲ್ಲ ಅಕ್ಕಿ ಬಂದಿಲ್ಲ ಎಂದು ಗೋಳಾಡುತ್ತಿದ್ದಾನೆ. ನಾನು ನನ್ನ ಕ್ಷೇತ್ರದಲ್ಲಿ ಸರ್ವೇ ಮಾಡಿಸಿದೆ. 2300 ಜನ ನಿರ್ಗತಿಕರು ಇದ್ದಾರೆ. ಸಾಯಂಕಾಲ ಹಬ್ಬದಲ್ಲಿ ಊಟ ಮಾಡುವವನು ಅವನಿಗೆ ಅಕ್ಕಿ ಕೊಡುತ್ತಿಲ್ಲ. ನ್ಯಾಯ ಬೆಲೆ ಅಂಗಡಿಯಲ್ಲಿ ಎರಡು ಕೆ.ಜಿ. ಮೂರು ಕೆ.ಜಿ. ಕೊಡಿ ಎಂದು ಹೇಳಿ ಕೊಡಿಸುತ್ತಿದ್ದೆವು. ಇವತ್ತು ಅವನೂ ಕೊಡುತ್ತಿಲ್ಲ. ಅವನು ದಿವಸಾ ಬೆಳಿಗ್ಗೆ ಎದ್ದು ಬರುತ್ತಾನೆ. ನಾನು ಈ ಸಾರಿ ಅಸೆಂಬ್ಲಿಗೆ ಹೋಗಿ ಬರುತ್ತೇನೆ, ಈ ಸಾರಿ ಹೋಗಿ ಮೀಟಿಂಗ್ ಕರೆದು ಹರೀಶ್‌ಗೌಡರಿಗೆ ಹೋಗಿ ಹೇಳಿದೆ. ಎಲ್ಲರಿಗೂ ಹೋಗಿ ಹೇಳಿದೆ. ಕೊಡುತ್ತೇವೆಂದು ಹೇಳಿದವರೆಲ್ಲಾ ಹಾಗೆಯೇ ಹೋದರು. ನನ್ನ ಕ್ಷೇತ್ರದಲ್ಲಿ 2300 ಕಾರ್ಡುದರರಿಗೆ ಇವತ್ತಿನವರೆಗೆ ಅಕ್ಕಿ ಕೊಟ್ಟಿಲ್ಲ. ಅಕ್ಕಿ ಕೊಡಲೇಬೇಕೆಂಬ ನಿಜವಾದ ಫಲಾನುಭವಿಗೆ ಅಕ್ಕಿ ದೊರಕುತ್ತಿಲ್ಲ. ಅಕ್ಕಿಯನ್ನು ಯಾರ್ಯಾರೋ ಹೊಡೆದು ತಿನ್ನುತ್ತಿದ್ದಾರೆ. ಇದನ್ನು ಸರಿ ಮಾಡುತ್ತೇವೆಂದು ಹೇಳಿ ಮೂರು ವರ್ಷ ತೆಗೆದುಕೊಂಡಿರಿ. ಯಾವ ಮೀಟರ್ ಬೋರ್ಡ್ ಇಟ್ಟುಕೊಂಡರೂ ಏನಾಗುತ್ತದೆ? ಯಾವ ಮೀಟರ್ ಬೋರ್ಡ್ ಅಲ್ಲ ಯಾವುದರಿಂದಲೂ ಸರಿ ಮಾಡುವುದಕ್ಕಾಗುವುದಿಲ್ಲ. ಈ ವ್ಯವಸ್ಥೆಯನ್ನು ಸರಿ ಮಾಡಲೇ ಬೇಕೆಂಬ ಸ್ವಇಚ್ಛೆ ನಿಮಗಿದ್ದರೆ ನೀವು ಈಗಿರತಕ್ಕಂತಹ ಪದ್ಧತಿಯನ್ನು ತೆಗೆದು ಹಾಕಿ ಹೊಸದಾಗಿ ಯಾವುದಾರೂ

ಒಂದು ರೂಪವನ್ನು ನೀವು ಮಾಡಿದರೆ ಮಾತ್ರ ಇದರಲ್ಲಿ ಇರತಕ್ಕಂತಹ ಲೋಪವನ್ನು ಕಂಡು ಹಿಡಿಯುವುದಕ್ಕೆ ಸಾಧ್ಯ. ಇಲ್ಲವಾದರೆ ಯಾವುದೆ ಕಾರಣದಿಂದಲೂ ಆಗುವುದಿಲ್ಲ. ಮಾಲೀಕರು ಬಲಿಷ್ಠರಾಗಿದ್ದಾರೆ, ನಮ್ಮ ನಿಮ್ಮ ಕೈಯಲ್ಲಿ ಇಲ್ಲ. ನಮ್ಮನ್ನೇ ಸೋಲಿಸುವ ಲೆವಲ್‌ಗೆ ಬಂದು ಬಿಡುತ್ತಾರೆ. ಅವರು ಬಲಿಷ್ಠರಾಗಿದ್ದಾರೆ. ಆದ್ದರಿಂದ ಇದನ್ನು ಬಗೆಹರಿಸಬೇಕಾದರೆ ನೀವು ನಿಜವಾಗಿಯೂ ಈಗಿರುವ ಪದ್ಧತಿಗೆ ಯಾವುದಾರೂ ಒಂದು ಹೊಸ ರೂಪ ಕೊಡಲೇ ಬೇಕು. ಹೊಸ ರೂಪ ಕೊಟ್ಟಾಗ ಮಾತ್ರ ನಿಜವಾದ ಬಡವನ ಕೈಗೆ ಅಕ್ಕಿ ಸಿಗುತ್ತದೆ. ವ್ಯವಸ್ಥೆ ಆಗುತ್ತದೆ. ಅರಸೀಕೆರೆಯಲ್ಲಿ Transporting ನಲ್ಲಿ ಸೀಮೆ ಎಣ್ಣೆ ಎಷ್ಟು ಟನ್ ಬರುತ್ತದೆ? ಆದರೆ, ಮಂಗಳೂರಿನ ಬಂದರಿನಿಂದ ಹೊರಟ ಸೀಮೆ ಎಣ್ಣೆಗೆ ದಾರಿ ಉದ್ದಕ್ಕೂ ಅರಸೀಕೆರೆ ಸೀಮೆ ಎಣ್ಣೆ ಎಂದು ಒಂದು ಹೆಸರೇ ಇಟ್ಟಿದ್ದಾರೆ. ನಾನು ಅಲ್ಲಿ ಒಂದು ದಿನ ಟೀ ಕುಡಿಯುತ್ತಾ ಕೂತಿದ್ದೆ ಏನೆಂದು ಕೇಳಿದೆ. ಅರಸೀಕೆರೆ ಸೀಮೆ ಎಣ್ಣೆ ಬಂದಿದೆ ಸಾರ್ ಅಂದರು. ಅರಸೀಕೆರೆ ಸೀಮೆ ಎಣ್ಣೆ ಏನೆಂದರೆ, ಲಾರಿಯವರು ಲೋಡ್ ಮಾಡಿಕೊಂಡು ಹೊರಡುತ್ತಾರಲ್ಲಾ ಉದ್ದಕ್ಕೂ ಇಳಿಸಿಕೊಂಡು ಬರುತ್ತಾರೆ. ಯಾವ್ಯಾವ ಸೀಮೆ ಎಣ್ಣೆ ಆ ರೋಡಲ್ಲಿ ಬರುತ್ತದೆ ಅದಕ್ಕೆ ಎಲ್ಲವಕ್ಕೂ ಒಂದೊಂದು ಹೆಸರು ಇದೆ. ಅರಸೀಕೆರೆ ಸೀಮೆ ಎಣ್ಣೆ ಇದರ ಸೀಮೆ ಎಣ್ಣೆ ಎನ್ನುತ್ತಾರೆ. ಈ ರೀತಿಯ ಪರಿಸ್ಥಿತಿಯಲ್ಲಿ ನಿಜವಾಧ ಬಡವನಿಗೆ ಸೀಮೆ ಎಣ್ಣೆಯೂ ತಲುಪುತ್ತಿಲ್ಲ. ಸರಿಯಾದ ರೀತಿಯಲ್ಲಿ ಪಡಿತರವೂ ತಲುಪುತ್ತಿಲ್ಲ. ಈ ವ್ಯವಸ್ಥೆಗೆ ಒಂದು ಪೂರಕವಾದಂತಹ ವ್ಯವಸ್ಥೆ ಮಾಡಿ, ಇದನ್ನು ಬದಲಾವಣೆ ಮಾಡದೇ ಹೋದರೆ, ನಿಜವಾದ ಬಡವ ತೊಂದರೆ ಅನುಭವಿಸುತ್ತಾನೆ. ಕೇಂದ್ರ ಸರ್ಕಾರದ ಕಾನೂನಿನ ಪ್ರಕಾರ ಒಬ್ಬ ಫಲಾನುಭವಿಗೆ 35 ಕೆ.ಜಿ. ಅಕ್ಕಿ ಕೊಡಬೇಕೆಂಬ ಕಾನೂನು ಇದೆ. ಆದರೆ ಅವರು 32% ಅಕ್ಕಿಯನ್ನು ಮೂರು ರೂಪಾಯಿಗೆ ಕೊಡುತ್ತಿದ್ದಾರೆ. ಆದರೆ ನೀವೇನು ಮಾಡುತ್ತಿದ್ದೀರಿ? ಅಕ್ಕಿಯನ್ನು ಒಬ್ಬೊಬ್ಬರಿಗೆ ನಾಲ್ಕು ಕೆ.ಜಿ. ಎಂದು ಹಂಚಿ ಆ ಬಡವನ ಅಕ್ಕಿಯನ್ನು ಬೇರೆಯವರಿಗೆ ಕೊಡುತ್ತಿದ್ದೀರಿ. ಇದು ನ್ಯಾಯವೇ? ಇದನ್ನು ನಾನು ಹಿಂದಿನ ಸಚಿವರ ಬಳಿ ಪ್ರಶ್ನೆ ಕೇಳಿದಾಗ ಅವರು ಉತ್ತರ ಕೊಡುತ್ತೇವೆಂದರು. ನಂತರ ಅದನ್ನು ಅರ್ದ ಗಂಟೆ ಚರ್ಚೆಗೆ ಅವಕಾಶ ಕೊಡುತ್ತೇವೆಂದು ಹೇಳಿ ಜಾರಿಕೊಂಡು ಹೋದಿರಿ. ಇದರ ಬಗ್ಗೆ ಯಾರಾದರೂ ಪಬ್ಲಿಕ್ ಲಿಟಿಗೇಷನ್ ಹೋಗಿ ನನಗೆ ಬರಬೇಕಾದಂತಹ ಹಕ್ಕನ್ನು ಮೊಟಕು ಮಾಡಿದ್ದಾರೆಂದು ಕೇಳಿದರೆ ಏನಾಗುತ್ತದೆ ಎಂಬುದರ ಅರ್ಥವನ್ನು ತಾವೆಲ್ಲಾ

ತಿಳಿದುಕೊಂಡಿದ್ದೀರಿ.ನಿಜವಾಗಿಯೂ ಈ ನಿಟ್ಟಿನಲ್ಲಿ ಬಹಳ ಅನ್ಯಯವಾಗುತ್ತಿದೆ. 32% ಕೇಂದ್ರ ಸರ್ಕಾರದ ಕಾನೂನು ಏನಿದೆ, ಅದರ ಅಡಿಯಲ್ಲಿ ಒಬ್ಬ ಫಲಾನುಭವಿಗೆ 35 ಕೆ.ಜಿ. ಅಕ್ಕಿ ಕೊಡಬೇಕೆಂಬ ಕಾನೂನು ಏನಿದೆ, ಅದರ ಚೌಕಟ್ಟನ್ನು ಮೀರಿ ನೀವು ಕೇಂದ್ರ ಸರ್ಕಾರದ ಗಮನಕ್ಕೊ ತರದೇ ನೀವು ಆ ಅಕ್ಕಿಯನ್ನು ಬೇರೆ ರೀತಿ ಡೈವರ್ಟ್ ಮಾಡಿ ಕೊಂಡು ನಾಲ್ಕು ನಾಲ್ಕು ಕೆ.ಜಿ. ಒಬ್ಬ ಫಲಾನುಭವಿಗೆ ಕೊಡುತ್ತಿದ್ದೀರಿ. ಇದು ಯಾವ ನ್ಯಾಯ? ಅವರ ಅಕ್ಕಿಯನ್ನು ನೀವು ತಂದು ಹಂಚಿಕೊಂಡು ಇನ್ನು 2000 ಕಾರ್ಡುಗಳನ್ನು ಹೆಚ್ಚಿಗೆ ಮಾಡಿಕೊಂಡು ಓಟು ಹಾಕಿಸಿಕೊಳ್ಳುವುದಕ್ಕಾ ಮಾಡುವುದು, ಇದು ಒಳ್ಳೆಯದಲ್ಲ. ಅಕ್ಕಿ ವಿತರಣೆ ಸರಿ ಮಾಡುತ್ತೇವೆಂದು ಹೇಳಿದರೂ ಇದುವರೆಗೂ ಸರಿಪಡಿಸಿಲ್ಲ.ದಯವಿಟ್ಟು ಅದನ್ನು ಸರಿಪಡಿಸಬೇಕೆಂದು ನಾನು ಈ ಸಂದರ್ಭದಲ್ಲಿ ಒತ್ತಾಯ ಮಾಡುತ್ತೇನೆ. ಸಂಧ್ಯಾ ಸುರಕ್ಷಾ ಮತ್ತು ಕುಂಟರು, ಕುರುಡರ ಬಗ್ಗೆ ಈಗ ಯೋಚನೆ ಬಂದಿದೆ. ಒಂದೆರಡು ವರ್ಷದಿಂದ ಇವರನ್ನು ಬಿಟ್ಟು ಬಿಟ್ಟಿದ್ದರು.ಇದರ ಬಗ್ಗೆ ಕಾಳಜಿ ಬೇಡವೆಂದು ಹೇಳಿ ಬಿಟ್ಟು ಬಿಟ್ಟರು.ತನಿಖೆ ಮಾಡುತ್ತೇವೆಂದು ಹೇಳಿದರು, ಯಾವಾಗ ತನಿಖೆ ಮಾಡುತ್ತೀರಿ? ಎಷ್ಟು ವರ್ಷ ತನಿಖೆ ಮಾಡುತ್ತೀರಿ? ಕುಂಟರು ಕುರುಡರು ಎಷ್ಟು ಜನ ಇದ್ದಾರೆ, ಅದರಲ್ಲಿ ಅನರ್ಹರಿದ್ದರೆ ತೆಗೆದು ಹಾಕಿ. ನಾವೇನು ಬೇಡವೆಂದು ಹೇಳುತ್ತಿಲ್ಲ. ಅನರ್ಹರಿಗೆ ಕೊಡಿ ಎಂದು ನಾವು ಹೇಳಿದ್ದೇವಾ? ಅನರ್ಹರ ಬಗ್ಗೆ ಎಷ್ಟು ವರ್ಷಗಳಿಂದ ತನಿಖೆ ಮಾಡುತ್ತೀರಿ?ಎರಡು ವರ್ಷಗಳಿಂದ ತನಿಖೆ ಮಾಡುತ್ತಿದ್ದೀರಿ. ಅನರ್ಹರನ್ನು ತೆಗೆಯುತ್ತೇವೆಂದು ಹೇಳಿ ಎರಡು ವರ್ಷಗಳಿಂದ ಯಾರಿಗೂ ಸಿಗದ ಹಾಗೆ ಮಾಡಿ ಇವತ್ತು ಅವರೆಲ್ಲಾ ಬೀದಿ ಬೀದಿಯಲ್ಲಿ ಬಂದು ಪಶ್ಚಾತ್ತಾಪ ಪಡುವ ಸ್ಥಿತಿ ತಂದಿದ್ದೀರಲ್ಲಾ. ಏತಕ್ಕೋಸ್ಕರ ಹೀಗೆ ಮಾಡುತ್ತಿದ್ದೀರಿ? ಆ ಅನರ್ಹರನ್ನು ಪತ್ತೆ ಮಾಡುವುದು ಬೇಡವೆಂದು ನಾವು ಹೇಳುವುದಿಲ್ಲ. ಅವರನ್ನು ಪೂರ್ಣ ಪ್ರಮಾಣದಲ್ಲಿ ಹಿಡಿದು ಹಾಕಿ. ಯಾರಾದರೂ ಮೋಸ ಮಾಡುತ್ತಿದ್ದರೆ ತೆಗೆದು ಹಾಕಿ.ಆದರೆ ನಿಜವಾದ ಫಲಾನಿಭವಿಗಳಿಗೆ 65 ವರ್ಷ ತುಂಬಿದ ತಕ್ಷಣ ಕೊಡುತ್ತೇವೆಂದು ಹೇಳಿ ಘೋಷಣೆ ಮಾಡಿದಿರಲ್ಲ, ಅವರಿಗೆ 65 ವರ್ಷ ತುಂಬಿ ಎರಡು ಮೂರು ವರ್ಷವಾಯಿತು. ನಿಜವಾದ ಫಲಾನುಭವಿಗಳಿಗೆ ಏಕೆ ಕೊಡುತ್ತಿಲ್ಲ? ಒಂದು ಕಡೆ ಅನರ್ಹರನ್ನು ತೆಗೆಯುವ ಕೆಲಸ ಮಾಡಿ. ಒಂದು ಕಡೆ ನಿಜವಾದ ಫಲಾನುಭವಿ ಯಾರಿದ್ದಾರೆ, ಅವನಿಗೆ ಕೊಡುವಂತಹ ಕೆಲಸ ಮಾಡಿ. ಅನರ್ಹರನ್ನು ಕಂಡುಹಿಡಿಯುತ್ತೇವೆಂದು ಹೇಳಿದ್ದೀರಿ.

ಉಪಾಧ್ಯಕ್ಷರು: ಮಾನ್ಯ ಶಿವಲಿಂಗೇಗೌಡ ಬೇಗ conclude ಮಾಡಿ. ಸಮಯ ಸಾಕಷ್ಟು ಆಯಿತು. ಬೇಗ ಮುಗಿಸಿ.

ಶ್ರೀ ಕೆ.ಎಂ.ಶಿವಲಿಂಗೇಗೌಡ: ಎಲ್ಲಾ ಪೂರಕ ವಿಚಾರ ಬರ ಪರಿಹಾರಕ್ಕೆ ಮೇವು ಕೊಡಬೇಕು, ಕುಡಿಯುವ ನೀರಿನ ವ್ಯವಸ್ಥೆ ಮಾಡಬೇಕು, ಬರ ಎಂದು ಯೋಚನೆ ಮಾಡಬಾರದು, ಮಲ್ಟಿ ವಿಲೇಜ್ ಸ್ಕೀಮ್‌ಗೆ ಆಡಳಿತಾತ್ಮಕ ಮಂಜೂರಾತಿ ಕೊಟ್ಟು ಎರಡು ವರ್ಷ ಆಯಿತು. ಎಲ್ಲಾ ಕ್ಷೇತ್ರದ ಶಾಸಕರ ಬಳಿಯೂ ಇದೆ ಎಂದು ನಾನು ತಿಳಿದುಕೊಂಡಿದ್ದೇನೆ. ಅದು ಕೇಂದ್ರ ಸರ್ಕಾರದ ಹಣ. ಆದರೆ ಇವತ್ತಿವರೆಗೂ ಟೆಂಡರ್ ಕರೆದು ಅದನ್ನು ಕಾರ್ಯಗತ ಮಾಡುವ ವ್ಯವಸ್ಥೆಗೆ RDPRಇಲಾಖೆ ಮುಂದಾಗುತ್ತಿಲ್ಲ. ಕಾರಣ ಏನು? ಎರಡು ವರ್ಷದವರೆಗೆ PCR ಮಾಡಿಸುತ್ತೇವೆಂದು ಹೇಳಿದರು ಈಗ ನಾವು DBOT ಮಾಡುತ್ತೇವೆಂದು ಹೇಳುತ್ತಾರೆ. ಯಾವ ಧರ್ಮ ಇದು? ಎರಡು ವರ್ಷದವರೆಗೆ ನೀವು ಏನು ಮಾಡುತ್ತಿದ್ದಿರಿ? ಫ್ಲೋರೈಡ್ ತಪ್ಪಿಸುವುದಕ್ಕೆ ಮಲ್ಟಿ ವಿಲೇಜ್ ಸ್ಕೀಮ್ ಬಹಳ ಪ್ರಮುಖವಾಗಿರತಕ್ಕಂತಹ ಯೋಜನೆ ಆ ಯೋಜನೆಯನ್ನು ಎರಡು ವರ್ಷ ಮೂರು ವರ್ಷ ಆದರೂ ನೀವು ಇಟ್ಟುಕೊಂಡು ಇವತ್ತಿನವರೆಗೂ ಟೆಂಡರ್ ಕರೆದು ಕಾರ್ಯಗತ ಮಾಡುತ್ತಿಲ್ಲ. ಯಾವ ಉದ್ದೇಶಕ್ಕೋಸ್ಕರ ಇಟ್ಟುಕೊಂಡಿದ್ದೀರಿ? ಈ ಬರ ಬಂದಾಗ ನೀರು ಬಂದಿದ್ದರೆ ಬರದಲ್ಲಿ ಸಹಕಾರಿ ಆಗುತ್ತಿರಲಿಲ್ಲವಾ? ಬರೇ ಬರದ ದೃಷ್ಟಿ ಇಟ್ಟುಕೊಂಡು ಯೋಚನೆ ಮಾಡುವುದಿಲ್ಲ. ಅಭಿವೃದ್ಧಿ ದೃಷ್ಟಿಯಿಂದ ಒಂದು ಯೋಜನೆಯನ್ನು ಜಾರಿಗೆ ತಂದರೆ ಅದು ಮುಂದೆ ನಮ್ಮನ್ನು ಕಾಪಾಡುತ್ತದೆ. ನಮ್ಮ ರೈತರನ್ನು ಕಾಪಾಡುತ್ತದೆ ಎನ್ನತಕ್ಕ ಭಾವನೆ ಬರಬೇಕು. ಆ ಉದ್ದೇಶಕ್ಕೋಸ್ಕರ ಈ ಕಾರ್ಯಕ್ರಮಗಳೆಲ್ಲಾ ಅನುಷ್ಠಾನಕ್ಕೆ ಅತಿ ಜಾಗ್ರತೆಯಾಗಿ ತರತಕ್ಕಂತ ಕೆಲಸವನ್ನು ಮಾಡಬೇಕು ಎಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ಅಧ್ಯಕ್ಷರೆ, ತಾವು ಅವಕಾಶ ಕೊಟ್ಟಿದ್ದೀರಿ, ಹೆಚ್ಚಿನ ಸಮಯವನ್ನು ವ್ಯಯ ಮಾಡುವುದಿಲ್ಲ. ಆದ್ದರಿಂದ ಈ ಸರ್ಕಾರಕ್ಕೆ ನನ್ನ ಕಳಕಳಿಯ ಮನವಿ, ಅದು ಯಾರದ್ದು ಏನೇ ಇರಲಿ. ಯಾರನ್ನೂ ಉದ್ದೇಶಪೂರ್ವಕವಾಗಿ ಇಟ್ಟುಕೊಂಡು ಈ ಸಂದರ್ಭದಲ್ಲಿ ನಾನು ಮಾತನಾಡಿಲ್ಲ. ನಮ್ಮ ಕ್ಷೇತ್ರದ ಬವಣೆ, ಸಂಕಟವನ್ನು ಇಲ್ಲಿ ತೋಡಿಕೊಂಡಿದ್ದೇನೆ. ದಯವಿಟ್ಟು ಯಾವುದು ಏನೇ ಇಲ್ಲದೇ ಇದ್ದರೂ ಪರವಾಗಿಲ್ಲ. ದನದ ಮೇವಿಗೆ ಪೂರಕವಾಗಿ, ದನದ ಮೇವನ್ನು ತರತಕ್ಕಂತಹ ಸ್ಥಿತಿಯಲ್ಲಿ ಇವತ್ತು ರೈತ ಇಲ್ಲ. ಅವನಿಗೆ ಆ ದುಡ್ಡನ್ನು ಕೊಡುವುದಕ್ಕೆ ಆಗುತ್ತಿಲ್ಲ. ದಯಮಾಡಿ ಹಿಂದೆ ಅಮೇರಿಕಾ ದೇಶದ ಕೆಂಪು

ಜೋಳವನ್ನು ತಂದು ಈ ರಾಜ್ಯದ ಜನತೆಯನ್ನು ಉಳಿಸಿರತಕ್ಕಂತ ನಿರ್ದಶನ ನಮ್ಮ ಮುಂದಿದೆ. ದಯವಿಟ್ಟು ಇವತ್ತು ಯಾವುದೇ ರಾಜ್ಯದಲ್ಲಿ ಮೇವಿರಲಿ, ವ್ಯಾಗನ್‌ಗಳನ್ನು ಬಿಟ್ಟು ಮೇವನ್ನು ತರಿಸಿ ಗೋಶಾಲೆಗಳನ್ನು ತೆರೆದು ಯಾವ ರೂಪದಲ್ಲಿ ಈ ಬರವನ್ನು ನಿವಾರಣೆ ಮಾಡುತ್ತೀರೋ ಗೊತ್ತಿಲ್ಲ. ಸಮರೋಪಾದಿಯಲ್ಲಿ ಈ ಕೆಲಸ ಪ್ರಾರಂಭ ಆಗ ಬೇಕು ಎಂದು ಹೇಳಿ ಸರ್ಕಾರವನ್ನು ಒತ್ತಾಯ ಮಾಡಿ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಹೆಚ್.ಎಸ್.ಮಹಾದೇವ ಪ್ರಸಾದ್(ಗುಂಡ್ಲು ಪೇಟೆ): ಮಾನ್ಯ ಉಪಾಧ್ಯಕ್ಷರೆ, ಈಗಾಗಲೇ ಬರಗಾಲದ ಒಂದು ಪರಿಸ್ಥಿತಿಯ ಬಗ್ಗೆ ಮಾನ್ಯ ವಿರೋಧ ಪಕ್ಷದ ನಾಯಕರಾದ ಸಿದ್ದರಾಮಯ್ಯನವರು ಸುದೀರ್ಘವಾಗಿ ಈ ರಾಜ್ಯದ ಬರದ ಪರಿಸ್ಥಿತಿಯನ್ನು ಮನದಟ್ಟಾಗುವ ರೀತಿಯಲ್ಲಿ ವಿವರಿಸಿದ್ದಾರೆ. ಅದೇ ರೀತಿ ಇವತ್ತು ಮಾತನಾಡಿದಂತಹ ಮಾಜಿ ಮುಖ್ಯಮಂತ್ರಿಗಳಾದಂತಹ ಮಾನ್ಯ ಯಡಿಯೂರಪ್ಪನವರು ಕೂಡ ರಾಜ್ಯ ಸರ್ಕಾರಕ್ಕೆ ಅನೇಕ ಸಲಹೆಯನ್ನು ಈ ಬರಗಾಲವನ್ನು ನಿಭಾಯಿಸುವ ನಿಟ್ಟಿನಲ್ಲಿ ಕೈಗೊಳ್ಳಬೇಕಾದಂತಹ ಕ್ರಮದ ಬಗ್ಗೆ ಸಹ ತಿಳಿಸಿದ್ದಾರೆ. ನಾನಾದರೂ ನಮ್ಮ ಜಿಲ್ಲೆಗೆ ಸೀಮಿತವಾಗಿ ನಾಲ್ಕಾರು ವಿಚಾರವಗಳನ್ನು ತಮ್ಮ ಮೂಲಕ ಸರ್ಕಾರದ ಗಮನಕ್ಕೆ ತರುವುದಕ್ಕೆ ಬಯಸುತ್ತೇನೆ. ಚಾಮರಾಜನಗರ ಜಿಲ್ಲೆ ಪ್ರತಿ ವರ್ಷ ಬರಗಾಲಕ್ಕೆ ತುತ್ತು ಆಗತಕ್ಕಂತಹ ಒಂದು ಜಿಲ್ಲೆಯಾಗಿದೆ. ಮಳೆ ಆಶ್ರಯದಲ್ಲಿಯೇ ವ್ಯವಸಾಯವನ್ನು ಅವಲಂಬಿಸಿರತಕ್ಕಂತಹ ಈ ದಕ್ಷಿಣ ಭಾಗದ ಜಿಲ್ಲೆಗಳಲ್ಲಿ ಚಾವರಾಜನಗರ ಪ್ರಮುಖವಾದಂತಹ ಒಂದು ಜಿಲ್ಲೆ. ಹಾಗಾಗಿ ಇಲ್ಲಿ ನೀರಾವರಿ ಸೌಲಭ್ಯ ವಂಚಿತವಾಗಿರುವ ಈ ಜಿಲ್ಲೆಯಲ್ಲಿ ಮಳೆ ಸಕಾಲದಲ್ಲಿ ಬರಲಿಲ್ಲ ಎಂದರೆ ವ್ಯವಸಾಯ ಸಂಪೂರ್ಣವಾಗಿ ಸ್ಥಗಿತಗೊಳ್ಳುತ್ತದೆ ಮತ್ತು ರೈತ ಕಂಗಾಲಾಗಿ ಗುಳೆ ಬಂದು ಹೋಗುವಂತಹ ಪರಿಸ್ಥಿತಿ ನಿರ್ಮಾಣವಾಗುತ್ತದೆ. ಕೇರಳ, ತಮಿಳುನಾಡಿನ ಕಡೆ ಜೀವನೋಪಾಯ ನಿಭಾಯಿಸುವುದಕ್ಕೆ ಗುಳೆ ಹೋಗುವ ಪರಿಪಾಠ ನಿರಂತರವಾಗಿ ಆಗುತ್ತಿದೆ. ಇಂತಹಸಂದರ್ಭದಲ್ಲಿ ಕಳೆದ ಬಾರಿ ಏಪ್ರಿಲ್ ತಿಂಗಳಲ್ಲಿ ಬರಗಾಲ ಘೋಷಣೆ ಮಾಡಿದಾಗ ನಮ್ಮ ಚಾಮರಾಜನಗರಜಿಲ್ಲೆ ಕೂಡ ಘೋಷಣೆ ಆಗಿತ್ತು ಮತ್ತು ಈ ಒಂದು ಪೂರ್ವ ಮುಂಗಾರು ಪ್ರಾರಂಭವಾಗತಕ್ಕದ್ದು ಪ್ರಮುಖವಾಗಿ ಗುಂಡ್ಲುಪೇಟೆ ತಾಲ್ಲೂಕಿನಲ್ಲಿ ಬಹಳ early ಆಗಿ monsoon start ರಾಜ್ಯದಲ್ಲಿ ಆಗುವಂತಹದು. ಹಾಗಾಗಿ ನಮ್ಮಲ್ಲಿ ಏಪ್ರಿಲ್, ಮೇ ತಿಂಗಳಲ್ಲಿ ಬಿತ್ತನೆ ಕಾರ್ಯಗಳು ಸರ್ವೆ ಸಾಮಾನ್ಯವಾಗಿ ಪ್ರತಿ ವರ್ಷ

ಆಗತಕ್ಕಂತಹದು. ಹಾಗಾಗಿ ಈ ಸಲ ಕೂಡ ಹೋದ ವರ್ಷ ಒಂದು ವರ್ಷ ಪೂರ್ತಿ ಸುಮಾರು 85 ಸಾವಿರ ಹೆಕ್ಟೇರ್ ಪ್ರದೇಶದಲ್ಲಿ ಸಂಪೂರ್ಣ ಬೆಳೆ ನಾಶ ಆಗಿ ರೈತ ಕಂಗಾಲಾಗಿರುವಂತಹ ಪರಿಸ್ಥಿತಿಯಲ್ಲಿ ಸುಮಾರು ರಾಜ್ಯ ಸರ್ಕಾರ ಇಡೀ ವರ್ಷಕ್ಕೆ ಕೊಟ್ಟಂತಹದು ಐದು, ಐದೂವರೆ ಕೋಟಿ ರೂಪಾಯಿ ಹೋದ ವರ್ಷ ಕೊಟ್ಟಂತಹದು. ಐದೂವರೆ ಕೋಟಿ ಬರ ಪರಿಹಾರದಲ್ಲಿ ಕೇವಲ ಕುಡಿಯುವ ನೀರಿನ ಒಂದಿಷ್ಟು ವ್ಯವಸ್ಥೆ ಮಾಡಿದ್ದು ಬಿಟ್ಟರೆ ಇನ್ನಾವುದೇ ರೀತಿಯಲ್ಲಿ ರೈತನಿಗೆ ನೆರವಾಗುವಂತಹ ಒಂದು ಕಾರ್ಯಕ್ರಮ ಸರ್ಕಾರದಿಂದ ಕಳೆದ ವರ್ಷ ಆಗಲಿಲ್ಲ. ಈ ಸಲ ಏಪ್ರಿಲ್‌ನಿಂದ ಈಚೆಗೆ ಒಂದು ಮಳೆಯ ನಿರೀಕ್ಷೆಯಲ್ಲಿದ್ದಂತಹ ರೈತನಿಗೆ ಒಂದು ಉತ್ತಮವಾದಂತಹ ರೀತಿಯಲ್ಲಿ ಮಳೆ ಪ್ರಾರಂಭ ಆಯಿತು. ಮೇ ತಿಂಗಳಿನಲ್ಲಿ ಆದಂತಹ ಒಳ್ಳೆಯ ಮಳೆಯಲ್ಲಿ ಸುಮಾರು ನಮ್ಮ ಜಿಲ್ಲೆಯಲ್ಲಿ ಒಂದು ಲಕ್ಷದ 71 ಸಾವಿರ ಹೆಕ್ಟೇರ್ ಪ್ರದೇಶ ಈ ಮುಂಗಾರು ಹಿಂಗಾರಿನಲ್ಲಿ ಬಿತ್ತನೆ ಮಾಡುವಂತಹ ವ್ಯವಸಾಯ ಪ್ರದೇಶ ಇರುವಂತಹದು. ಈ ಜೂನ್ ಕೊನೆಯ ವೇಳೆಗೆ ಸುಮಾರು 65 ಸಾವಿರ ಹೆಕ್ಟೇರ್ ಪ್ರದೇಶದಲ್ಲಿ ಈ ಒಂದು ಜೋಳ, ಹತ್ತಿ, ಸೂರ್ಯಕಾಂತಿ, ನೆಲಗಡಲೆ, ಎಳ್ಳು, ಹರಳು ಈ ತರಹ ಬಿತ್ತನೆ ಕಾರ್ಯವನ್ನು ಮಾಡಿದ್ದರು. ಈ 65 ಸಾವಿರ ಹೆಕ್ಟೇರ್ ಪ್ರದೇಶದಲ್ಲಿ ಏನು ಬಿತ್ತನೆ ಆಗುತ್ತದೆ? ತದ ನಂತರ ಜೂನ್, ಜುಲೈ ತಿಂಗಳಿನಲ್ಲಿ ಪೂರ್ಣ ಇವತ್ತಿನವರೆಗೂ ಸುಮಾರು 58 ದಿನ ಆಗಿದೆ ನಮ್ಮಲ್ಲಿ ಮಳೆ ಆಗಿ. ಈ 58 ದಿವಸದಲ್ಲಿ ನಮಗೆ ಮಳೆ ಆಗದೇನೆ ಏನು ಬಿತ್ತನೆ ಮಾಡಿದ್ದರೋ, ಆ ಬಿತ್ತನೆ ಮೊಳಕೆನೇ ಕಡೆಯದೇ, ಬರದೇ ಫಸಲು ಕೈ ಸೇರದೇ ಇರುವಂತಹ ಒಂದು ಪರಿಸ್ಥಿತಿ ಇವತ್ತು ನಮ್ಮ ಜಿಲ್ಲೆಯಲ್ಲಿ ನಿರ್ಮಾಣ ಆಗಿದೆ. ಈಗ ಏನಾಗಿದೆ? ಒಂದು ಬಿತ್ತನೆ ಮಾಡಬೇಕಾದರೆ ಮೊದಲೇ ರೈತ ಬರಗಾಲದಲ್ಲಿ ತತ್ತರಿಸಿದ್ದ. ಜೊತೆಗೆ ಅವನಿಗೆ ಈ ಮಳೆ ಆಯಿತೆಂದು ಹೇಳಿ ಸಾಲ ಸೋಲ ಮಾಡಿ ಮನೆಯಲ್ಲಿದ್ದ ಒಡವೆಗಳನ್ನೆಲ್ಲಾ ಅಡವಿಟ್ಟು ಹೆಚ್ಚಿನ ಬಡ್ಡಿಗೆ ಸಾಲ ಮಾಡಿ ಈ ಒಂದು ಬಿತ್ತನೆ ಕಾರ್ಯದಲ್ಲಿ ಏನು ತೊಡಗಿಸಿದ್ದಾನೆ ಅದರಲ್ಲಿ ಇವತ್ತು ಒಂದು ಹೆಕ್ಟೇರ್ ನಲ್ಲಿ ಜೋಳ ಬಿತ್ತನೆ ಮಾಡಬೇಕಾದರೆ 10 ರಿಂದ 15 ಸಾವಿರ ರೂಪಾಯಿ ಖರ್ಚು ಬೀಳುತ್ತದೆ. ಅದೇ ತರಹ ಸೂರ್ಯಕಾಂತಿ ಬಿತ್ತನೆ ಮಾಡಬೇಕಾದರೂ ಜಮೀನು ಹದ ಮಾಡುವುದಕ್ಕೆ ಬಿತ್ತನೆ ಕಾರ್ಯಕ್ಕೆ ಸುಮಾರು 10 ರಿಂದ 15 ಸಾವಿರ ಖರ್ಚು ಬೀಳುತ್ತದೆ. ಕಡಲೆ ಕಾಯಿ ಬಿತ್ತನೆ ಮಾಡಬೇಕಾದರೆ ಸುಮಾರು 25 ಸಾವಿರದಿಂದ 30 ಸಾವಿರ ರೂಪಾಯಿ ಒಂದು ಹೆಕ್ಟೇರ್‌ಗೆ ಅವನಿಗೆ ಖರ್ಚು ಬೀಳುತ್ತದೆ. ನಮ್ಮಲ್ಲಿ ಬಹಳವಾಗಿ

ಹೆಗ್ಗಡದೇವನ ಕೋಟೆ, ಗುಂಡ್ಲಪೇಟೆ ಮತ್ತು ನಂಜನಗೂಡು ಈ ಭಾಗದಲ್ಲಿ ಹತ್ತಿಯನ್ನು ಬೆಳೆಯುತ್ತಾರೆ. ಹತ್ತಿಗೆ ಸುಮಾರು 40 ಸಾವಿರ ರೂಪಾಯಿ ಒಂದು ಹೆಕ್ಟೇರ್‌ಗೆ ಬಿತ್ತನೆ ಖರ್ಚು ಬೀಳುತ್ತಿದೆ. ಈ ರೀತಿ ಸುಮಾರು ನಮ್ಮಲ್ಲಿ ಬಿತ್ತನೆ ಕಾರ್ಯಕ್ಕೆ 100 ರಿಂದ 120 ಕೋಟಿ ರೂಪಾಯಿವರೆಗೆ ರೈತರಿಗೆ ಹೆಚ್ಚಿನ ಹೊರೆಯಾಗಿ ಈ ಸಲ ಖರ್ಚಾಗಿದೆ. ಇದಾದ ಮೇಲೆ ಇವತ್ತಿನವರೆಗೂ ಕೂಡ ನಾವು ಮಳೆಯ ನಿರೀಕ್ಷೆಯಲ್ಲಿ ಇದ್ದರೂ ಮಳೆ ಆಗಿಲ್ಲ. ಮತ್ತೆ ಇಷ್ಟು ಹೊತ್ತಿಗೆ ಆಗಲೇ ನಮ್ಮ ಹಿಂಗಾರು ಮುಂಗಾರಿನ ಫಸಲು ಈಗ ಬರಬೇಕಾಗಿತ್ತು. ಅದು ಕೈ ಸೇರುವಂತಹ ಒಂದು ಸನ್ನಿವೇಶ ಈ ತಿಂಗಳಲ್ಲಿ ನಮಗೆ ಇತ್ತು. ಆದರೆ ನಮ್ಮಲ್ಲಿ ಪ್ರಮುಖವಾದಂತಹ ಜೋಳದ ಬೆಳೆ ಏನು ಇದೆ? ಅದು ಆ ಕಡ್ಡಿಯನ್ನೂ ಬೆಳೆಯದೇ, ಅದು ದನಕರುಗಳಿಗೂ ಮೇವಿಗೆ ಆಶ್ರಯ ಗದ್ದೆ ನಮ್ಮಲ್ಲಿ ಆಗಿಲ್ಲ. ನಮ್ಮಲ್ಲಿ ನೀರಾವರಿ ಜಮೀನು ಇಲ್ಲದೇ ಇರುವುದರಿಂದ ನಾವೇನಿದ್ದರೂ ಜೋಳದ ಕಡ್ಡಿಯನ್ನೇ ದನಕರುಗಳಿಗೆ ಮೇವಾಗಿ ಬಳಕೆ ಮಾಡುವಂತಹದು. ಅದು ಸಂಪೂರ್ಣವಾಗಿ ಈ ಸಲ ಕಡ್ಡಿಯೂ ಬೆಳೆಯುವುದಕ್ಕೆ ಆಗದೇ ಆ ಮೇವಿಗೂ ಕೂಡ ತೊಂದರೆ ಆಗಿ ಸುಮಾರು 67 ರಿಂದ 70 ಸಾವಿರ ಕುಟುಂಬಗಳು ನಮ್ಮ ಜಿಲ್ಲೆಯಲ್ಲಿ ವ್ಯವಸಾಯವನ್ನೇ ನಂಬಿಕೊಂಡು ಜೀವನ ಮಾಡುವಂತಹ ಕುಟುಂಬಗಳು ಏನು ಇವೆ. ಅವರೆಲ್ಲಾ ಇವತ್ತು ನಿರ್ಗತಿಕರಾಗಿ, ಕಂಗಾಲಾಗಿ ಪ್ರತಿ ದಿನ ಆಕಾಶವನ್ನು ನೋಡತಕ್ಕಂತ ಪರಿಸ್ಥಿತಿ ನಮ್ಮ ಜಿಲ್ಲೆಯಲ್ಲಿ ನಿರ್ಮಾಣವಾಗಿದೆ. ಇಂತಹ ಒಂದು ಪರಿಸ್ಥಿತಿಯಲ್ಲಿ ಸರ್ಕಾರ ಒಂದು ವಿಚಾರ ತಿಳಿಸಬೇಕು. ಮಾನ್ಯ ಯಡಿಯೂರಪ್ಪನವರು ಮಾತನಾಡುವಾಗ ವಿವರಿಸುತ್ತಿದ್ದರು. "ಸುವರ್ಣ ಭೂಮಿ ಯೋಜನೆ ಜಾರಿಗೆ ತಂದೆ. ನಾವು ಎಲ್ಲಾ ಸಣ್ಣ ಹಿಡುವಳಿದಾರರು ಮತ್ತು ಅತಿ ಸಣ್ಣ ಹಿಡುವಳಿದಾರರಿಗೆಲ್ಲಾ ಹತ್ತತ್ತು ಸಾವಿರ ರೂಪಾಯಿ ವ್ಯವಸಾಯಕ್ಕೆ ಪ್ರೋತ್ಸಾಹ ಧನ, ಮತ್ತೊಂದು ಕೊಡುತ್ತೇವೆ" ಎಂದು ಹೇಳಿದರು. ಆದರೆ ಅದನ್ನು ಒಂದು ಸಾವಿರ ಕೋಟಿಗೆ ಸೀಮಿತ ಮಾಡಿ ಒಂದು ಹತ್ತು ಸಾವಿರ ಜನರಿಗೆ ಮಾತ್ರ ಸಿಗುವಂತಹ ವ್ಯವಸ್ಥೆಯಲ್ಲಿ ನಮ್ಮ ಜಿಲ್ಲೆಯಲ್ಲಿ ಸುಮಾರು 47 ಸಾವಿರದಿಂದ 50 ಸಾವಿರ ಅರ್ಜಿಗಳನ್ನು ಈ ಸುವರ್ಣ ಭೂಮಿ ಯೋಜನೆಯಲ್ಲಿ ಹೋದ ವರ್ಷ ಈ ಸ್ಕೀಮ್ ಬಂದಾಗ ಹಾಕಿಕೊಂಡಿದ್ದರು. ಇವರು ಕೊಟ್ಟಿದ್ದು ಎಷ್ಟು ಜನರಿಗೆ ಅಂದರೆ 9 ಜನರಿಗೆ ಕೊಟ್ಟರು. ಅದೂ 50 ಸಾವಿರ ರೈತರು ಅರ್ಜಿ ಹಾಕಿದವರಲ್ಲಿ 9 ಸಾವಿರ ಜನಕ್ಕೆ ಕೊಟ್ಟರು. ಅದೂ 50 ಸಾವಿರ ರೈತರು ಅರ್ಜಿ ಹಾಕಿದವರಲ್ಲಿ 9 ಸಾವಿರ ಜನಕ್ಕೆ

ಐದ್ಯೆದು ಸಾವಿರವನ್ನು ಎರಡು ಕಂತಿನಲ್ಲಿ ಕೊಟ್ಟರೂ ಸಹ ತೀರಾ ಐದು ಎಕರೆ ಒಳಗೆ ಒಳಪಟ್ಟಿರುವವರಿಗೆಲ್ಲಾ ಹಣ ಸಿಕ್ಕಿದೆ ಎಂದಾಯಿತು.ಈವರ್ಷ 38,711 ರೈತರು ಮತ್ತೆ ಸುವರ್ಣ ಭೂಮಿ ಯೋಜನೆಯಲ್ಲಿ ನಮಗೆ ಸಹಾಯ ಮಾಡಿ ಎಂದು ಅರ್ಜಿ ಹಾಕಿಕೊಂಡಿದ್ದಾರೆ. ಈ 38 ಸಾವಿರ ಜನರಲ್ಲಿ ಈಗ ನಮಗೆ 7 ಸಾವಿರ ಜನಕ್ಕೆ ಕೊಡಿ ಎಂದು ಸರ್ಕಾರ ಟಾರ್ಗೆಟ್ ಅನ್ನು ನಿಗದಿ ಪಡಿಸಿದೆ. ಅಂದರೆ 7 ಸಾವಿರ ಜನಕ್ಕೆ ಕೊಟ್ಟರೆ ಇನ್ನೂ 38 ಸಾವಿರ ರೈತರು ಒಂದು ವರ್ಷ ಕಾಯ ಬೇಕಾಕುತ್ತದೆ. ಈ ಯೋಜನೆಯಲ್ಲಿ ನೀವು ಮಾಡಿದ ಮೇಲೆ ಇದೇನು ರೈತರು ನಮಗೆ ಐದು ಸಾವಿರ ಕೊಡಿ, ಹತ್ತು ಸಾವಿರ ಕೊಡಿ ಎಂದು ಅರ್ಜಿ ಹಾಕಿಕೊಂಡಿರಲಿಲ್ಲ. ನೀವೇ ಕೊಡುತ್ತೇವೆಂದು ಘೋಷಣೆ ಮಾಡಿದಿರಿ. ಘೋಷಣೆ ಮಾಡಿದ ಮೇಲೆ once for all ಎಲ್ಲಾ ರೈತರ ಅಕೌಂಟಿಗೆ ನೇರವಾಗಿ ಹತ್ತತ್ತು ಸಾವಿರ ರೂಪಾಯಿ ಕೊಟ್ಟರೆ atleast ಅವನ ಯಾವುದಾದರೂಒಂದು ವ್ಯವಸಾಯದ ಕಾರ್ಯಕ್ಕೋ, ಜೀವನೋಪಾಯಕ್ಕೋಅಥವಾ ಮತ್ತೊಂದಕ್ಕೋ ಅನುಕೂಲವಾಗುತ್ತದೆ.ಅದನ್ನು ಎರಡು ಕಂತಿನಲ್ಲಿ ಕೊಟ್ಟು ಅದಕ್ಕೆ ಒಬ್ಬ ಅಮಲ್ದಾರ್ ಎಂದು ನೇಮಕ ಮಾಡಿ ಅವನು ಅದನ್ನೆಲ್ಲಾ ವೆರಿಫೈ ಮಾಡಿ ನಾಲ್ಕು ನಾಲ್ಕು ಸಾರಿ Agriculture Department ನವರು ಈ ಸುವರ್ಣ ಭೂಮಿ ಯೋಜನೆಗೇ ಪೂರ್ಣವಾಗಿ ಕೆಲಸ ಮಾಡುತ್ತಿದ್ದಾರೆಯೇ ಹೊರತು ಅವರು ಅಗ್ರಿಕಲ್ಚರ್ ಕೆಲಸ ಮಾಡಲು ಅವರಿಗೆ ಸಮಯ ಇಲ್ಲದೇ ಇರುವಂತಹ ಪರಿಸ್ಥಿತಿ ನಿರ್ಮಾಣ ಆಗಿದೆ. ಅದರಿಂದ ಇವತ್ತು ಅವರು ಹೇಳಿದ ರೀತಿಯಲ್ಲಿ ಈ ಉಳಿಕೆ ಜನ ಏನು ಇದ್ದಾರೆ? ನಮ್ಮ ಜಿಲ್ಲೆಯವರೂ ಸೇರಿದಂತೆ ರಾಜ್ಯಾದ್ಯಂತ ಈ ಸುವರ್ಣ ಭೂಮಿ ಯೋಜನೆ ವ್ಯಾಪ್ತಿಗೆ ಒಳಪಡುವಂತಹವರು, ಅವರಿಗೆಲ್ಲಾ ಏಕ ಕಾಲಕ್ಕೆ ಒಂದು ಹತ್ತು ಸಾವಿರ ರೂಪಾಯಿ ಅವರ ಅಕೌಂಟಿಗೆ ತಲುಪುವಂತಹ ಒಂದು ವ್ಯವಸ್ಥೆಯನ್ನು ಈ ಒಂದು ಬರಗಾಲದ ಪರಿಸ್ಥಿತಿಯಲ್ಲಿ ಸರ್ಕಾರ ಮಾಡಿದರೆ ಸರ್ಕಾರಕ್ಕೆ ನಿಜವಾಗಿ ರೈತರ ಬಗ್ಗೆ ಕಾಳಜಿ ಇದೆ ಮತ್ತು ಇವರು ರೈತರ ಪರವಾದಂತಹ ಯೋಜನೆಗಳನ್ನು ರೂಪಿಸಿದ್ದಕ್ಕೂ ಒಂದು ಸಾರ್ಥಕತೆ ಆಗುತ್ತದೆ ಎನ್ನುವುದನ್ನು ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಬಯಸುತ್ತೇನೆ. ಇದರ ಜೊತೆಗೆ ಏನಾಗಿದೆ ಎಂದರೆ, ನಮ್ಮ ಜಿಲ್ಲೆಯಲ್ಲಿ ಸುಮಾರು 5 ಲಕ್ಷದ 70 ಸಾವಿರ ಜಾನುವಾರುಗಳಿವೆ. ನಮ್ಮದೆಲ್ಲಾ ಕಾಡು ಪ್ರದೇಶವಾಗಿದೆ. 52% ಕಾಡಿನ ಅಂಚಿನಲ್ಲಿ ಇರುವಂತಹ, ಕಾಡು ಪ್ರದೇಶದಲ್ಲಿ ಸೇರಿರುವ ಜಿಲ್ಲೆ ನಮ್ಮದಾಗಿದೆ.

ಇಂತಹ ಒಂದು ಜಿಲ್ಲೆಯಲ್ಲಿ, ನಮ್ಮಲ್ಲೆಲ್ಲಾ ಹಿಂದೆ, Project Tiger, Wild life projects ಇವೆಲ್ಲಾ ಬರುವುದಕ್ಕೆ ಮುಂಚೆ, ಕಾಡಿನಲ್ಲಿ ದನಕರುಗಳನ್ನೆಲ್ಲಾ ಮೇವಿಗೆ ಕಳುಹಿಸತಕ್ಕಂಥ ಪರಿಪಾಠವಿತ್ತು. ಕಾಡಿನ ಅಂಚಿನಲ್ಲೇ ನಮ್ಮ ಹಳ್ಳಿಕಾರ್ ಹಸುಗಳು ಜಾಸ್ತಿ ಇವೆ. ಅವು ಹಾಲು ಕೊಡಲಿ, ಬಿಡಲಿ, ಅದರಿಂದ ಉತ್ಪತ್ತಿಯಾಗಲಿ, ಆಗದಿರಲಿ, ರೈತರು ಆ ಗೋವುಗಳನ್ನು ಸಾಕತಕ್ಕಂಥ ಪರಿಪಾಠ ಇವತ್ತಿಗೂ ಕೂಡ ಮುಂದುವರೆಸಿಕೊಂಡು ಬಂದಿದ್ದಾರೆ. ಇವತ್ತು ಏನಾಗಿದೆ ಎಂದರೆ, ಜೋಳದ ಕಡ್ಡಿ ಬೆಲೆಯಲಿಲ್ಲ, ಮೇವು ಎಲ್ಲೂ ನಮ್ಮ ಭಾಗದಲ್ಲಿ ಸಿಗುತ್ತಿಲ್ಲ. ಇವತ್ತು ಮಾನ್ಯ ಸಿದ್ಧರಾಮಯ್ಯನವರು ಹೇಳಿದಂತೆ, ಒಂದು ಟನ್‌ಗೆ 10 ಸಾವಿರ ರೂ.ಗಳನ್ನು ಕೊಟ್ಟರೂ ನಮ್ಮ ಭಾಗದಲ್ಲಿ ಮೇವು ಸಿಗುತ್ತಿಲ್ಲ. ಸರ್ಕಾರ ಒಂದು ಟನ್‌ಗೆ 2,500/– ರೂ.ಗಳನ್ನು ನಿಗದಿಪಡಿಸಿತ್ತು, ಈಗ ಅದನ್ನು 4,5000/– ರೂ.ಗಳಿಗೆ ಏರಿಸಿದೆ. ಒಂದು ಟನ್‌ಗೆ 10,000/– ರೂ.ಗಳನ್ನು ಕೊಟ್ಟರೂ ಹುಲ್ಲು ಸಿಗದಿರುವಂತಹ ಇಂದಿನ ಪರಿಸ್ಥಿತಿಯಲ್ಲಿ, ಈ ಬಗ್ಗೆ ಡಿ.ಸಿ.ಯವರಿಗೆ ಹೇಳಿದರೆ, ಅವರು ಈ ದಿಸೆಯಲ್ಲಿ ಸರ್ಕಾರ ಹೊರಡಿಸಿರುವ ಸುತ್ತೋಲೆಯನ್ನು ತೋರಿಸುತ್ತಾರೆ. ಒಂದು ಟನ್‌ಗೆ 4,500/– ರೂ.ಗಳನ್ನು ಮಾತ್ರ ಕೊಡಲು ಸಾಧ್ಯ ಎನ್ನುತ್ತಾರೆ. ಅದನ್ನೂ 100 ಕಿ.ಮೀ. ವ್ಯಾಪ್ತಿಯೊಳಗೆ ಖರೀದಿ ಮಾಡಬೇಕೆಂದು ಸರ್ಕಾರ ಹೇಳಿದೆ. ಹರಿಯಾಣ ಮತ್ತು ಪಂಜಾಬ್‌ನಿಂದ ಮೇವಿ ತರಿಸಬೇಕೆನ್ನುವ ಪರಿಸ್ಥಿತಿ ನಿರ್ಮಾಣವಾಗಿದೆ ಎಂದು ನಮ್ಮ ಮಾಜಿ ಉಪ ಮುಖ್ಯಮಂತ್ರಿಗಳು ಹೇಳುತ್ತಿರಬೇಕಾದರೆ, ನೀವು 100 ಕಿ.ಮೀ ವ್ಯಾಪ್ತಿಯೊಳಗೆ ಒಂದು ಟನ್‌ಗೆ 4,500/– ಗಳಂತೆ ಮೇವು ಖರೀದಿಸಿ ಎನ್ನುವ ಸರ್ಕಾರಿ ಸುತ್ತೋಲೆ ಇಟ್ಟುಕೊಂಡು ಕುಳಿತಿದ್ದರೆ, ನಾವು ಬರ ನೀಗಿಸುವುದು ಹೇಗೆ? ಜಾನುವಾರುಗಳಿಗೆ ಮೇವನ್ನು ಸರಬರಾಜು ಮಾಡುವುದು ಹೇಗೆ? ಇದರ ಬಗ್ಗೆ ಏನಾದರೊಂದು ಸರ್ಕಾರ ಗಂಭೀರವಾಗಿ ವಿಚಾರಮಾಡಿ ತೀರ್ಮಾನ ತೆಗೆದುಕೊಳ್ಳಬೇಕು. ಆCircular ಅನ್ನು ಕೊಡಲೇ modify ಮಾಡಿ, ಇವತ್ತೇನು actual cost ಹೊರಗಡೆ ಮಾರಾಟದಲ್ಲಿ ಇದೆಯೋ, ಆ ರೇಟನ್ನು ನಿಗದಿಪಡಿಸಬೇಕು. ಇಲ್ಲವೇ ರೈತನಿಗೆ, ಯಾರ್‍ಯಾರು ಒಂದೊಂದು ಗ್ರಾಮದವರು ಅಥವಾ ರೈತರು ತಾವೇ ಸ್ವತಃ ಹೋಗಿ ಮೇವನ್ನು ಹುಡುಕಿಕೊಂಡು ಹೋಗಿ, ಅವರ ಗ್ರಾಮಕ್ಕೆ ಬೇಕಾಗುವಷ್ಟು ಅಥವಾ ಅವರ ಸ್ವಂತಕ್ಕೆ ಬೇಕಾಗುವಷ್ಟು ಖರೀದಿ ಮಾಡುತ್ತಾರೋ, ಅದನ್ನು certify ಮಾಡಿಅವರಿಗೆ ಶೇಕಡ 50–70% ರಷ್ಟು ಸಹಾಯಧನ ಕೊಡುವ

ರೀತಿಯಲ್ಲಿ ವ್ಯವಸ್ಥೆ ಮಾಡಬೇಕು. ಸರ್ಕಾರವೇ ರೈತರಿಗೆ ಮೇವನ್ನು ಕೊಡಬೇಕು. ಸರ್ಕಾರಕ್ಕೆ ಮೇವನ್ನು ಕೊಡಲಿಕ್ಕೆ ಆಗದಿದ್ದರೆ, ರೈತರಿಗೆ ಮೇವನ್ನು ನೀವು ಎಲ್ಲಿಯಾದರೂ ಖರೀದಿ ಮಾಡಿಕೊಂಡು ಬನ್ನಿ, ನಾವು ಅದಕ್ಕೆ 50% ಹಣವನ್ನು ಸಬ್ಸಿಡಿ ರೂಪದಲ್ಲಿ ಕೊಡುತ್ತೇವೆ ಎಂದು ಹೇಳಿ, ಅದಕ್ಕೊಂದು ನಿಯಮ ರೂಪಿಸಬೇಕು. ಈ ಎರಡನ್ನೂ ಮಾಡದೆ, ಮೇವು ಇಲ್ಲ ಎಂದು ಸುಮ್ಮನೆ ದಿನಾ ನಾವು ಭಾಷಣದಲ್ಲಿ ಹೇಳಿಕೊಂಡು ಹೋಗುವುದರಿಂದ ಏನೂ ಪ್ರಯೋಜನವಿಲ್ಲ. ಜಾನುವಾರುಗಳ ಆ ಪರಿಸ್ಥಿತಿ ನೋಡುವುದಕ್ಕಾಗುವುದಿಲ್ಲ. ಈಗ ಗೋಹತ್ಯೆ ನಿಷೇಧ ಕಾನೂನು ಇದೆ. ಮಾನ್ಯ ಈಶ್ವರಪ್ಪನವರು ಈಗ ಕಂದಾಯ ಸಚಿವರಾಗಿದ್ದಾರೆ. ತಾವು ಬಹಳ ಪ್ರಬಲವಾಗಿ ಅದನ್ನು ಪ್ರತಿಪಾದಿಸಿದ್ದೀರಿ. ಇವತ್ತು ನಮ್ಮ ಭಾಗದಲ್ಲಿ ಸಂತೆಗಳಿಗೆ ಜಾನುವಾರುಗಳನ್ನು ಹೊಡೆದುಕೊಂಡು ಹೋಗುವುದಕ್ಕಾಗುವುದಿಲ್ಲ. ಏಕೆಂದರೆ, ಜೊತೆಯಲ್ಲಿ ಯಾವನಾದರೂ ಹೊಡೆದುಕೊಂಡು ಹೋಗುತ್ತಿದ್ದರೆ, ಎಲ್ಲಿ ನನ್ನನ್ನು ಬಂಧನಕ್ಕೆ ಒಳಪಡಿಸಿಬಿಡುತ್ತಾರೋ ಎಂದು ಯಾರೂ ಅದರ ಸಹವಾಸಕ್ಕೇ ಹೋಗುತ್ತಿಲ್ಲ. ಗೋಶಾಲೆಗಳು ಇಡೀ ರಾಜ್ಯದಲ್ಲಿ 77 ಇವೆ. ನಮ್ಮ ಜಿಲ್ಲೆಯಲ್ಲಿ ಇದ್ದ ಎರಡನ್ನೂ ಮೇವಿಲ್ಲವೆಂದು close ಮಾಡಿದ್ದಾರೆ. ಈಗ ಗೋಶಾಲೆಗಳಿಲ್ಲ, ಕೆರೆ ಕಟ್ಟೆಗಳಲ್ಲಿ ನೀರಿಲ್ಲ, ಈಗ ಜಾನುವಾರುಗಳು ಕಾಡಿನೊಳಗೆ ಹೋಗುವಂತಿಲ್ಲ. ಇವತ್ತು restricted forest ಆಗಿರುವುದರಿಂದ, ಎಲ್ಲಾ ಕಡೆಗೂ ನಿರ್ಬಂಧ ಹೇರಿ ಬಿಟ್ಟಿದ್ದಾರೆ. ಕಾಡಿನೊಳಗೆ ಯಾವುದೇ ದನಕರುಗಳನ್ನು ಮೇವಿಗಾಗಿ ಕಳುಹಿಸಬಾರದು ಎಂದು fencing ಮಾಡಿ ಗೇಟುಗಳನ್ನು ಹಾಕಿ, ದನಕರುಗಳನ್ನು ಒಳಗಡೆ ಬಿಡುತ್ತಿಲ್ಲ. ಇಂತಹ ಒಂದು ಪರಿಸ್ಥಿತಿಯಲ್ಲಿ ಈ ಜಾನುವಾರುಗಳ ಸಂಕಷ್ಟವನ್ನು ಕೇಳುವವರ್ಯಾರು? ಇದಕ್ಕೆ ಸರ್ಕಾರ ಯಾವ ರೀತಿ ಕಾರ್ಯಕ್ರಮ ಹಾಕಿದೆ ಎನ್ನುವುದನ್ನು ಮಾನ್ಯ ಮುಖ್ಯಮಂತ್ರಿಗಳು ಅಥವಾ ಮಾನ್ಯ ಕಂದಾಯ ಸಚಿವರು ತಮ್ಮ ಉತ್ತರದಲ್ಲಿ ಸ್ಪಷ್ಟವಾಗಿ ತಿಳಿಸಬೇಕೆಂದು ನಾನು ಈ ಸಂದರ್ಭದಲ್ಲಿ ಹೇಳಲಿಕ್ಕೆ ಬಯಸುತ್ತೇನೆ. ಉದ್ಯೋಗದ ಬಗ್ಗೆ ಹೇಳುವುದಾದರೆ, ಈ ಜಾನುವಾರುಗಳದ್ದು ಒಂದು ರೀತಿ ಸಂಕಷ್ಟವಾದರೆ, ರೈತನಿಗೇನಾಗಿದೆ ಎಂದರೆ, ಬರಗಾಲ ಪ್ರಾರಂಭವಾಗಿ ಈಗಾಗಲೇ ಒಂದೂವರೆ ವರ್ಷವಾಯಿತು. ನಾನು ಮೊದಲೇ ಹೇಳಿದಂತೆ ಸುಮಾರು 30–67 ಸಾವಿರ ಕುಟುಂಬಗಳು ನಮ್ಮ ಜಿಲ್ಲೆಯಲ್ಲಿ ಬಿತ್ತನೆ ಕಾರ್ಯದಲ್ಲಿ ತೊಡಗಿಸಿಕೊಂಡಿದ್ದವರೆಲ್ಲಾ, ಯಾವುದೇ ರೀತಿಯ ಉತ್ಪನ್ನವಿಲ್ಲದೆ, ಸಾಲಗಳನ್ನು ಮಾಡಿಕೊಂಡು, ಬಡ್ಡಿಗಳನ್ನು ಕಟ್ಟಲಿಕ್ಕಾಗದೆ, ಕದ್ದು

ಓಡಾಡುವಂತಹ ಪರಿಸ್ಥಿತಿ ನಿರ್ಮಾಣವಾಗಿದೆ. ಅವರಿಗೆ ಜೀವನೋಪಾಯಕ್ಕೆ ಏನಾದರೊಂದು ಉದ್ಯೋಗ ಬೇಕಲ್ಲವೇ? ನೀವು BPL card ನ unit system ನಲ್ಲಿ ಕೊಡುವಂತಹ 4 Kg ಅಕ್ಕಿಯನ್ನು ತೆಗೆದುಕೊಳ್ಳುವುದಕ್ಕಾದರೂ ಅವರ ಹತ್ತಿರ ಇವತ್ತು ಹಣ ಇರಬೇಕಲ್ಲವೇ? ಅವರಿಗೇನಾದರೂ ಒಂದು ಉದ್ಯೋಗವನ್ನು ಕೊಡಬೇಕು. ಇದಕ್ಕೆ CRF circular ವೊಂದನ್ನು ನಮ್ಮ ಡಿ.ಸಿ.ಯವರು ತೋರಿಸಿ ಬಿಡುತ್ತಾರೆ. ಉದ್ಯೋಗ ಖಾತ್ರಿ ಯೋಜನೆ ಇರುವುದರಿಂದ, ಯಾವುದೇ ರೀತಿಯ ಬರ ಕಾಮಗಾರಿಗಳನ್ನು ಕೈಗೊಳ್ಳುವುದಕ್ಕೆ ಬರುವುದಿಲ್ಲ, ಏನಿದ್ದರೂ ಅದನ್ನು ಉದ್ಯೋಗ ಖಾತ್ರಿ ಯೋಜನೆಯಲ್ಲೇ ಮಾಡಬೇಕು, ಅದಕ್ಕೆ ಎಷ್ಟು ಬೇಕಾದರೂ ಹಣ ಕೊಡುತ್ತೇವೆ, ಮಾಡಿ ಎನ್ನುತ್ತಾರೆ. ಇದರಲ್ಲಿ ಒಂದು ವಿಚಾರ ನನಗೆ ಅರ್ಥವಾಗುತ್ತಿಲ್ಲ. ಈ ಉದ್ಯೋಗ ಖಾತ್ರಿ ಯೋಜನೆಯಲ್ಲಿ ಮಾಡಬೇಕಾದರೆ, ಈ job card holders ಎಷ್ಟು ಜನರಿರುತ್ತಾರೋ, ಅಷ್ಟು ಜನ, ಅವರ ಕುಟುಂಬ ವರ್ಗ 100 ದಿನ ಕೆಲಸ ಮಾಡಬಹುದು. ಆ 100 ದಿನ ಅವರಿಗೆ 155 ರೂ. ಒಂದು ದಿನಕ್ಕೆ ಕೂಲಿಯಂತೆ ಉದ್ಯೋಗ ಕೊಡಬಹುದು ಎಂದಿದೆ. ಯಾರು job cards ಅನ್ನು ಹೊಂದಿದ್ದಾರೋ, ಅವರಿಗೆ ಮಾತ್ರ ಕೂಲಿ ಕಾಮಗಾರಿಯಲ್ಲಿ ಭಾಗವಹಿಸುವುದಕ್ಕೆ ಸಾಧ್ಯವಿದೆ. ಅದರಲ್ಲಿ enrol ಆಗದಿರುವವರು, register ಮಾಡಿಕೊಳ್ಳದಿರುವ ಕಾರ್ಮಿಕರಿಗೆ ಕೂಲಿ ಸಿಗುವುದಿಲ್ಲ. ಕೆಲವರು ವಯಸ್ಸಾದವರು ಇರುತ್ತಾರೆ, ಹೆಂಗಸರು ಇರುತ್ತಾರೆ, ಅಂತಹವರೆಲ್ಲಾ ಪಂಚಾಯಿತಿ ಮುಂದೆ ಹೋಗಿ ನಿಂತುಕೊಂಡು, ಈ card ಮಾಡಿಸಿಕೊಂಡು, ಕೂಲಿ ಕೆಲಸ ಮಾಡುವುದಕ್ಕೆ ಆಗುವುದಿಲ್ಲ. ಎಷ್ಟೋ ಜನ ಆ ರೀತಿ ಹೋಗುವುದಕ್ಕೂ ಇಷ್ಟಪಡುವುದಿಲ್ಲ. ಅಂತಹ ಬಹಳ ಸಂಕಷ್ಟದಲ್ಲಿ ಇರುವವರಿಗೆ, ಇವತ್ತು ಏನಾದರೊಂದು ನೆರವು ಕೊಡುವಂತಹ ವ್ಯವಸ್ಥೆ ಸರ್ಕಾರದಿಂದ ಆಗಬೇಕಲ್ಲವೇ? ಇವತ್ತು 6 ಜನ ಮಂತ್ರಿಗಳ ತಂಡ ನಮ್ಮ ಜಿಲ್ಲೆಗೆ ಭೇಟಿ ನೀಡಿತ್ತು. ಅದರಲ್ಲಿ ಮಾನ್ಯ ಕಾರ್ಮಿಕ ಸಚಿವರಾದ ಬಚ್ಚೇಗೌಡರು, ಮಾನ್ಯ ಕಾನೂನು ಸಚಿವರಾದ ಸುರೇಶ್ ಕುಮಾರ್‌ರವರು, ಮಾನ್ಯ ಗೃಹ ಸಚಿವರು ಮತ್ತು ನಮ್ಮ Horticulture minister ರವರು ಮುಂತಾದವರೆಲ್ಲರೂ ಇದ್ದರು. ಆ ತಂಡ ನಮ್ಮ ಜಿಲ್ಲೆಗೆ ಎರಡು ತಿಂಗಳ ಹಿಂದೆ ಭೇಟಿ ನೀಡಿ, ನಮ್ಮ ಜಿಲ್ಲೆಯ ಪರಿಸ್ಥಿತಿ ಎಲ್ಲವನ್ನೂ ನೋಡಿದ್ದಾರೆ. ಅವರು ನಮ್ಮ ಜಿಲ್ಲೆಗೆ ಬಂದಾಗ, ನಾವು ಅವರಿಗೆ ಮನವರಿಕೆ ಆಗುವ ರೀತಿಯಲ್ಲಿ ಚರ್ಚೆ ಮಾಡಿದ್ದೇವೆ. ರಾಜ್ಯ ಸರ್ಕಾರದಿಂದ ಈ ಬರ

ಪರಿಹಾರಕ್ಕೆ ಹಣವನ್ನು ನೀವೇನು ಬಿಡುಗಡೆ ಮಾಡುತ್ತೀರೋ, ಅದರಲ್ಲಿಯಾದರೂ ಕೂಡ ರೈತರಿಗೆ ಉದ್ಯೋಗ ಕೊಡಿಸತಕ್ಕಂಥ, ಅವತ್ತೇ ಕೂಲಿ ಸಿಗತಕ್ಕಂಥ ವ್ಯವಸ್ಥೆ ಮಾಡಬೇಕು. ಉದ್ಯೋಗ ಖಾತ್ರಿ ಯೋಜನೆಯಲ್ಲಿ ಇವತ್ತು ಅವನು ಕೆಲಸ ಮಾಡಿದರೆ, ಅವನ ಅಕೌಂಟಿಗೆ ದುಡ್ಡು ಬರುವುದಕ್ಕೆ 15–20 ದಿನಗಳು ಬೇಕಾಗುತ್ತವೆ. ಆಮೇಲೆ, asset create ಆಗದೆ, ಅದರ ಬಿಲ್ ಪಾಸ್ ಆಗುವುದಿಲ್ಲ. ಇವೆಲ್ಲಾ ನೂರೆಂಟು restrictions ಉದ್ಯೋಗ ಖಾತ್ರಿ ಯೋಜನೆಯಲ್ಲಿವೆ. ಆ ಕಾನೂನಿನ ಅಡಿಯಲ್ಲಿ ಮಾಡಬೇಕಾದ ಕೆಲಸಗಳನ್ನು ಪಂಚಾಯಿತುಯವರು ಮಾಡುತ್ತಾರೆ. ಆದರೆ ನೀವು ಬರಗಾಲದ ಸಂದರ್ಭದಲ್ಲಿ ರೈತರಿಗೆ, ಅವರ ಜೀವನೋಪಾಯಕ್ಕೆ ಬೇಕಾಗುವಂತಹ ರೀತಿಯಲ್ಲಿ, ಅವರ ಆರ್ಥಿಕ ಸುಧಾರಣೆಗಾಗಿ ಒಂದು ಉದ್ಯೋಗ ಒದಗಿಸುವಂತಹ ಕೆಲಸ ಮಾಡಬೇಕು. ಹಿಂದೆ ಯಾವ ರೀತಿಯಲ್ಲಿ ನಾವು 'ಕೂಲಿಗಾಗಿ ಕಾಳು'ಅಥವಾ ಇನ್ನಿತರ ಯೋಜನೆಯಲ್ಲಿ ರಸ್ತೆ ನಿರ್ಮಾಣ ಕಾಮಗಾರಿಗಳನ್ನು ಅಥವಾ ಕೆರೆಗಳ ಹೂಳೆತ್ತತಕ್ಕ ಕೆಲಸವನ್ನು ಮತ್ತು ಇನ್ನಿತರ ಕಾಮಗಾರಿಗಳನ್ನು ಮಾಡುತ್ತಿದ್ದೆವೋ, ಅದೇ ರೀತಿ ಈಗಲೂ ಮಾಡಬೇಕು. ಈಗ ಕೆರೆ ಹೂಳೆತ್ತುವಂತಹ ವಿಚಾರವಿದೆ. ಅದನ್ನು ನೀವು ಒಂದಷ್ಟು machinery ಬಳಸಿ, ಒಂದಷ್ಟು ಗ್ರಾಮದಲ್ಲಿ ಇರುವಂತಹ, ಕೂಲಿಗಾಗಿ ಯಾರ‍್ಯಾರು ಬರುತ್ತಾರೋ, ಅವರನ್ನು ಬಳಸಿ, ಅವರಿಗೆ ಕೂಲಿ ನೀಡಿ ಮಾಡಿಸಬಹುದು. ಹಿಂದೆಲ್ಲಾ ನಾವು ಬರಗಾಲದಲ್ಲಿ ಕಾಮಗಾರಿ ನಡೆಸಿದ್ದೇವೆ. ನಾವು ಶಾಸಕರಾಗಿ 10–15 ವರ್ಷಗಳ ಹಿಂದೆಲ್ಲಾ ಅದನ್ನು ನಡೆಸಿಕೊಂಡು ಬಂದಿದ್ದೇವೆ. ಈ ಉದ್ಯೋಗ ಖಾತ್ರಿ ಯೋಜನೆ ಜಾರಿಗೆ ಬಂದ ಮೇಲೆ, ಇದಕ್ಕೆ ನಿರ್ಬಂಧ ಹೇರಲಾಗಿದೆ. ರಾಜ್ಯ ಸರ್ಕಾರದ ಅನುದಾನದಲ್ಲಿ ಪ್ರತಿಯೊಂದು ಕ್ಷೇತ್ರದಲ್ಲಿ ಸುಮಾರು ಎರಡೆರಡು ಕೋಟಿ ರೂ.ಗಳನ್ನು ಇದಕ್ಕಾಗಿ ಬಿಡುಗಡೆ ಮಾಡಬೇಕು. ಆ ಹಣದಲ್ಲಿ ಈ ರೀತಿ ಪ್ರತಿ ಗ್ರಾಮದಲ್ಲೂ ಒಂದೊಂದು ಕಾಮಗಾರಿಗಳು ನಡೆದು, ಆ ಜನರ ಜೀವನೋಪಾಯಕ್ಕೆ, ಅವರ ಆರ್ಥಿಕ ಸ್ಥಿತಿ ಸುಧಾರಣೆ ಆಗುವುದಕ್ಕೆ, ಅವರ ದೈನಂದಿನ ಜೀವನ ನಡೆಸುವುದಕ್ಕೆ ನೆರವಾಗಬೇಕೆಂದು ನಾನು ಈ ಸಂದರ್ಭದಲ್ಲಿ ಸರ್ಕಾರವನ್ನು ಕೇಳಲಿಕ್ಕೆ ಬಯಸುತ್ತೇನೆ. ಏಕೆಂದರೆ, ನಮ್ಮ ಜಿಲ್ಲೆಯಲ್ಲಿ 1 ಲಕ್ಷದ 4 ಸಾವಿರ job card holders ಇದ್ದಾರೆ. ಸುಮಾರು 3 ಲಕ್ಷ ಕುಟುಂಬಗಳು ನಮ್ಮ ಜಿಲ್ಲೆಯಲ್ಲಿವೆ. ಬಹುತೇಕ 5–10% ಜನ, ಕೆಲಸಕ್ಕೆ

ಹೋಗದಿರುವ ವ್ಯಾಪಾರಸ್ಥರು, ಅವರು ಇವರು, ಜೀವನ ಮಾಡಬಹುದು. ಇನ್ನುಳಿದವರೆಲ್ಲಾ ಸಾಮಾನ್ಯ ರೈತಾಪಿ ವರ್ಗಕ್ಕೆ ಸೇರಿದವರಾಗಿದ್ದಾರೆ. ಅವರೆಲ್ಲರೂ ಇವತ್ತು ಬಹಳ ಸಂಕಷ್ಟದಲ್ಲಿ ಇರುವಂತಹ ಸಂದರ್ಭದಲ್ಲಿ ಅವರಿಗೆ ಕೂಲಿ ಒದಗಿಸಿ, ರೈತನಿಗೆ ಉದ್ಯೋಗ ಒದಗಿಸಿ ಕೊಡುವಂತಹ ಕೆಲಸವನ್ನು ಮಾಡಬೇಕೆಂದು ಈ ಸಂದರ್ಭದಲ್ಲಿ ನಾನು ಕೇಳುತ್ತೇನೆ. ಇನ್ನು ಕುಡಿಯುವ ನೀರಿನ ಬಗ್ಗೆ ಹೇಳುವುದಾದರೆ, ಈ ಕುಡಿಯುವ ನೀರು ಏನಾಗಿದೆ ಎಂದರೆ, ನಮ್ಮಲ್ಲಿ 1983–85ರಲ್ಲಿ ಮಾನ್ಯ ನಜೀರ್ ಸಾಬ್‌ರವರು ಗ್ರಾಮೀಣಾಭಿವೃದ್ಧಿ ಸಚಿವರಾಗಿದ್ದಂತಹ ಸಂದರ್ಭದಲ್ಲಿ 80 ಅಡಿಗೆ ನೀರು ಸಿಗುತ್ತಿತ್ತು. ಇವತ್ತು ಅದೇ ಗ್ರಾಮಗಳಲ್ಲಿ, ಅದೇಬೋರ್‌ವೆಲ್ ಪಕ್ಕದಲ್ಲಿ ಇವತ್ತು 800 ಅಡಿಗಳಷ್ಟು ಕೊರೆದರೂ ಕೊಡ ನೀರು ಬರದಿರುವಂತಹ ಪರಿಸ್ಥಿತಿ ನಿರ್ಮಾಣವಾಗಿದೆ. ಮಾಜಿ ಸ್ಪೀಕರ್ ನಾಗರತ್ನಮ್ಮನವರು ಇದ್ದಂತಹ 5 ಸಾವಿರ ಜನಸಂಖ್ಯೆ ಇರುವಂತಹ ಕಬ್ಬಳ್ಳಿಗೆ ಗ್ರಾಮಕ್ಕೆ 25 ಲಕ್ಷ ರೂ.ಗಳಷ್ಟು ಖರ್ಚು ಮಾಡಿ, 7 ಕಿ.ಮೀ. ದೂರದಿಂದ ನಾವು ನಿನ್ನೆ ನೀರನ್ನು ತಂದು ಕೊಟ್ಟಿದ್ದೇವೆ. ಇಡೀ ಊರಿಗೆ ಊರೇ ಬೋರ್‌ವೆಲ್‌ನಿಂದೆ ಟ್ಯಾಂಕ್‌ಗೆ ನೀರು ತುಂಬಿಸಿರುವುದನ್ನು ನೋಡಿ ಸಂತೋಷಪಟ್ಟಿತ್ತು. ಜನರೆಲ್ಲರೂ ಹಬ್ಬದ ವಾತಾವರಣದಲ್ಲಿ ನಿನ್ನೆ ಸಾಯಂಕಾಲ ಅಲ್ಲಿ ಉತ್ಸವ ಮಾಡಿದ್ದಾರೆ. ಒಂದು ಬೋರ್‌ವೆಲ್‌ಗೆ ನೀರು ಬಂದು, ಅದನ್ನು ಟ್ಯಾಂಕಿಗೆ ತುಂಬಿಸಿದ್ದಕ್ಕಾಗಿ ಅಲ್ಲಿ ಜನ ಸಂತೋಷ ಪಟ್ಟರು. ನಮ್ಮ ಒಂದೂವರೆ ಲಕ್ಷ ಲೀಟರ್ ಸಾಮರ್ಥ್ಯದ ಟ್ಯಾಂಕ್ ತುಂಬಿ ಎಷ್ಟೋ ವರ್ಷಗಳಾಗಿತ್ತು ಎಂದು ಆ ಜನ ಸಂತಸಪಟ್ಟರು. ಈ ರೀತಿಯ ಪರಿಸ್ಥಿತಿ ಇವತ್ತು ನಮ್ಮ ಗ್ರಾಮೀಣ ಭಾಗದಲ್ಲಿ ಇದೆ. 7 ಕಿ.ಮೀ. ದೂರದಿಂದ ಒಂದು ಗ್ರಾಮಕ್ಕೆ ನೀರು ತರುವಂತಹ ಪರಿಸ್ಥಿತಿ ನಮ್ಮಲ್ಲಿ ಹಿಂದೆ ಯಾವಾಗಲೂ ಇರಲಿಲ್ಲ. ಇಂತಹ ಒಂದು ಪರಿಸ್ಥಿತಿ ಇವತ್ತು ಎಲ್ಲಾ ಗ್ರಾಮಗಳಲ್ಲೂ ಉದ್ಭವವಾಗುತ್ತಿದೆ. ಆದರಿಂದ, ಕುಡಿಯುವ ನೀರಿಗಾಗಿ ಕಳೆದ ಬಾರಿ scarcity ನಲ್ಲಿ ಕೆಲಸಗಳನ್ನು ಏನು ಮಾಡಲಾಗಿತ್ತು. ಈಗ ಅವೆಲ್ಲಾ ಬತ್ತಿ ಹೋಗಿವೆ. ಪುನಃ ಮತ್ತೆ ಅದೇ ಗ್ರಾಮಕ್ಕೆ ನೀರು ಕೊಡಬೇಕಾಗಿದೆ. ಜನ ನೀವು ಏನು ಮಾಡಿಸಿದ್ದೀರಿ ಎಂದು ನಮ್ಮನ್ನು ಕೇಳುತ್ತಾರೆ. ನಮ್ಮನ್ನು ಜನ ದಾರಿಯಲ್ಲಿ ಅಡ್ಡ ಹಾಕುತ್ತಾರೆ, ಎಲ್ಲಿ ಹೋಗುವುದಕ್ಕೂ ಬಿಡುವುದಿಲ್ಲ. ನಾವು ಅವರ ಸಂಕಷ್ಟಕ್ಕೆ ಈ ಸಂದರ್ಭದಲ್ಲಿ ನೆರವಾಗಬೇಕಾಗುತ್ತದೆ. ಆದ್ದರಿಂದ, ಈ ಕುಡಿಯುವ ನೀರಿಗಾಗಿ ವಿಶೇಷವಾಗಿ ಒಂದೊಂದು ಕೋಟಿ ರೂ.ಗಳನ್ನು ಪ್ರತಿ ಕ್ಷೇತ್ರಕ್ಕೆ ಬಿಡುಗಡೆ ಮಾಡಿದ್ದೇವೆಂದು ಮಾನ್ಯ ಸದಾನಂದಗೌಡರು ಇದ್ದಾಗಲೇ ಹೇಳಿದ್ದರು. ಮಾನ್ಯ ಜಗದೀಶ್

ಶೆಟ್ಟರ್‌ರವರೂ ಸಹಾ video conference ಮಾಡಿದಾಗಲೂ ಕೂಡ ಒಂದೊಂದು ಕೋಟಿ ರೂ.ಗಳನ್ನು ಕೊಟ್ಟಿದ್ದೇವೆಂದು ಹೇಳಿದರು. ಆದರೆ ಇವತ್ತಿನವರೆಗೂ ನಾನು ಈ ಸಭೆಗೆ ಬರುವುದಕ್ಕೆ ಮುಂಚೆಯೂ, ಡಿ.ಸಿ. ಆಫೀಸಿಗೆ ಫೋನ್ ಮಾಡಿ ಕೇಳಿದೆ, ತಾವು ಹೇಳಿದಂತೆ ಪ್ರತಿ ಕ್ಷೇತ್ರಕ್ಕೆ 1 ಕೋಟಿ ರೂ.ಗಳು ಇನ್ನೂ ಬಿಡುಗಡೆಯಾಗಿ ಬಂದಿಲ್ಲ. ಈ ರೀತಿ ನೀವು ಘೋಷಣೆ ಮಾಡಿ ಅಲ್ಲಿ ಸಂಬಂಧಪಟ್ಟ ಇಲಾಖೆಗೆ ಹಣ ಬಿಡುಗಡೆ ಆಗಿಲ್ಲದಿದ್ದರೆ, ಕಾರ್ಯಕ್ರಮವನ್ನು ರೂಪಿಸುವುದು ಹೇಗೆ? ಅದನ್ನು ಅನುಷ್ಠಾನಕ್ಕೆ ತರುವುದು ಹೇಗೆ? ಬರೇ ಘೋಷಣೆಯಲ್ಲಿಯೇ ನಾವು ಜನಗಳ ಹೊಟ್ಟೆಯನ್ನು ತುಂಬಿಸುವಂತಹ ಪರಿಸ್ಥಿತಿ ಇವತ್ತು ಆಗುತ್ತದೆ. ಈ ಎರಡು ಮೂರು ವಿಚಾರಗಳು ಮತ್ತು ವಿದ್ಯುತ್ ವಿಚಾರ ಹೇಳಬೇಕಾಗಿದೆ. ಈಗ ಏನಾಗಿದೆ? ನಮ್ಮ ಜಿಲ್ಲೆಯಲ್ಲಿ ವಿದ್ಯುತ್ requirement 140 megawatts ಇದೆ. ಈಗ 60 ಮೆಗಾವ್ಯಾಟ್ ವಿದ್ಯುತ್ ಸರಬರಾಜು ಆಗುತ್ತಿದೆ. 5 ಗಂಟೆ ತ್ರೀ-ಫೇಸ್ ಕರೆಂಟ್ ಎಂದು ಒಂದು ಸರ್ಕ್ಯುಲರ್ ಅನ್ನು ಕಳುಹಿಸಿದ್ದಾರೆ. ಎಲ್ಲಾ ಕೆ.ಇ.ಬಿ. ಆಫೀಸ್ ಮುಂದೆ ಸುತ್ತೋಲೆ ಪ್ರತಿ ಹಾಕಿದ್ದಾರೆ. ಇವತ್ತು ಮೂರು ಗಂಟೆಯ ಮೇಲೆ three-phase current ಬರುತ್ತಿಲ್ಲ. ಮತ್ತು ರಾತ್ರಿಯ ಹೊತ್ತು mid night ನಲ್ಲಿ ಒಂದು ಗಂಟೆ, ಒಂದೂವರೆ ಗಂಟೆ three-phase current ಕೊಡುತ್ತಾರೆ. ಅದೂ 4-5 ಸಲ ಟ್ರಿಪ್ ಆಗುತ್ತದೆ. ರೈತ ತನ್ನ ಪಂಪುಸೆಟ್ಟಿನಲ್ಲಿ ಏನಾದರೂ ಅಲ್ಪಸ್ವಲ್ಪ ನೀರು ಇರುವವನು ದಿನಾ ಜಾಗರಣೆ ಇರುವಂತಹ ಪರಿಸ್ಥಿತಿ ಆಗಿದೆ. ದಿನ ಮಧ್ಯದಲ್ಲಿ ಒಂದು ಗಂಟೆಯವರೆಗೆ ಮಲಗಿ ಎದ್ದು ಹೋಗುವ ಹಾಗಿಲ್ಲ. ಒಂದರಿಂದ ಮೂರು ಗಂಟೆಯವರೆಗೆ ಕರೆಂಟ್ ಕೊಡುತ್ತಾರೆ. ಆ ಟೈಮಿನಲ್ಲಿ ಮೂರು ಸಲ ನಾಲ್ಕು ಸಲ ಟ್ರಿಪ್ ಆಗುತ್ತದೆ. ಆ ಟ್ರಿಪ್ ಆದಂತಹ ಸಂದರ್ಭದಲ್ಲಿ ಅವನು ಕಾಯುತ್ತಿದ್ದು pump start ಮಾಡಿಕೊಂಡು ಬೋರ್‌ವೆಲ್ ನಲ್ಲಿ ನೀರು ಇರುವವನು ಆ ಜಮೀನಿಗೆ ಬಳಕೆ ಮಾಡಿಕೊಳ್ಳಬೇಕಾದಂತಹ ಪರಿಸ್ಥಿತಿ ಇದೆ. ನೀವೇನು three-phase currentಕೊಡುತ್ತೇವೆಂದು ಹೇಳಿದ್ದೀರಿ, ಅದನ್ನು ಸಕಾಲದಲ್ಲಿ ಮತ್ತು interr -uption ಇಲ್ಲದೇ ಇರುವಂತಹ ರೀತಿಯಲ್ಲಿ ಕೊಡುವಂತಹ ಒಂದು ವ್ಯವಸ್ಥೆಯನ್ನು ಸರ್ಕಾರ ಮಾಡಬೇಕು ಎಂದು ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಬಯಸುತ್ತೇನೆ. ಮತ್ತೆ ವಿದ್ಯುಚ್ಛಕ್ತಿಯಲ್ಲಿ ಏನಾಗಿದೆ ಅಂದರೆ ಸುಮಾರು ವರ್ಷದಿಂದ ಈ ಅಕ್ರಮವನ್ನು ಸಕ್ರಮ ಮಾಡುತ್ತೇವೆಂದು ಹೇಳಿ

ಹೇಳಿ ಅದನ್ನು extend ಮಾಡಿಕೊಂಡು ಬಂದು ಇನ್ನೂ ಅದಕ್ಕೆ ಒಂದು ಕೊನೆ ಎಂದು ತಿಳಿಸಿಲ್ಲ. ಈಗ ಏನಾಗಿದೆ ಅಂದರೆ ನಮ್ಮ ಜಿಲ್ಲೆಯಲ್ಲಿ ಸುಮಾರು 10,770 IP Set ಗಳು ಅಕ್ರಮ ಸಂಪರ್ಕದಲ್ಲಿರುವಂತಹವು ಚಾಲ್ತಿಯಲ್ಲಿದ್ದಾವೆ. ನನ್ನದೊಂದು ಸಣ್ಣ ಜಿಲ್ಲೆ ನಾಲ್ಕು ತಾಲ್ಲೂಕು ಇರುವಂತಹದು. ಇಂತಹ ಕಡೆಯಲ್ಲಿ ಈಗ 10,770 ಅಕ್ರಮ IP Set ಗಳು ಇದ್ದು ಇವರಿಗೆಲ್ಲಾ ಒಂದು ಕಾಲಾವಕಾಶ ಕೊಟ್ಟು ನೀವೆಲ್ಲಾ ಸಕ್ರಮ ಮಾಡಿಸಿಕೊಳ್ಳಿ ಎಂದು ಹೇಳಿದರು. ಅದರಲ್ಲಿ ಅರ್ಜಿ ಬಂದವು ಎಷ್ಟು ಎಂದರೆ ಬರೇ ಮೂರು ಸಾವಿರೆ ಅಷ್ಟೇ. ಇನ್ನೂ 7 ಸಾವಿರ ಅಕ್ರಮದಲ್ಲಿಯೇ ಚಾಲ್ತಿಯಲ್ಲಿವೆ. ಹಾಗಾಗಿ ಏನಾಗಿದೆ ಅಂದರೆ ಸಕ್ರಮದಲ್ಲಿ ರನ್ ಆಗುವಂತಹ motorಗಳಿಗೂ voltageಸಾಕಾಗುತ್ತಿಲ್ಲ. ಈ ಅಕ್ರಮದಲ್ಲಿ ತೆಗೆದುಕೊಂಡಿರುವವರು ಇದ್ದಾರೆ. ಒಂದು ಟಿ.ಸಿ. ಓವರ್ ಲೋಡ್ ಆಗಿ ಪ್ರತಿ ನಿತ್ಯ ಟಿ.ಸಿ.ಗಳು ಸುಟ್ಟು ಹೋಗುತ್ತಿವೆ. ಇವತ್ತು ಸುಮಾರು 63 ಕೆ.ವಿ.65 ಕೆ.ವಿ. 100 ಕೆ.ವಿ. ನಮ್ಮ ಜಿಲ್ಲೆಯಲ್ಲಿ requirement ಇದೆ. 25 ಕೆ.ವಿ. 125 ರಿಂದ 200 ಟಿ.ಸಿ. ಇವತ್ತು ಡಿಮ್ಯಾಂಡ್ ನಲ್ಲಿದೆ. ಪ್ರತಿ ದಿನ ರೈತರು ಬೆಸ್ಕಾಂ ಆಫೀಸ್ ಚಾಮರಾಜ ನಗರದಲ್ಲಿ ಮುಂದೆ ಕಾಯ್ದುಕೊಂಡು ಇರುತ್ತಾರೆ. ನಮಗೆ ಬರುವಂತಹ 4–5 ಮೊಬೈಲ್ ಫೋನ್‌ಗಳು ಈ ಟಿ.ಸಿ.ಗೆ ಉತ್ತರ ಹೇಳುವಂತಹ ಒಂದು ಪರಿಸ್ಥಿತಿ ಇವತ್ತು ನಿರ್ಮಾಣ ಆಗಿದೆ. ಹೀಗಾಗಿ ಆ ಒಂದು ಟಿ.ಸಿ.ಗಳ ಸಮರ್ಪಕವಾಗಿ ವ್ಯವಸ್ಥೆ ಮಾಡಬೇಕು ಮತ್ತು ಈ ರೈತರಿಗೇನು ಒಂದು ಉದ್ಯೋಗ ಕೊಡುವಂತಹ ವಿಚಾರ ಇದೆ. ಮೇವನ್ನು ಸರಬರಾಜು ಮಾಡುವಂತಹ ವಿಚಾರ ಇದೆ ಮತ್ತು ಸುವರ್ಣ ಭೂಮಿಯಲ್ಲಿ ಏನು ಹಣ ಕೊಡಬೇಕು ಎಂದು ಹೇಳಿ ನಿಮ್ಮ ಸರ್ಕಾರವೇ ಘೋಷಣೆ ಮಾಡಿದೆ, ಏಕಕಾಲಕ್ಕೆ ಒಂದು ವರ್ಷದಲ್ಲಿ ಅವರಿಗೆಲ್ಲಾ ಒಂದೇ ಸಲ ಕೊಟ್ಟುಬಿಡಿ. ಈ ವರ್ಷ ಆದ ಮೇಲೆ ಇನ್ನು ಮೂರು ತಿಂಗಳು ಕಳೆದ ಮೇಲೆ ಚುನಾವಣೆಗೆ ಹೋಗಬೇಕಾಗುತ್ತದೆ. 6 ತಿಂಗಳಲ್ಲೇ ಹೋಗಬಹುದು. ಇನ್ನೂ ಈ ಯೋಜನೆಗಳಲ್ಲಿ 50% ರೈತರಿಗೆ ಫಲ ಕೊಡುತ್ತೀರಿ, ಇನ್ನು 50% ಫಲ ಬರುವುದಿಲ್ಲ. ಆದ್ದರಿಂದ ಕೊಡುವಂತಹ ಯೋಜನೆ ಪೂರ್ಣವಾಗಿ ಸಿಗುವಂತಹ ಒಂದು ವ್ಯವಸ್ಥೆ ಆಗಬೇಕು ಮತ್ತು ಬರಗಾಲದಲ್ಲಿ ರೈತರ ಬಗ್ಗೆಯೇ ಮಾತನಾಡುತ್ತೇವೆ. ರೈತರಿಗೆ ನೇರವಾಗಿ ಏನು ಪರಿಹಾರ ಸಿಗುತ್ತದೆ? ಇದನ್ನು ಮಾನ್ಯ ಸಚಿವರು ಉತ್ತರದಲ್ಲಿ ಹೇಳಬೇಕು. ರೈತರಿಗೆ ನೇರವಾಗಿ ಅವರಿಗೇನಾದರೂ ನೀವು ಬಿತ್ತನೆ ಲಾಸ್ ಮಾಡಿಕೊಂಡವರಿಗೆ

ಪರಿಹಾರ ಕೊಡುತ್ತೀರಾ? ಕೇಂದ್ರ ಸರ್ಕಾರ ಎರಡು ಸಾವಿರ, ಮೂರು ಸಾವಿರ ನಿಗದಿ ಪಡಿಸಿದೆ. ಇವತ್ತಿನ ದಿವಸದಲ್ಲಿ ಒಂದು ಹೆಕ್ಟೇರ್‌ಗೆ ನಾವೇ ಹೇಳಿದಂತಹ ರೀತಿಯಲ್ಲಿ ಹತ್ತರಿಂದ 40 ಸಾವಿರ ರೂಪಾಯಿಯವರೆಗೆ ಅವನು ಹಾಕುವ ಬೆಳೆ ಆಧಾರದ ಮೇಲೆ ಒಂದೊಂದು ಹೆಕ್ಟೇರ್‌ಗೆ ಖರ್ಚು ಬೀಳುತ್ತಿದೆ. ಕನಿಷ್ಠ ನೀವು ಒಂದು ಹೆಕ್ಟೇರ್‌ಗೆ ಐದು ಸಾವಿರ ಕೊಡಬೇಕು. ನಾನು ಅತಿ ಹೆಚ್ಚಿಗೆ ಕೇಳುವುದಕ್ಕೆ ಹೋಗುವುದಿಲ್ಲ. ಒಂದು ಹೆಕ್ಟೇರ್‌ಗೆ ಐದು ಸಾವಿರ ರೂಪಾಯಿ ಏನೇ ಬಿತ್ತನೆ ಮಾಡಿ ಕ್ರಾಪ್ ಲಾಸ್ ಮಾಡಿಕೊಂಡಿ-ದ್ದಾರೆ, crop compensation ಎಂದು ಹೇಳಿ ನೇರವಾಗಿ ಸರ್ಕಾರ ಒಂದು ಹೆಕ್ಟೇರ್‌ಗೆ ಐದು ಸಾವಿರ ರೂಪಾಯಿನಂತೆ ಕನಿಷ್ಠ ಮೊತ್ತ ಕೊಟ್ಟು ಅವನಿಗೆ ನೆರವಾಗಬೇಕು.ಮುಂದೆ ಮಳೆ ಬರುವಂತಹ ಸಂದರ್ಭದಲ್ಲಿ ಹಿಂಗಾರಿನಲ್ಲಿ ಏನಾದರೂ ಬೆಳೆ ಬೆಳೆಯಬೇಕಾದರೆ ಅವನಿಗೆ ಸಬ್ಸಿಡಿ ಹೆಚ್ಚಿಸಬೇಕು. ಬಿತ್ತನೆ ಬೀಜಗಳಿಗೆ 75% subsidy ಕೊಡಿ ಮತ್ತು pesticides ಗೆ 50 ರಿಂದ 80% ಹೆಚ್ಚಿಸಿ ಅವರಿಗೆ ನೆರವಾಗುವಂತಹ ಒಂದು ಕೆಲಸ ಮಾಡಬೇಕು ಎನ್ನುವಂತಹ ಮಾತನ್ನು ಹೇಳುತ್ತೇನೆ.

ಮತ್ತೆ Food Department ನಲ್ಲಿ ಕೂಡ ಈಗಾಗಲೇ ಎಪಿಎಲ್ ಕಾರ್ಡುದಾರರಿಗೆ ಆಗಸ್ಟ್‌ನಿಂದ ಆಹಾರವನ್ನು ಸ್ಥಗಿತ ಮಾಡುವಂತಹ ಒಂದು ಸುತ್ತೋಲೆಯನ್ನು ಹೊರಡಿಸಿದ್ದಿರಿ. ಈ ಬರಗಾಲದಲ್ಲಿ ನ್ಯಾಯಬೆಲೆ ಅಂಗಡಿ ಮುಖಾಂತರ food grains distribution stop ಮಾಡಿ ಬಿಟ್ಟರೆ ರೈತರು ಎಲ್ಲಿಗೆ ಹೋಗಬೇಕು? ಹಿಂದೆ ಕೂಲಿ ಜೊತೆಗೆ ಕಾಳು ಎಂದು ಅಕ್ಕಿಯನ್ನೂ ಕೊಡುತ್ತಿದ್ದರು. ಇವತ್ತು ಆಹಾರ ಪಡಿತರ ವಿತರಣೆಯನ್ನೂ ನಾವು ನಿಲ್ಲಿಸುತ್ತೇವೆ ಎಂದು ಸುತ್ತೋಲೆ ಹೊರಡಿಸಿದ್ದೀರಿ. ಯಾರಿಗೆ ಈ ಭಾವಚಿತ್ರ bio metric, income certificate ಕೊಡದೇ ಇದ್ದವರಿಗೆಲ್ಲಾ ಪಡಿತರವನ್ನು ನಿಲ್ಲಿಸಿದ್ದೇವೆಂದು ಹೇಳಿದ್ದೀರಿ. ನೀವು ಹಿಂದೆ 29 ಲಕ್ಷ ನೆಮ್ಮದಿ ಕೇಂದ್ರದಲ್ಲಿ ಕೊಡುವಾಗ ಬರೀ affidavit ತೆಗೆದುಕೊಂಡು ಕೊಟ್ಟು ಬಿಟ್ಟಿರಿ. ಅದರಿಂದ ಈಗೇನು ಈ ಭಾವ ಚಿತ್ರ bio metric ಮತ್ತು income certificate ಗೋಸ್ಕರ ವಿತರಣೆ ಮಾಡುತ್ತಿದ್ದ ಪಡಿತರವನ್ನು ನಿಲ್ಲಿಸಿದ್ದೀರಿ, ಈ ಬರಗಾಲದ ಸ್ಥಿತಿ ಸುಧಾರಣೆ ಆಗುವವರೆಗೂ ಅದನ್ನು ತಡೆ ಹಿಡಿದು ಅವರಿಗೆಲ್ಲಾ ಮತ್ತೆ ಯಥಾ ಸ್ಥಿತಿಯಲ್ಲಿ ಪಡಿತರ ವಿತರಣೆ ಮಾಡುವಂತಹ ಒಂದು ವ್ಯವಸ್ಥೆ ಮಾಡಬೇಕು. ಇದರಲ್ಲಿ ನಾವು ಬರ ಪರಿಹಾರವನ್ನು ಮಾಡುವಂತಹ ಸಂದರ್ಭದಲ್ಲಿ ಎಲ್ಲಾ ಕಾನೂನು ಪುಸ್ತಕ ಹಿಡಿದುಕೊಂಡೇ ಕೆಲಸ

ಮಾಡುವುದಕ್ಕೆ ಆಗುವುದಿಲ್ಲ. ಮೂಲಭೂತವಾಗಿ ಸಂಕಷ್ಟದಲ್ಲಿರುವಂತಹ ರೈತನಿಗೆ, ಜನರಿಗೆ ನೆರವಾಗುವಂತಹ ರೀತಿಯಲ್ಲಿ ಏನೇನು ಕಾರ್ಯಕ್ರಮ ಮಾಡಬೇಕೋ ಅದನ್ನು ಸರ್ಕಾರ ಸಮರೋಪಾದಿಯಲ್ಲಿ ಮಾಡಬೇಕು. ಇವತ್ತು ಎಷ್ಟು ಜನ ಅಧಿಕಾರಿಗಳು ಇರುತ್ತಿದ್ದಾರೆ? ಬೇಕಾದರೆ ಮಾನ್ಯ ಕಂದಾಯ ಮಂತ್ರಿಗಳು ನಮ್ಮ ಚಾಮರಾಜನಗರಕ್ಕೆ ಬನ್ನಿ. ನೀವು ಬಂದಿದ್ದೀರೋ ಇಲ್ಲವೋ ಗೊತ್ತಿಲ್ಲ, ಮಾನ್ಯ ಸುರೇಶ್ ಕುಮಾರ್ ಅವರೆಲ್ಲಾ ಬಂದಿದ್ದಾರೆ. ನೀವು ಒಂದು ಸಾರಿ ಬನ್ನಿ, ಅಲ್ಲಿ ಶನಿವಾರ, ಭಾನುವಾರ ಉಳಿದುಕೊಳ್ಳಿ. ಒಬ್ಬ ಅಧಿಕಾರಿ head quarters ನಲ್ಲಿ ವಾಸ ಮಾಡುತ್ತಿದ್ದರೆ ಪರವಾಗಿಲ್ಲ ಎಂದು ಹೇಳಬಹುದು. ಎಲ್ಲಾ ಜನ ದಿನಾ ಮೈಸೂರಿನಿಂದ ಬೆಳಿಗ್ಗೆ train ನಲ್ಲಿ ಬರುತ್ತಾರೆ. ಸಾಯಂಕಾಲ 5.30 ಕ್ಕೋ 6.00 ಗಂಟೆಗೋ train ಇದೆ. ಅರ್ಧ ಗಂಟೆ ಮುಂಚೆನೇ ಆಫೀಸಿನಿಂದ ಹೊರಟು train ನಲ್ಲಿ ಮೈಸೂರುಸೇರಿಕೊಳ್ಳುತ್ತಾರೆ. Intelligence ನಿಂದ ಒಬ್ಬರನ್ನು ನೇಮಿಸಿ ಬಿಡಿ. ಮೈಸೂರು ರೈಲ್ವೆ ಸ್ಟೇಷನ್ ನಿಂದ ಎಷ್ಟು ಜನ ಚಾಮರಾಜನಗರಕ್ಕೆ ಹೋಗುತ್ತಾರೆ, ಎಷ್ಟು ಜನ ಆ ಕಡೆ train ನಿಂದ ಬರುತ್ತಾರೆ ಎಂದು ನಿಮಗೆ ಲೆಕ್ಕ ಸಿಕ್ಕಿ ಹೋಗುತ್ತದೆ. ಬರಗಾಲದ ಸಂದರ್ಭದಲ್ಲಿ ಆಯಾಯ ತಾಲ್ಲೂಕು ಮಟ್ಟದ ಅಧಿಕಾರಿಗಳು ತಾಲ್ಲೂಕಿನಲ್ಲಿ ಉಳಿಯಬೇಕು. ಜಿಲ್ಲಾ ಮಟ್ಟದ ಅಧಿಕಾರಿಗಳು ಜಿಲ್ಲಾ ಮಟ್ಟದಲ್ಲಿ ಉಳಿಯಬೇಕು. ಮತ್ತೆ ಅವರು ಉಳಿದುಕೊಂಡರೆ ಸಾಕಾಗುವುದಿಲ್ಲ. ಅವರಿಗೆ ಸ್ವಲ್ಪ free hand ಆಗಿ ಕೆಲಸ ಮಾಡಲು ಅವಕಾಶ ಇರಬೇಕು. ಯಾವುದೇ ಒಂದು ಕಾರ್ಯಕ್ರಮ, ಅದು ಕುಡಿಯುವ ನೀರಿನ ವಿಚಾರ ಇರಲಿ, ಮೇವಿನದು ಇರಲಿ ಅಥವಾ ಇನ್ಯಾವುದೇ ಬರಕ್ಕೆ ಸಂಬಂಧಪಟ್ಟಂತಹ ಕೆಲಸ ಕಾರ್ಯಗಳನ್ನು ಮಾಡುವಾಗ free hand ಕೊಟ್ಟು ಅನುದಾನವನ್ನು ಬಿಡುಗಡೆ ಮಾಡಬೇಕು. ಇವತ್ತು ಇಡೀ ಒಂದೂವರೆ ವರ್ಷದಿಂದ ನಮ್ಮ ಜಿಲ್ಲೆಗೆ ಎಂಟೂವರೆ ಕೋಟಿ ರೂಪಾಯಿ ಕೊಟ್ಟಿರುವಂತಹದು. ಎಂಟೂವರೆ ಕೋಟಿ ರೂಪಾಯಿಯಲ್ಲಿ ನಾವು ನಾಲ್ಕು ತಾಲ್ಲೂಕಿನಲ್ಲಿ ಈ ಬರವನ್ನು ನೀಗಿಸಬೇಕು ಎಂದರೆ ಯಾವ ರೀತಿಯಾಗಿ ಆ ಕಾರ್ಯಕ್ರಮವನ್ನು ರೂಪಿಸಬೇಕು ಎನ್ನುವ ಮಾತನ್ನು ಹೇಳುತ್ತೇನೆ. ಇವತ್ತು ಈ ಮೇವಿನ ವಿಚಾರದಲ್ಲಿ ಮಾತ್ರ ವಿಶೇಷವಾದ ಗಮನವನ್ನು ಸರ್ಕಾರ ಹರಿಸಬೇಕು ಎಂದು ನಾನು ಈ ಸಂದರ್ಭದಲ್ಲಿ ಹೇಳಿ ಈ ಉದ್ಯೋಗ ಹಾಗೂ ಇತರ ವಿಚಾರದಲ್ಲಿ ನಾನೇನು ಕೆಲವು ಸಲಹೆಗಳನ್ನು ಸರ್ಕಾರದ ಗಮನಕ್ಕೆ ತರಲು

ಬಯಸಿದ್ದೇನೆ, ಅವುಗಳನ್ನು ಕಾರ್ಯರೂಪಕ್ಕೆ ತಂದು ನಮ್ಮ ಭಾಗದ ಜನರಿಗೆ ನೆರವಾಗಬೇಕು ಮತ್ತು ಈ ಬರ ಮುಂದುವರಿಯುವಂತಹ ಸಾಧ್ಯತೆಗಳುಹೆಚ್ಚಿರುವುದರಿಂದ ನಮ್ಮಲ್ಲಿ ಕೆರೆ ಕಟ್ಟೆಗಳಲ್ಲಿ ನೀರಿಲ್ಲ.ಜಾನುವಾರುಗಳಿಗೆ ನೀರಿಗೆ transport ಮಾಡುವಂತಹ ಒಂದು ಪರಿಸ್ಥಿತಿ ನಿರ್ಮಾಣವಾಗಿದೆ. ಅದಕ್ಕೆ ಪಂಚಾಯಿತಿಗಳಿಗೆ ವಿಶೇಷವಾದ ಅನುದಾನವನ್ನು ಅಲ್ಲಿಗೂ ಬಿಡುಗಡೆ ಮಡುವಂತಹ ಕೆಲಸವನ್ನು ಸರ್ಕಾರ ಮಾಡಬೇಕೆಂದು ಹೇಳಿ ನನಗೆ ಮಾತನಾಡಲು ಅವಕಾಶ ಕೊಟ್ಟಿದ್ದಕ್ಕೆ ತಮಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತಿದ್ದೇನೆ.

ಶ್ರೀ ಶ್ರೀಕಾಂತ್ ಕುಲಕರ್ಣಿ ಸುಬ್ಬರಾವ್(ಜಮಖಂಡಿ): ಮಾನ್ಯ ಉಪಾಧ್ಯಕ್ಷರೆ, ಈ ಬಾರಿ ಕರ್ನಾಟಕದಲ್ಲಿ ವಿಶೇಷವಾಗಿ ಉತ್ತರ ಕರ್ನಾಟಕದಲ್ಲಿ ಕಾಣಿಸಿಕೊಂಡಂತಹ ಭೀಕರ ಬರದ ಬಗ್ಗೆ ಈ ಸದನದಲ್ಲಿ ನಡೆಯುವ ಚರ್ಚೆಯಲ್ಲಿ ನನಗೆ ಭಾಗವಹಿಸಿ ನನ್ನ ಅನಿಸಿಕೆಗಳನ್ನು ಹಂಚಿಕೊಳ್ಳುವಂತಹ ಅವಕಾಶ ಕೊಟ್ಟಿರುವಂತಹ ನಿಮಗೆ ಧನ್ಯವಾದಗಳನ್ನು ಅರ್ಪಿಸುತ್ತೇನೆ. ಬಹುಶಃ ಅನೇಕ ಸಲ ಬರವನ್ನು ಕರ್ನಾಟಕ ಕಂಡಿದೆ. ಅದರಲ್ಲೂ ಉತ್ತರ ಕರ್ನಾಟಕದ ಭಾಗದ ಬಾಗಲಕೋಟೆ, ಬಿಜಾಪುರ,ಗುಲಬರ್ಗಾ ಭಾಗದಲ್ಲಿ ನಾವು ಪದೇ ಪದೇ ಬರಗಾಲಕ್ಕೆ ತುತ್ತಾಗಿದ್ದೇವೆ. ಬಹುಶಃ ನನಗೆ ನೆನಪಿದ್ದ ಮಟ್ಟಿಗೆ 1972 ರಲ್ಲಿ ಭೀಕರವಾದಂತಹ ಬರಗಾಲ ಆ ಭಾಗದಲ್ಲಿ ತಲೆದೋರಿತ್ತು. ಒಂದೊಂದು ಭಾಗದಲ್ಲಿ ಹಿಂಗಾರು ಮಳೆ ಮಾತ್ರ ಆಗಿರುತ್ತದೆ. ಒಂದೊಂದು ಭಾಗದಲ್ಲಿ ಹಿಂಗಾರು ಆಗದೇ ಮುಂಗಾರು ಆಗಿರುತ್ತದೆ. ಹಿಂಗಾರು-ಮುಂಗಾರು ಎರಡೂ ಮಳೆ ಆಗಿದ್ದನ್ನು ಕೂಡ ನಾವು ಅನೇಕರು ಮರೆತಿಲ್ಲ. ಆದರೆ ಈ ವರ್ಷ ವಿಶೇಷ ಅಂದರೆ ಒಂದು ಬಾರಿಗೆ ಮುಂಗಾರು, ಒಂದು ಬಾರಿಗೆ ಹಿಂಗಾರು ಹೋಗಿ ಮತ್ತೊಂದು ಬಾರಿಗೆ ಮುಂಗಾರು ಬೆಳೆಯನ್ನು ಕಳೆದುಕೊಂಡು ಇವತ್ತು ಆ ಪ್ರದೇಶ ವಿಶೇಷವಾಗಿ ಆ ಭಾಗದ 126 ತಾಲ್ಲೂಕುಗಳಲ್ಲಿ ಜೀವನವನ್ನು ಯಾವ ರೀತಿಯಲ್ಲಿ ನಡೆಸಬೇಕು ಎಂದು ಗ್ರಾಮಾಂತರ ಭಾಗದ ರೈತರಿಗೆ, ಕೃಷಿ ಕಾರ್ಮಿಕರಿಗೆ ವಿಶೇಷವಾದಂತಹ ಸಮಸ್ಯೆ ಆಗಿದೆ. ಪ್ರಕೃತಿ ಕೈಕೊಟ್ಟ ಪರಿಸ್ಥಿತಿಯಲ್ಲಿ ಸರ್ಕಾರವನ್ನು ನಡೆಸಿಕೊಂಡು ಹೋಗಬೇಕು. ಜನತೆಗೆ ಬೇಕಾದ ಮೂಲಭೂತ ಸೌಲಭ್ಯಗಳನ್ನು ಕೊಡಬೇಕು, ಕುಡಿಯುವ ನೀರು ಕೊಡಬೇಕು. ಗ್ರಾಮಾಂತರ ಭಾಗದ ಕೃಷಿ ಕಾರ್ಮಿಕರ ಕೈಗೆ ಕೆಲಸ ಕೊಡಬೇಕು. ಜಾನುವಾರುಗಳು ಬಹಳ ದೊಡ್ಡ ಸಂಖ್ಯೆಯಲ್ಲಿದ್ದು, ಅವುಗಳಿಗೆ ಮೇವು ಕೊಟ್ಟು ಸಂರಕ್ಷಣೆ

ಮಾಡಬೇಕೆಂಬ ಹಿನ್ನೆಲೆಯಲ್ಲಿ ನಮ್ಮ ನಾಯಕರಾದಂತಹ ಸನ್ಮಾನ್ಯ ಯಡಿಯೂರಪ್ಪನವರು, ವಿರೋಧ ಪಕ್ಷದ ಮುಖಂಡರು ಹೀಗೆ ಹತ್ತಾರರು ಜನ ಹಿರಿಯ ಸದಸ್ಯರು ಅನೇಕ ಸಲಹೆ ಸೂಚನೆಗಳನ್ನು ಕೊಟ್ಟಿದ್ದಾರೆ. ಬಹುಶಃ ನಮ್ಮ ಭಾಗದಲ್ಲಿ ನಮ್ಮ ತಂಡ ಬಿಜಾಪುರ, ಬಾಗಲಕೋಟೆ ಜಿಲ್ಲೆಯಲ್ಲಿ ಸರ್ಕಾರ ಕೈಗೊಂಡ ಕಾರ್ಯಕ್ರಮಗಳ ಬಗ್ಗೆ ನನಗೆ ಬಹಳಷ್ಟು ಸಮಾಧಾನವನ್ನು ತಂದಿದೆ. ಆ ಭಾಗದಲ್ಲಿ ನಮ್ಮ ಉಸ್ತುವಾರಿ ಸಚಿವರು ನಾಲ್ಕಾರು ಬಾರಿ ಚುನಾಯಿತ ಪ್ರತಿನಿಧಿಗಳನ್ನು, ಹಿರಿಯ ಅಧಿಕಾರಿಗಳನ್ನು ಕರೆದು ಈ ಬರಗಾಲ ಪರಿಸ್ಥಿತಿಯನ್ನು ನಿಭಾಯಿಸಲು ಯಾವರೀತಿ ಕ್ರಮ ಆಗಬೇಕು. ಹಾಗೂ ನೀರಿನ ವಿತರಣಾ ವ್ಯವಸ್ಥೆಯ ಕುರಿತು ಸಾಕಷ್ಟು ಚರ್ಚೆಗಳನ್ನು ಮಾಡಿದ್ದು, ಜನಕ್ಕೆ ಸಮಾಧಾನ ಕೂಡಾ ಇದೆ. ಬಹುಶಃ ನಮ್ಮ ಬಾಗಲಕೋಟೆ ಜಿಲ್ಲೆಯಲ್ಲಿ ಸುಮಾರು 11 ಕೋಟಿ 53 ಲಕ್ಷ ರೂ.ಗಳನ್ನು ಬೋರ್‌ವೆಲ್, ಪಂಪ್‌ಸೆಟ್ ಹಾಗೂ ಪೈಪ್‌ಲೈನ್ ಹಾಕಿಸಲು ಇರಬಹುದು, ಅಲ್ಲಲ್ಲಿ cistern ಕಟ್ಟುವುದರ ಮೂಲಕಜನರಿಗೆ ಶುದ್ಧ ಕುಡಿಯುವ ನೀರನ್ನುಕೊಡಬೇಕೆಂಬ ಹಿನ್ನೆಲೆಯಲ್ಲಿ ಸಾಕಷ್ಟು ಹಣವನ್ನು ಖರ್ಚು ಮಾಡಿ ನಮ್ಮ ಜಿಲ್ಲೆಯಲ್ಲಿ ಎಲ್ಲಿಯೂ ಅಪಸ್ವರ ಬಾರದ ಹಾಗೆ ಸರ್ಕಾರ ಕೆಲಸ ಮಾಡಿದೆ. ಬಹುಶಃ ನನ್ನ ಜಮಖಂಡಿ ವಿಧಾನಸಭಾ ಕ್ಷೇತ್ರದಲ್ಲಿ ಬರುವ ಸುಮಾರು 35 ಹಳ್ಳಿಗಳಲ್ಲಿರುವ ನೀರಿನ ಸಮಸ್ಯೆಗೆ ಸರ್ಕಾರ ಸಕಾಲಕ್ಕೆ ಸ್ಪಂದಿಸಿ 92 ಬೋರ್‌ವೆಲ್‌ಗಳನ್ನು ಹಾಕಿಕೊಟ್ಟಿದೆ. ಅಲ್ಲಿ ಮಾಡಿರುವ ಕಾರ್ಯಕ್ರಮ ಜನರಿಗೆ ಬೇಕಾಗಿರುವ ಎಲ್ಲಾ ವ್ಯವಸ್ಥೆಗಳನ್ನು ಮಾಡುವಲ್ಲಿ ನಮ್ಮ ಸರ್ಕಾರ ಸಾಕಷ್ಟು ಕ್ರಿಯಾಶೀಲವಾಗಿ ಕೆಲಸ ಮಾಡಿದೆ ಎಂದು ಅಭಿಮಾನದಿಂದ ಹೇಳಬಯಸುತ್ತೇನೆ. ಇವತ್ತು ಹಿಂಗಾರು–ಮುಂಗಾರು ಮಳೆ ಕೈ ಕೊಟ್ಟು ರೈತ ಕಂಗಾಲಾದಾಗ ಆಗಾಗ ಅಲ್ಲಿ ಬರುವುದು ಮೇವಿನ ಸಮಸ್ಯೆ. ಜಾನುವಾರುಗಳ ರಕ್ಷಣೆ ಮಡುವುದು ಬಹಳ ಅಗತ್ಯವಿರುತ್ತದೆ. ಇಲ್ಲಿ ಅನೇಕ ಸದಸ್ಯರು ತಮ್ಮ ಭಾಗದಲ್ಲಿ ಗೋಶಾಲೆ ಆಗಲಿಲ್ಲವೆಂದು ತಮ್ಮ ನೋವನ್ನು ತೋಡಿಕೊಂಡರು. ಆದರೆ ನಮ್ಮ ಜಿಲ್ಲೆಯಲ್ಲಿ 16 ಗೋ ಶಾಲೆಗಳು ಪ್ರಾರಂಭವಾಗಿದೆ. ನನ್ನ ಜಮಖಂಡಿ ವಿಧಾನಸಭಾ ಕ್ಷೇತ್ರದ ಸಾವಳಗಿ ವಿಭಾಗ ನೀರಾವರಿ ಸೌಲಭ್ಯದಿಂದ ವಂಚಿತವಾದ ಪ್ರದೇಶ.ಅಲ್ಲಿ ನಮ್ಮ ಸನ್ಮಾನ್ಯ ನಾಯಕರಾದ ಯಡಿಯೂರಪ್ಪನವರು, ಸನ್ಮಾನ್ಯ ಈಶ್ವರಪ್ಪನವರು ಸಾಕಷ್ಟು ಬಾರಿ ಪ್ರವಾಸ ಮಾಡಿದ್ದು, ಅವರಿಗೆ ಹಳ್ಳಿಗಳ ಸ್ಥಿತಿಗತಿ ಗೊತ್ತಿದೆ. ಅಲ್ಲಿ ನಾನು ಸರ್ಕಾರದ ಮೇಲೆ, ಅಧಿಕಾರಿಗಳ ಮೇಲೆ ಒತ್ತಡ ತಂದಾಗ ಸಾವಳಿಗಿ ಹೋಬಳಿ ಕೇಂದ್ರದಲ್ಲಿ 6 ಗೋಶಾಲೆಗಳನ್ನು

ಪ್ರಾರಂಭ ಮಾಡಿದೆ. ಯಾವುದೇ ಬಡವರ ಜಾನುವಾರುಗಳು ಕಸಾಯಿ ಖಾನೆಗೆಹೋಗಬಾರದು, ಮೇವು ಇಲ್ಲದೇ ಸಾಯಬಾರದು ಎಂಬ ಹಿನ್ನೆಲೆಯಲ್ಲಿ 6 ಗೋ ಶಾಲೆಗಳನ್ನು ಪ್ರಾರಂಭ ಮಾಡಿ, ಸಾಕಷ್ಟು ಜನರಿಗೆ ಅನುಕೂಲ ಮಾಡುವ ಕಾರ್ಯಕ್ರಮ ಹಾಕಿಕೊಂಡಿದೆ. ಬಹುಶಃ ಪದೇ ಪದೇ ಆ ಭಾಗ ವಿಶೇಷವಾಗಿ ಬರಗಾಲಕ್ಕೆ ತುತ್ತಾಗುವುದರಿಂದ ಸನ್ಮಾನ್ಯ ವಿರೋಧ ಪಕ್ಷದ ನಾಯಕರು ಮಾತನಾಡುವಾಗ ಹೇಳಿದರು. ಇದಕ್ಕೆ ತಾತ್ಪೂರ್ತಿಕವಾದ ಪರಿಹಾರ ಕೊಡದೆ ಪದೇ ಪದೇ ಬರಗಾಲಕ್ಕೆ ತುತ್ತಾಗುವ ಪ್ರದೇಶಗಳಿಗೆ ಅದನ್ನು ತಡೆದುಕೊಳ್ಳುವಷ್ಟು ಶಕ್ತಿ ಅಥವಾ ಶಾಶ್ವತನೀರಾವರಿ ಯೋಜನೆಗಳನ್ನು ಜಾರಿಗೆ ತರುವ ವ್ಯವಸ್ಥೆ ಆಗಬೇಕೆಂಬ ಕೂಗು ಅದು ಸರಿಯಾದ ಕೂಗು ಎಂದು ನನಗನಿಸುತ್ತದೆ. ಹೀಗಾಗಿ ನಮ್ಮ ಭಾಗದಲ್ಲಿ ಹರಿಯುವ ಕೃಷ್ಣಾ ನದಿ ಪದೇ ಪದೇ ಒಣಗಿ ಹೋಗಿ ಸಾಕಷ್ಟು ಸಮಸ್ಯೆಯಾಗಿದೆ. ಈ ಬಾರಿ ಮಾತ್ರವಲ್ಲ, ನಮ್ಮ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ ಬಹುಶಃ ಮೊದಲ ಬಾರಿ ಕೃಷ್ಣ ನದಿ ಒಣಗಿದೆ. ಈ ಹಿಂದೆ ಕಾಂಗ್ರೆಸ್ ಪಕ್ಷ ಅಧಿಕಾರದಲ್ಲಿದ್ದಾಗ, ಹತ್ತಾರು ಬಾರಿ ಕೃಷ್ಣ ನದಿ ಒಣಗಿ ಹೋಗಿದೆ. ಸುಮಾರು ಮೂರ್‍ನಾಲ್ಕು ತಿಂಗಳು ಬೆಳೆ ಒಣಗಿ ಸಂಪೂರ್ಣವಾಗಿ ರೈತರು ಬೆಳೆ ಕಳೆದುಕೊಂಡು ಸ್ಥಿತಿ ಬಂದಿತ್ತು. ಆದರೆ ಅವತ್ತು ರೈತರ ಸಮಸ್ಯೆಗೆ ಯಾರೂ ಸರಿಯಾಗಿ ಸ್ಪಂದನೆ ಮಾಡಲಿಲ್ಲ. ಇವತ್ತು ಅದೇ ಪರಿಸ್ಥಿತಿ ಬಂದು ಕೃಷ್ಣ ನದಿಗೆ ನೀರನ್ನು ಬಿಡಿಸಬೇಕು ಎಂದು ಫೆಬ್ರವರಿಯಲ್ಲಿ ನಡೆದ ವಿಧಾನಸಭಾ ಅಧಿವೇಶನದಲ್ಲಿ ನಾನು ಮತ್ತು ನನ್ನ ಕೆಲವು ಸ್ನೇಹಿತರು ಸರ್ಕಾರದ ಗಮನ ಸೆಳೆದು ಮಹಾರಾಷ್ಟ್ರದ ಕೊಯಿನಾ ಡ್ಯಾಮಿನಿಂದ 5 ಟಿ.ಎಂ.ಸಿ. ನೀರನ್ನು ಬಿಡಿಸಬೇಕೆಂದು ಒತ್ತಾಯಮಾಡಿದ್ದೇವೆ. ನಮ್ಮ ಸರ್ಕಾರದ ಮುಖ್ಯಮಂತ್ರಿಗಳು, ಮಹಾರಾಷ್ಟ್ರ ಮುಖ್ಯಮಂತ್ರಿಗಳೊಡನೆ ಚರ್ಚೆ ಮಾಡಿದರು.ಇಲ್ಲಿಂದ ಅಧಿಕೃತವಾಗಿ ಪತ್ರ ಹೋಯಿತು. ಸನ್ಮಾನ್ಯ ಬಸವರಾಜ ಬೊಮ್ಮಾಯಿ ಯವರ ನೇತೃತ್ವದಲ್ಲಿ ಒಂದು ನಿಯೋಗ ಕೂಡ ಹೋಗಿ ಬಂದಿತು. ಕನಿಷ್ಠ 5 ಟಿ.ಎಂ.ಸಿ. ನೀರು ಬೇಕು ಎಂದಾಗ 2 ಟಿ.ಎಂ.ಸಿ., 1.9 ಟಿ.ಎಂ.ಸಿ. ನೀರನ್ನು ಬಿಡುತ್ತೇವೆಂದು ಮಹಾರಾಷ್ಟ್ರ ಸರ್ಕಾರ ಒಪ್ಪಿಕೊಂಡರೂ ನೀರು ಬಿಡುವಾಗ ಬಹಳ ಮೀನಾಮೇಷ ಮಾಡಿದರು. ಆ ನೀರು ಬಿಡುವಾಗ ಎಷ್ಟು ದುಡ್ಡನ್ನು ತುಂಬಬೇಕು, ಅದನ್ನು ಕಟ್ಟುತ್ತೇವೆಂದು commitment ಪತ್ರ ಕೂಡಾ ನಮ್ಮ ಸರ್ಕಾರದಿಂದ ಹೋಯಿತು. ಆಗ ನಮ್ಮ ಅನುಭವ ಏನೆಂದರೆ ಎಲ್ಲಿ 1.9 ಟಿ.ಎಂ.ಸಿ. ನೀರು ಬರಬೇಕಿತ್ತು ಅದನ್ನು ವಿಳಂಬ ಮಾಡಿ ಸ್ವಲ್ಪ ಸ್ವಲ್ಪವಾಗಿ ಬಿಟ್ಟಿದ್ದು ಕೇವಲ 1.4 ಟಿ.ಎಂ.ಸಿ.

ನೀರು. ಅದಕ್ಕೆ ಅವರು ಕೊಡುವ ಕಾರಣವೇನೆಂದರೆ, 30%–40% ನೀರು evaporation ಆಗುತ್ತಿದೆ. ಬಾಷ್ಪಿ ಭವನದಲ್ಲಿರುವ ನೀರು ಹೋಗುವುದರರಿಂದ loss ಆಗುತ್ತಿದೆ ಎಂದು 1.4 ಟಿ.ಎಂ.ಸಿ. ನೀರನ್ನು ಮಾತ್ರ ಬಿಟ್ಟರು. ಕೋಟ್ಯಾಂತರ ರೂ. ಸರ್ಕಾರ ಮಹಾರಾಷ್ಟ್ರ ಸರ್ಕಾರಕ್ಕೆ ಕಟ್ಟಲಿಕ್ಕೆ ತಯಾರಾಗುತ್ತದೆ, ದುಡ್ಡು ಕಟ್ಟುತ್ತೇವೆ. ಆದರೆ ಸಕಾಲಕ್ಕೆ ಮಹಾರಾಷ್ಟ್ರ ಸರ್ಕಾರ ನೀರು ಬಿಟ್ಟ ಉದಾಹರಣೆ ನಮ್ಮ ರಾಜ್ಯದ ಇತಿಹಾಸದಲ್ಲಿ ಇಲ್ಲ. ಜಮಖಂಡಿತಾಲ್ಲೂಕಿನಲ್ಲಿವಿಶೇಷವಾಗಿ ನನ್ನ ಕ್ಷೇತ್ರದ ಸ್ಥಿತಿ ಏನೆಂದರೆ, ಮಹಾರಾಷ್ಟ್ರದಿಂದ ನೀರು ತಂದರೂ ಕೂಡ ಹಿಪ್ಪರಗಿ ಬ್ಯಾರೇಜ್‌ವರೆಗೆ ಮಾತ್ರ ನೀರು ಬರುತ್ತದೆ. ಹಿಪ್ಪರಗಿ ಬ್ಯಾರೇಜಿಗೆ ಯಾವುದೇ ಗೇಟ್ ಇಲ್ಲ. ಬ್ಯಾರೇಜ್ ತುಂಬುವವರೆಗೆ ಒಂದು ಹನಿ ಕೂಡ ನೀರು ಬರುವುದಿಲ್ಲ. ಅಲ್ಲಿನ ಭೌಗೋಳಿಕ ಪರಿಸ್ಥಿತಿ ಹೇಗಿದೆ ಎಂದರೆ, ಮಹಾರಾಷ್ಟ್ರದಿಂದ ಅಥವಾ ಬೇರೆ ಮೂಲಗಳಿಂದ ನೀರು ತಂದರೂ ಮೇಲೆ ಬರುವಂತಹ ಸನ್ಮಾನ್ಯ ಲಕ್ಷ್ಮಣ ಸವದಿ ರವರು ಹಾಗೂ ಸನ್ಮಾನ್ಯ ಸಿದ್ದು ಸವದಿ ರವರ ಕ್ಷೇತ್ರದಲ್ಲಿ ಬರುತ್ತದೆ. ಅವರಿಬ್ಬರ ಕೊಡಗಳು ತುಂಬಿದಾಗ ಮಾತ್ರ ನಂತರದಲ್ಲಿ ಜಮಖಂಡಿ ವಿಧಾನಸಭಾ ಕ್ಷೇತ್ರಕ್ಕೆ ನೀರು ಬರುತ್ತದೆ. ಆದುದರಿಂದ ಈ ಬಾರಿ 1.4 ಟಿ.ಎಂ.ಸಿ ನೀರು ಬಿಟ್ಟರೂ ಕೂಡ ಜಮಖಂಡಿ ಕ್ಷೇತ್ರದಲ್ಲಿ ಕೆಳಗಿನ ಗಲಗಲಿ ಬ್ಯಾರೇಜ್‌ವರೆಗೆ ನೀರು ಬರುವುದಿಲ್ಲ. ಅಲ್ಲಿರುವ ಕಬ್ಬು ಬೆಳೆಗಾರರುಬಹಳ ದೊಡ್ಡ ಪ್ರಮಾಣದಲ್ಲಿ ಕಬ್ಬು ಬೆಳೆಯನ್ನು ಬೆಳೆಯುತ್ತಾರೆ. ಈ ಭಾಗದಲ್ಲಿ ಬೆಳೆದ ಕಬ್ಬು ಅತ್ಯಂತ ಶ್ರೇಷ್ಠ ಗುಣಮಟ್ಟದ ಕಬ್ಬು. Highest ಸಕ್ಕರೆ ಇಳುವರಿ ಕೊಡುವ ಕಬ್ಬಿನ ಜಾತಿ. ಹೀಗಾಗಿ ಅಲ್ಲಿ ಪ್ರತಿವರ್ಷ ಬರುವ ಸಮಸ್ಯೆ ಇನ್ನೊಮ್ಮೆ ಹೀಗೆ ಆಗಬಾರದು. ನಮ್ಮ ಬೇಡಿಕೆ ಏನೆಂದರೆ, ಹಿಪ್ಪರಗಿಯಿಂದ ಗಲಗಲಿ ಬ್ಯಾರೇಜ್‌ವರೆಗೆ ಸುಮಾರು 50–60ಕಿ.ಮೀ ಅಂತರದ ಕೃಷ್ಣ ನದಿಯ ಎಡ ಹಾಗೂ ಬಲ ಭಾಗದಲ್ಲಿ ಲಕ್ಷಾಂತರ ಎಕರೆ ಜಮೀನಿನಲ್ಲಿ ಬೆಳೆದಿರುವ ಕಬ್ಬು ಸಂಪೂರ್ಣ ಒಣಗಿ ಹೋಗಿರೈತ ಬೀದಿ ಪಾಲಾಗಿದ್ದಾನೆ. ಆದ್ದರಿಂದ ಪ್ರತಿ ವರ್ಷ ಬೇಸಿಗೆಯಲ್ಲಿ ನೀರಿಗೆ ತೊಂದರೆ ಬಾರದಂತೆ ಏನಾದರೂ ಶಾಶ್ವತವಾದ ವ್ಯವಸ್ಥೆ ಮಾಡುವುದು ಬಹಳ ಅವಶ್ಯಕವೆಂದು ಜನರು ಚರ್ಚೆ ಮಾಡುತ್ತಿದ್ದಾರೆ. ಇಂದು ಸರ್ಕಾರದ ಮುಂದೆ ಇರುವ ವಿಷಯವೆಂದರೆ, ಬೀಳಗಿ ತಾಲ್ಲೂಕಿನ ಗಲಗಲಿ ಹತ್ತಿರ ಇರುವ ಬ್ಯಾರೇಜ್‌ಗೆ 2 ಮೀಟರ್ ಎತ್ತರ ಮಾಡಿದರೆ ಸುಮಾರು ಇನ್ನೂ 1 ಟಿ.ಎಂ.ಸಿ ಹೆಚ್ಚು ನೀರು ಹಿಡಿದುಕೊಳ್ಳಲು ಸಾಧ್ಯವಿದೆ. ಈ ಹಿಂದೆ ಇರುವ ನೀರನ್ನು ಉಪಯೋಗ ಮಾಡಿಕೊಂಡು ಆ ಭಾಗದ ರೈತರು ಕಬ್ಬಿನ

ಬೆಳೆಯನ್ನು ಯಶಸ್ವಿಯಾಗಿ ಬೆಳೆಯಬಹುದು. ಹೀಗಾಗಿ ನಾನು ಸನ್ಮಾನ್ಯ ಮುಖ್ಯಮಂತ್ರಿಗಳನ್ನು ಹಾಗೂ ನೀರಾವರಿ ಮಂತ್ರಿಗಳಿಗೆ ಮನವಿ ಮಾಡಿದಾಗ ಅದಕ್ಕೊಂದು estimate ಮಾಡಿ ಯೋಜನೆ ಮಾಡಬೇಕೆನ್ನುವ ಬಗ್ಗೆ ಚರ್ಚೆಯಾಯಿತು. ನನಗೆ ತಿಳಿದ ಮಟ್ಟಿಗೆ ಸುಮಾರು 4 ಕೋಟಿ 25 ಲಕ್ಷ ರೂ ಖರ್ಚು ಮಾಡಿ ಗಲಗಲಿ ಬ್ಯಾರೇಜನ್ನು 2 ಮೀಟರ್ ಎತ್ತರಿಸುವ ಕ್ರಮವನ್ನು ತಕ್ಷಣ ಸರ್ಕಾರ ಕೈಕೊಂಡರೆ ಮುಂದಿನ ಯಾವುದೇ ಸಂದರ್ಭದಲ್ಲಿ ಬೇಸಿಗೆಯಲ್ಲಿ ರೈತನ ಜಮೀನಿನಲ್ಲಿ ಬೆಳೆದ ಕಬ್ಬು ಹಾಗೂ ಇತರ ಬೆಳೆಗಳನ್ನು ಉಳಿಸಿಕೊಳ್ಳಲು ಸಾಧ್ಯ ಆಗುತ್ತದೆ. ಆದುದರಿಂದ ಆ ಭಾಗದ ಜನ ಇವತ್ತು ತುದಿಗಾಲಿನಲ್ಲಿ ನಿಂತು ವಿಧಾನಸಭಾ ಕಾರ್ಯಕಲಾಪಗಳನ್ನು ಪತ್ರಿಕೆಗಳಲ್ಲಿ ಓದುತ್ತಾರೆ, ದೂರದರ್ಶನದಲ್ಲಿ ನೋಡುತ್ತಾರೆ. ಆದುದರಿಂದ ಗಲಗಲಿ ಬ್ಯಾರೇಜನ್ನು 2 ಮೀಟರ್ ಎತ್ತರಿಸುವ ಕ್ರಮವನ್ನು ಇಂದು ಸನ್ಮಾನ್ಯ ಮುಖ್ಯಮಂತ್ರಿಗಳು, ಉಪ ಮುಖ್ಯಮಂತ್ರಿಗಳುಯೋಚನೆ ಮಾಡಿ ಒಂದು ಘೋಷಣೆ ಮಾಡಿದರೆ ಬಹಳ ಸಂತೋಷವಾಗುತ್ತದೆ ಮತ್ತು ಶಾಶ್ವತವಾದ ಪರಿಹಾರ ಆ ಭಾಗದ ಜನರಿಗೆ ಕೊಟ್ಟಂತಾಗುತ್ತದೆ. ಆದುದರಿಂದ ಈ ಸಂದರ್ಭದಲ್ಲಿ ಸರ್ಕಾರಕ್ಕೆ ವಿಶೇಷವಾಗಿ ಮನವಿ ಮಾಡುತ್ತೇನೆ. ಈ ಗಲಗಲಿ ಬ್ಯಾರೇಜನ್ನು 2 ಮೀಟರ್ ಎತ್ತರಿಸುವ ಕ್ರಮವನ್ನು ಅತ್ಯಂತ ಬೇಗನೆಎತ್ತಿಕೊಳ್ಳುವ ಕೆಲಸ ಆಗಬೇಕು. ಆ ಭಾಗದಲ್ಲಿ ಬಹಳ ಪ್ರಮಾಣದಲ್ಲಿ ಕಬ್ಬು ಬೆಳೆಗಾರರು ಇದ್ದಾರೆ. ಕಬ್ಬು ಬೆಳೆಗಾರರು ಈ ವರ್ಷ ಎದುರಿಸಿರುವ ಸಮಸ್ಯೆ ಬಹಳ ದೊಡ್ಡ ಸಮಸ್ಯೆಯಾಗಿದೆ. ಅವರು ಸಂಪೂರ್ಣವಾಗಿ ಹತಾಶರಾಗಿದ್ದಾರೆ. ದಕ್ಷಿಣ ಭಾರತದಲ್ಲಿ ವಿಶೇಷವಾಗಿ ತೊಗರಿ ಬೆಳೆ ನಷ್ಟವಾದಾಗ, ಆಂಧ್ರ ಮತ್ತು ಮಹಾರಾಷ್ಟ್ರದಲ್ಲಿ ಹತ್ತಿ ಬೆಳೆ ನಷ್ಟವಾದಾಗ ರೈತರು ದೊಡ್ಡ ಸಂಖ್ಯೆಯಲ್ಲಿ ಆತ್ಮಹತ್ಯೆಗೆ ಶರಣಾಗಿದ್ದನ್ನು ನಾವು ಮರೆಯುವುದಿಲ್ಲ. ಆದರೆ ಇವತ್ತು ಕೂಡ ಕಬ್ಬು ಬೆಳೆಗಾರರು ಸಮಸ್ಯೆಯನ್ನು ನೋಡಿದರೆ ಅವರು ಮಾಡಿರುವಂತಹ ಸಾಲ, ತಂದಿರುವಂತಹ ಗೊಬ್ಬರ ಮತ್ತು ಅವರು ಪಟ್ಟಿರುವಂತಹ ಶ್ರಮ ನೋಡಿದಾಗ, ಕಬ್ಬು ಬೆಳೆ ಸಂಪೂರ್ಣವಾಗಿ ಒಣಗಿ ಹೋಗಿರುವುದರಿಂದ ಮತ್ತು ಬೆಳೆ ಸಾಲವನ್ನು ವಾಪಸ್ಸು ಕಟ್ಟದ್ದರಿಂದ ಅವರು ಬೀದಿ ಪಾಲಾಗುವಂತಹ ಸಂಪೂರ್ಣ ಲಕ್ಷಣಗಳು ಇವೆ. ಆದುದರಿಂದ ಕಬ್ಬು ಬೆಳೆಗಾರರಿಗೂ ಆತ್ಮಹತ್ಯೆ ಸಮಸ್ಯೆ ಬರಬಾರದು ಎನ್ನುವಂತಹ ಹಿನ್ನೆಲೆಯಲ್ಲಿ ಇವತ್ತು ಚರ್ಚೆಯಾಗಬೇಕಿದೆ. ನಾವೆಲ್ಲರೂ ಪಕ್ಷಭೇದವನ್ನು ಮರೆತು ಸಂಕಷ್ಟದಲ್ಲಿರುವ ಕಬ್ಬು ಬೆಳೆಗಾರರ ಬಗ್ಗೆ ವಿಶೇಷವಾದಂತಹ

ಕಾರ್ಯಕ್ರಮವನ್ನು ಹಾಕಿಕೊಂಡು ಅವರನ್ನು ಆರ್ಥಿಕವಾಗಿ ಮೇಲೆತ್ತುವಂತಹ ಪ್ರಯತ್ನವಾಗಬೇಕು. ಈಗಾಗಲೇ ರೈತರು ಮಾಡಿರುವಂತಹ ಬೆಳೆ ಸಾಲವನ್ನು ಮನ್ನಾ ಮಾಡಬೇಕೆಂದು ಚರ್ಚೆಯಾಗಿದೆ. ಸಾಲ ಮನ್ನಾ ಮಾಡುವಂತಹ ಹಿನ್ನೆಲೆಯಲ್ಲಿ ನಮ್ಮ ಮಾನ್ಯ ಮುಖ್ಯಮಂತ್ರಿಗಳು ಮತ್ತು ಹಿರಿಯರೆಲ್ಲ ತಮ್ಮ ಅಪೇಕ್ಷೆಯನ್ನು ವ್ಯಕ್ತ ಮಾಡಿದ್ದಾರೆ. ಈಗಿರುವಂತಹ ಸಾಲವನ್ನು ಮನ್ನಾಮಾಡುವುದು ಅಷ್ಟೇ ಅಲ್ಲ, ರೈತ ಒಣಗಿರುವಂತಹ ಕಬ್ಬನ್ನು ತೆಗೆದು ಜಮೀನನ್ನು ಸಿದ್ದಪಡಿಸಿ ಹೊರಗಿನಿಂದ ಬೀಜ ತಂದು ಮತ್ತೊಮ್ಮೆ plantation ಮಾಡಬೇಕೆಂದರೆ ಹಣ ಬೇಕಾಗುತ್ತದೆ. ಹೀಗಾಗಿ ಹೆಚ್ಚುವರಿ ಸಾಲವನ್ನು ಕೂಡ ಕೊಡುವಂತಹ ವ್ಯವಸ್ಥೆಯನ್ನು ಸರ್ಕಾರ ಮಾಡಿದರೆ ಆ ಕಬ್ಬು ಬೆಳೆಗಾರರಿಗೆ ತಮ್ಮ ಜೀವನದಲ್ಲಿ ಏನಾದರೂ ಹೊಸ ಬೆಳಕನ್ನು ಕಾಣುವಂತಹ ಅವಕಾಶ ಆಗುತ್ತದೆ. ಆದರೆ ಇವತ್ತು ಕೆಲವು ಕಡೆ ನಮ್ಮ ಕಾಂಗ್ರೆಸ್ಸಿನ ಸ್ನೇಹಿತರು ಜಮಖಂಡಿಯಲ್ಲಿ ಧರಣಿ ಸತ್ಯಾಗ್ರಹ ಮಾಡುತ್ತಿದ್ದಾರೆ. ಮಾನ್ಯ ವಿರೋಧ ಪಕ್ಷದ ನಾಯಕರು ಈ ವಿಚಾರ ಉಲ್ಲೇಖ ಮಾಡಿದರು. ಇದು ಕೇವಲ ಜಮಖಂಡಿ ಸಮಸ್ಯೆಯಲ್ಲ, ಇದು ಕರ್ನಾಟಕ ರಾಜ್ಯದ ಸಮಸ್ಯೆ. ಇಡೀ ರಾಜ್ಯದಲ್ಲಿರುವಂತಹ ಬರಗಾಲದ ವಿಚಾರದಲ್ಲಿ ಇಂತಹ ಚರ್ಚೆ ನಡೆದಾಗ, ಇಡೀ ರೈತ ಕುಲವನ್ನು; ಯಾವ ರೀತಿ ಉಳಿಸಬೇಕೆನ್ನುವ ಚರ್ಚೆ ನಡೆದಾಗ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಏನಿವೆ,. ಈ ಎರಡೂ ಸರ್ಕಾರಗಳ ಜವಾಬ್ದಾರಿ ಇರುತ್ತದೆ. ನಾವೆಲ್ಲಾ ರಾಷ್ಟ್ರೀಯ ಪಕ್ಷಗಳು ಒಂದಾಗಿ ರೈತರ ಹಿತ ಕಾಪಾಡುವಲ್ಲಿ ಸರ್ಕಾರಕ್ಕೆ ಸಲಹೆ ಕೊಟ್ಟು, ಸಂಪೂರ್ಣ ಸಹಕಾರ ಕೊಟ್ಟು ಕ್ರಿಯಾಯೋಜನೆಯನ್ನು ಜಾರಿಗೆ ತರಬೇಕಾಗುತ್ತದೆ. ಆದರೆ ಇವತ್ತು ಅಲ್ಲಿ ರಾಜಕೀಯ ಉದ್ದೇಶಕ್ಕಾಗಿ ಧರಣಿ ಮಾಡುವುದು ಸರಿಯಲ್ಲವೆನ್ನುವ ಭಾವನೆಯನ್ನು ವ್ಯಕ್ತಪಡಿಸುತ್ತಾ, ಈ ಭಾಗ ಮತ್ತು ಆ ಭಾಗದಲ್ಲಿರುವಂತಹ 126 ತಾಲ್ಲೂಕಿನ ರೈತರಿಗೆ ವಿಶೇಷವಾದ ವ್ಯವಸ್ಥೆಗಳಾಗಬೇಕು. ಶುದ್ಧ ಕುಡಿಯುವ ನೀರಿನ ಕಾರ್ಯಕ್ರಮವನ್ನು ಜಾರಿಗೆ ತರಬೇಕು. ರೈತರು ಮಾಡಿದಂತಹ ಸಾಲ ಸಂಪೂರ್ಣವಾಗಿ ಮನ್ನಾ ಮಾಡಿ ಅವರಿಗೆ ಹೊಸ ಸಾಲದ ವ್ಯವಸ್ಥೆಯನ್ನು ಮಾಡುವುದರ ಮೂಲಕ ಅವರ ಜೀವನಕ್ಕೆ ಹೊಸ ಬೆಳಕನ್ನು ಕೊಡಬೇಕು ಎನ್ನುವಂತಹ ವಿನಂತಿಯನ್ನು ತಮ್ಮ ಮೂಲಕ ಸರ್ಕಾರಕ್ಕೆ ಮಾಡಿ ನನ್ನ ಮಾತನ್ನು ಮುಗಿಸುತ್ತೇನೆ.

8. ವಿತ್ತೀಯ ಕಾರ್ಯಕಲಾಪಗಳು.

2012–13ನೇ ಸಾಲಿನ ಅನುದಾನ ಬೇಡಿಕೆಗಳ ಮಂಡನೆ